

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 27 ಜುಲೈ-ಸೆಪ್ಟೆಂಬರ್ 2014 ರೂ. 10/= ಸಂಚಿಕೆ 02

## ದೀಪದುರ್ಗಾ ನಮಸ್ಕಾರ





## ಮಕ್ಕಳೊಂದಿಗೊಂದು ಸಂಜೆ





## ಗಣೇಶೋತ್ಸವ



**ಗಮನಿಸಿ :**

'ಎಪಿಲ್' 2014 - 1.11.2014

ತುಳಸೀ ಸಂಕೀರ್ತನೆ - 2.11.2014

ಒಂದು ದಿನದ ಪ್ರವಾಸ - 25.12.2014

With best compliments from :

# TEDMAG
# ENGINEERING & MANAGEMENT CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 27 ಸಂಚಿಕೆ 02

ಅಧ್ಯಕ್ಷರು :
ಪಿ.ಎಸ್. ಬಾಗಿಲ್ತಾಯ

ಕಾರ್ಯದರ್ಶಿ :
ವೈ. ರಾಧಾಕೃಷ್ಣ

ಸಂಪಾದಕರು :
ಎಸ್. ಹರಿದಾಸ ಉಪಾಧ್ಯ


ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಎಂ. ಸತ್ಯನಾರಾಯಣ ಭಟ್
ಬಿ. ರಾಮದಾಸ ತಂತ್ರಿ
ಕೆ.ಎನ್. ಅಡಿಗ
ಡಿ. ಶರತ್ ಕುಮಾರ ಭಟ್
ರಂಜಿತ್ ಯಡಪಾಡಿತ್ತಾಯ
ಟಿ.ಎಸ್. ನಾಗರಾಜ ಉಪಾಧ್ಯಾಯ
ವೈ. ಜಯಂತರಾವ್

ಸಲಹೆಗಾರರು :
ಶ್ರೀಮತಿ ವಿಜಯಲಕ್ಷ್ಮಿ ಭಟ್

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ
ಮಟ್ಟಿ ರಾಮಚಂದ್ರ ರಾವ್

ವಿಳಾಸ :
**ಆನಂದ ಬಳಗ**
ಜೀವನ್ ಬಿಲ್ಡಿಂಗ್
11, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001
ಟೆಲಿಫ್ಯಾಕ್ಸ್ : 41138879

Website:
www.anandabalaga.org



# ಅಧ್ಯಕ್ಷರ ಮಾತು

ಸಹೃದಯ ಸದಸ್ಯರೇ,

ಶ್ರೀ ಕೃಷ್ಣಜನ್ಮಾಷ್ಟಮಿ, ಗಣೇಶೋತ್ಸವ, ಶರನ್ನವರಾತ್ರಿ, ದೀಪಾವಳಿ ಹೀಗೆ ಹಲವು ಹಬ್ಬಗಳ ಸಾಲು ಈ ಅವಧಿಯಲ್ಲಿ ಬಂದು ಜನರನ್ನು ಹರ್ಷೋತ್ಸಾಹದಲ್ಲಿ ಮುಳುಗಿಸುತ್ತವೆ. ಆನಂದ ಬಳಗದ ಎಲ್ಲಾ ಸದಸ್ಯರಿಗೂ ಹಾಗೂ ಭೃಗುವಾಣಿಯ ಎಲ್ಲಾ ಓದುಗರಿಗೂ ನಮ್ಮ ಶುಭಾಶಯಗಳು.

ಹಬ್ಬಗಳ ಆಚರಣೆ ಆಧ್ಯಾತ್ಮಿಕ ನೆಲೆಗೆ ಒಯ್ಯುವಂತಿರಬೇಕು. ಜೀವನದ ಮೌಲ್ಯಗಳನ್ನು ನೆನಪಿಸುವಂತಿರಬೇಕು. ಪ್ರಕೃತಿಯೊಡನೆ ಕೂಡಿ ಬಾಳುವುದಕ್ಕೆ ಒತ್ತು ನೀಡುವಂತಿರಬೇಕು. ಪ್ರಕೃತಿದತ್ತವಾದ ಸಂಪನ್ಮೂಲಗಳನ್ನು ಸಂರಕ್ಷಿಸುವಂತಿರಬೇಕೆ ವಿನಹಾ ಅದರ ನಾಶದತ್ತ ಒಯ್ಯುವಂತಿರಬಾರದು. ಇದರಿಂದಾಗಿಯೇ ಮೃತ್ತಿಕಾಮೂರ್ತಿಗಳ ಉಪಯೋಗ, ಸಿಡಿಮದ್ದುಗಳ ನಿಷೇಧ ಇತ್ಯಾದಿಗಳ ಬಗ್ಗೆ ನಾವು ಈಗ ತುಸು ಹೆಚ್ಚಿನ ಒತ್ತು ನೀಡುವ ಕಾಲಬಂದಿದೆ. ಇವುಗಳು ಕೇವಲ ಘೋಷಣೆಗಳಿಗೆ ಸೀಮಿತವಾಗಿರದೆ ಆಚರಣೆಯಲ್ಲಿ ತೋರಿಬರುವಂತಿರಬೇಕು. ಈ ಸಂದರ್ಭದಲ್ಲಿ ದೇಶದಲ್ಲಿ ನಡೆಯುತ್ತಿರುವ ಸ್ವಚ್ಛತಾ ಆಂದೋಲನ ತುಂಬಾ ಪ್ರಸ್ತುತವೆನಿಸುತ್ತದೆ. ಆರ್ಥಿಕ ಅಭಿವೃದ್ಧಿಯೊಂದೇ ನಾಗರಿಕತೆಯ ಸೂಚ್ಯಂಕವಾಗಬಾರದು ಅದರೊಂದಿಗೆ ಸಾಮಾಜಿಕ ಜವಾಬ್ದಾರಿ ಹಾಗೂ ನೈತಿಕ ಮೌಲ್ಯವೂ ಅಷ್ಟೇ ಮುಖ್ಯ. ಈ ಪ್ರಕೃತಿ ನಮ್ಮ ಸ್ವಂತ ಸೊತ್ತಲ್ಲ; ನಮ್ಮ ಮುಂದಿನ ಪೀಳಿಗೆಯಿಂದ ಎರವಲು ಪಡೆದಿದ್ದು ಎಂಬ ಮಾತು ಕಟು ಸತ್ಯವೆನಿಸುತ್ತದೆ. ಈ ದಿಸೆಯಲ್ಲಿ ನಾವು ತುಸು ಹೆಚ್ಚಿನ ಗಮನ ಹರಿಸುವುದು ಅಗತ್ಯವೆನಿಸುತ್ತದೆ.

ಆನಂದ ಬಳಗವು ತನ್ನ ಸದಸ್ಯರ ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ರೂಪಿಸುತ್ತ ಬಂದಿರುವುದು ತಮಗೆಲ್ಲಾ ತಿಳಿದ ವಿಷಯವೇ. ಈ ಮಾತಿಗೆ ಪೂರಕ ಎನ್ನುವಂತೆ ಈ ವರ್ಷ ಇನ್ನೊಂದು ವಿನೂತನ ಪ್ರಯತ್ನಕ್ಕೆ ಕೈ ಹಾಕಿದೆ. ಅದೇ ಆನಂದ ಬಳಗ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯ. ಬಳಗದ ಉತ್ಸಾಹೀ ಯುವಕರು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುತ್ತಾರೆ ಎಂಬ ನಂಬಿಕೆ ನನ್ನದು. ಈ ಕಾರ್ಯಕ್ರಮವು ಇನ್ನೂ ಅನೇಕ ವಿಶಿಷ್ಟ ಕಾರ್ಯಕ್ರಮಗಳಿಗೆ ನಾಂದಿಯಾಗಬೇಕು. ಈ ಬಗ್ಗೆ ಸದಸ್ಯರು ಹೆಚ್ಚಿನ ಆಸಕ್ತಿಯನ್ನು ತೋರಿಸಬೇಕೆಂಬುದು ನನ್ನ ಬಯಕೆ.

ಮುಂಬರುವ ದೀಪಾವಳಿ, ಆಂಗ್ಲ ನೂತನ ವರ್ಷಗಳು ತಮಗೆಲ್ಲಾ ಸಂತಸವನ್ನು ತರಲಿ ಎಂದು ಹಾರೈಸುತ್ತೇನೆ.

**ಪಿ.ಎಸ್.ಬಾಗಿಲ್ತಾಯ**
ಅಧ್ಯಕ್ಷರು, ಆನಂದಬಳಗ

## Executive Committee Members : 2014-2016

| Name | Contact Numbers |
|---|---|
| ***President*** | |
| P.S. Bagilthaya | 25259699 / 98440 83582 |
| ***Vice Presidents*** | |
| Smt. Geetha Vasudeva Rao | 22257111 / 98807 99997 |
| B. Ramachandra Upadhya | 22235533 / 99024 00072 |
| ***Secretary*** | |
| Y. Radhakrishna | 98440 58851 |
| ***Treasurer*** | |
| M.K. Gurumurthy | 22246304 / 98440 22692 |
| ***Adviser Committee*** | |
| Smt. Vijayalakshmi Bhat S. | 98441 52107 |
| ***Convener, Cultural Wing*** | |
| Dr. Veena Sharath | 99860 80271 |
| ***Convener, Religious Wing*** | |
| Jayanth Rao Y. | 23128448 / 94482 74519 |
| ***Convener, Youth Wing*** | |
| Sandeep A Rao | 98450 98150 |
| ***Convener, Edn. Assistance Program*** | |
| Sharat Chandra S.N. | 41138879 / 98860 40271 |
| ***Convener, Public Relations Wing*** | |
| Vishnumurthy P.N. Kuddannaye | 94803 05426 |
| ***Editor, Brugu Vani*** | |
| Haridasa S Upadhya | 26633867 / 94480 01892 |
| ***Convener, Membership Devt. Wing*** | |
| Adiga K.N. | 26390198 / 94488 48154 |
| ***Community Services*** | |
| Sathyaprakash Upadhya T.N | 98860 36338 |
| ***Members*** | |
| U.B. Venkatesh | 64530579 / 98453 37333 |
| Kasturi Aithal | 23228987 / 98803 98353 |
| Geetha P.R. Rao | 65968995 / 99459 38411 |
| ***Co-opted Members*** | |
| Dr. Mrs. Veena Sharath | 99860 80271 |
| Krishna Murthy U.V. | 23611133 / 26703072 |
| M. Bhaskar Rao | 2670957 / 26695752 |
| Sri T.N.S. Upadhya | 99860 36338 |
| H. Ramesh Bhat | |
| ***Past Presidents*** | |
| K.V.M. Yerkadithaya | 26631994 / 26633992 |
| S.T.R. Madi | 26583779 / 99029 77948 |
| U.A.P. Ballal | 22267609 |
| Padubidri Raghavendra Rao | 23348749 / 22872705 |
| K.Vasudeva Rao | 22257111 / 98450 57111 |
| ***Special Invitees*** | |
| M. Sathyanarayana Bhat | 26721269 / 99458 02607 |
| P.C. Rao | 22353749 / 98444 94630 |
| M. Mohan Rao | 98453 79955 |
| Jayaprakash S Mady | 98450 09669 |
| P. Ramdas | 98450 25896 |
| Smt. Sudha M. Rao | 2562436 / 99011 27738 |
| N.R. Narayana Rao | 22391380 |

## ಒಳಪುಟಗಳಲ್ಲಿ. . .



| | |
|---|---|
| ಅಧ್ಯಕ್ಷರ ಮಾತು | 1 |
| ಪ್ರಸೀದ ತುಳಸೀ ದೇವಿ ಪ್ರಸೀದ ಹರಿವಲ್ಲಭೇ | 4 |
| ವಿಜೃಂಭಣೆಯಿಂದ ನಡೆದ ದುರ್ಗಾ ನಮಸ್ಕಾರ | 5 |
| ಮಕ್ಕಳೊಂದಿಗೊಂದು ಸಂಜೆ ಮತ್ತು ಪ್ರತಿಭಾ ಪುರಸ್ಕಾರ | 7 |
| ಮೋಡಿ ಮಾಡಿದ ಭೂತಾನ್ | 8 |
| ಉಡುಪಿಯ ಶ್ರೀಕೃಷ್ಣ - ಸಂಗೀತ ಪ್ರಿಯ | 10 |
| ಮಮತೆಯ ಮಾತೆಗೆ ನಮನ | 13 |
| ವದಂತಿಗಳು | 15 |
| ಗಣೇಶೋತ್ಸವ 2014 | 16 |
| ಆನಂದ ಬಳಗದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ವರದಿ | 17 |
| ಶಿಸ್ತಿನ ಸಿಪಾಯಿ - ಭೂತಾನ್ ರಾಷ್ಟ್ರ | 18 |
| ನಮ್ಮ ಭವ್ಯ ಪರಂಪರೆ | 20 |
| ಆಚಾರ-ವಿಚಾರ | 21 |
| ಭಯೋತ್ಪಾದನೆ, ಲೈಂಗಿಕ ಕಿರುಕುಳ, ಅತ್ಯಾಚಾರ ಹಾಗೂ ಕೊಲೆ ವಿರುದ್ಧ ಪರಿಹಾರ ಕ್ರಮ ಮತ್ತು ಯೋಜನೆ | 22 |
| ಹೆತ್ತವರಿಗೆ ಹತ್ತು ಕಿವಿಮಾತು | 24 |
| ನಮ್ಮ ಹೆಮ್ಮೆಯ ಇಸ್ರೋ ಉಪಗ್ರಹ ಕೇಂದ್ರ | 26 |
| ಸುದ್ದಿಸಂಗ್ರಹ | 27 |


### ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ-ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ . ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ-ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :


ಯಸ್. ಯಚ್. ಉಪಾಧ್ಯ
24/25 ಕೆ.ವಿ.ಲೇಔಟ್
4ನೇ ಬ್ಲಾಕ್, ಪೂರ್ವ ಜಯನಗರ
ಬೆಂಗಳೂರು - 560 011
ಮೊ : 94480 01892




# ಸಾಮೂಹಿಕ
# ತುಳಸಿ ಸಂಕೀರ್ತನೆ




ಆನಂದ ಬಳಗದ ಧಾರ್ಮಿಕ ವಿಭಾಗವು ದಿನಾಂಕ 2.11.2014ರ
ಭಾನುವಾರ ಸಂಜೆ 5.00 ರಿಂದ
**ಸಾಮೂಹಿಕ ತುಳಸಿ ಸಂಕೀರ್ತನೆ**ಯನ್ನು ಸಂಯೋಜಿಸಿದೆ.

ಬೆಂಗಳೂರು ಕತ್ತರಿಗುಪ್ಪೆ ಮುಖ್ಯರಸ್ತೆಯಲ್ಲಿರುವ ಶ್ರೀ ಪೂರ್ಣಪ್ರಜ್ಞ, ವಿದ್ಯಾಪೀಠದ ಸಹಯೋಗದಲ್ಲಿ ವಿದ್ಯಾಪೀಠದ ಶ್ರೀ ಕೃಷ್ಣನ ಸನ್ನಿಧಿಯಲ್ಲಿ ನಡೆಯಲಿರುವ ಈ ಅಪರೂಪದ ಕಾರ್ಯಕ್ರಮದಲ್ಲಿ ಬಳಗದ ಸದಸ್ಯರು ಹಾಗೂ ವಿದ್ಯಾಪೀಠದ ವಿದ್ಯಾರ್ಥಿಗಳು ಅಮೋಘವಾದ ಶೈಲಿಯಲ್ಲಿ ತುಳಸೀ ಸಂಕೀರ್ತನೆ ಮಾಡಲಿದ್ದಾರೆ.

ದೀಪಾವಳಿ ಆಚರಣೆಯ ಅಂಗವಾಗಿ ದಶಮಿಯ ಸಾಯಂಕಾಲ ಹಮ್ಮಿಕೊಂಡಿರುವ ಸಂಕೀರ್ತನೆಯಲ್ಲಿ ಪರಿಣತ ಸದಸ್ಯರು ವೈವಿಧ್ಯಮಯ ಶೈಲಿಯಲ್ಲಿ ಸಾಂಪ್ರದಾಯಿಕವಾಗಿ ತುಳಸಿ ಸಂಕೀರ್ತನೆಯನ್ನು ಮಾಡಿ ದೀಪಾವಳಿ ಸಂದರ್ಭಕ್ಕೆ ಹೆಚ್ಚಿನ ಸಂಭ್ರಮವನ್ನು ತರಲಿದ್ದಾರೆ.



ಮಹಾಮಂಗಳಾರತಿ ನಂತರ ವಿಶೇಷ ಫಲಾಹಾರದ ವ್ಯವಸ್ಥೆಯನ್ನು ಮಾಡಲಾಗಿದೆ.
ಬಳಗದ ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ,
ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.




| | | |
|---|---|---|
| **ಪಿ.ಎಸ್. ಬಾಗಲ್ತಾಯ** | **ವೈ. ರಾಧಾಕೃಷ್ಣ** | **ವೈ. ಜಯಂತರಾವ್** |
| ಅಧ್ಯಕ್ಷರು | ಕಾರ್ಯದರ್ಶಿ | ಧಾರ್ಮಿಕ ವಿಭಾಗ ಸಂಚಾಲಕರು |

# ಪ್ರಕಟಣೆ

ಇದೇ ಬರುವ ದಿನಾಂಕ 25.12.2014 ರಂದು ಎಂದಿನಂತೆ ಈ ಬಾರಿಯೂ ಆನಂದ ಬಳಗದ ಸಾಂಸ್ಕೃತಿಕ ವಿಭಾಗದ ವತಿಯಿಂದ ಬಳಗದ ಸದಸ್ಯರು ಹಾಗೂ ಕುಟುಂಬದವರಿಗೆ ಪ್ರೇಕ್ಷಣೀಯ ಸ್ಥಳಗಳಿಗೆ ಒಂದು ದಿನದ ಪ್ರವಾಸವನ್ನು ಏರ್ಪಡಿಸಿದ್ದಾರೆ. ಪ್ರವಾಸದ ಸ್ಥಳ, ವೆಚ್ಚ ಹಾಗೂ ಇತರ ವಿಚಾರಗಳಿಗಾಗಿ ಆಸಕ್ತ ಸದಸ್ಯ ಬಾಂಧವರು ಈ ಕೆಳಗಿನವರನ್ನು ನವಂಬರ್ 20 ರ ದಿನಾಂಕದ ನಂತರ ಸಂಪರ್ಕಿಸಬಹುದು.

**ಶ್ರೀಮತಿ ಗೀತಾ ಪಿ.ಆರ್ ರಾವ್,** ದೂರವಾಣಿ: 99459 38411
**ಶ್ರೀಮತಿ ಸುಧಾ .ಎಂ ರಾವ್,** ದೂರವಾಣಿ: 99011 27738



# ಪ್ರಸೀದ ತುಳಸೀ ದೇವಿ ಪ್ರಸೀದ ಹರಿವಲ್ಲಭೇ

ಕ್ಷೀರ ಸಾಗರ ಮಥನ ಕಾಲದಲ್ಲಿ ಅವತರಿಸಿದ ತುಳಸೀ ಶ್ರೀಹರಿಗೆ ಅತ್ಯಂತ ಪ್ರಿಯಳಾದವಳು. ಬೇರಿನಲ್ಲಿ ಸಕಲ ಪುಣ್ಯತೀರ್ಥಗಳು, ಮಧ್ಯಭಾಗದಲ್ಲಿ ಸಕಲ ದೇವತೆಗಳು, ಮೇಲ್ಭಾಗದಲ್ಲಿ ಸಕಲ ವೇದಗಳು ಮೇಳೈಸಿಕೊಂಡಿರುವ ತುಳಸಿ ವೃಕ್ಷದ ಮಹಿಮೆ ಅಪಾರ. ಹಿಂದೂಧರ್ಮ ಅಥವಾ ಶಾಸ್ತ್ರಗಳಲ್ಲಿ ಅಗ್ರಸ್ಥಾನ ಪಡೆದಿರುವ ತುಳಸಿ, ದೇವರ ಪೂಜೆಗೆ ಮಾತ್ರವಲ್ಲ ಪರಮ ಔಷಧವಾಗಿ ಬಳಕೆಯಾಗುತ್ತದೆ. ''ತುಳಸಿ ಇಲ್ಲದ ಪೂಜೆಗೆ ಹರಿಯು ಒಲ್ಲನು'' ಎಂದು ಪುರಂದರ ದಾಸರು ತುಳಸಿಯ ಮಹತ್ವವನ್ನು ವಿವರಿಸಿದರೆ. ''ಒಂದು ದಳ ಶ್ರೀ ತುಳಸಿ, ಬಿಂದು ಗಂಗೋದಕವು'' ಇಂದಿರಾರಮಣಗೆ ಅರ್ಪಿಸಿದರೆ ಸಾಕು ಕೇಳಿದನ್ನೆಲ್ಲಾ ಕೊಡುವ ತನ್ನ ಭಕ್ತರಿಗೆ ಎಂದು ಮತ್ತೊಂದು ಹಾಡು ತುಳಸಿಯ ಮಹಾತ್ಮೆಯನ್ನು ಕೊಂಡಾಡುತ್ತದೆ.

ಮನೆಯ ಮುಂದೆ ತುಳಸಿಕಟ್ಟೆ ಇರಲೇ ಬೇಕು ಎಂದು ಶಾಸ್ತ್ರ ಹೇಳುತ್ತದೆ. ಬೆಳಿಗ್ಗೆ ಮತ್ತು ಸಾಯಂಕಾಲ ತುಳಸಿಗೆ ಸುತ್ತು ಬರುವುದು ನಮ್ಮವರಿಗೆ ಕಡ್ಡಾಯವಾದರೆ, ಸಂಜೆ ತುಳಸಿಗೆ ದೀಪ ಇಟ್ಟು ನಮಸ್ಕರಿಸುವುದು ಶುಭ ಸಂಪ್ರದಾಯ. ವಿಪುಲವಾದ ಔಷಧೀಯ ಗುಣವುಳ್ಳ ತುಳಸಿ ಸೇರಿರುವುದರಿಂದಲೇ ತೀರ್ಥ ಪ್ರಾಶನಕ್ಕೆ ನಾವು ಬಹಳ ಪ್ರಾಮುಖ್ಯತೆ ನೀಡುತ್ತೇವೆ.

ತುಳಸಿಯಲ್ಲಿ ಪ್ರಮುಖವಾಗಿ ಕಪ್ಪುವರ್ಣದ ಕೃಷ್ಣ ತುಳಸಿ ಮತ್ತು ಬಿಳಿ ವರ್ಣದ ಶ್ರೀ ತುಳಸಿ ಎಂಬ ಎರಡು ಪ್ರಭೇಧಗಳಿದ್ದು, ತುಳಸಿಗೆ ವೈಷ್ಣವಿ ಹರಿಪ್ರಿಯಾ, ವಿಷ್ಣುವಲ್ಲಭ, ಪಾವನಿ, ಸುರವಲ್ಲಿ ಎಂಬ ಹಲವಾರು ಹೆಸರುಗಳೂ ಇವೆ. ಸಸ್ಯ ಸಂಕುಲಗಳಲ್ಲೇ ಹೆಚ್ಚು ಆಮ್ಲಜನಕ ನೀಡಿ ವಾತಾವರಣದಲ್ಲಿನ ಸೂಕ್ಷ್ಮಾಣುಗಳ ತೊಂದರೆಯನ್ನು ನಿವಾರಿಸಿ, ಸೊಳ್ಳೆಗಳನ್ನು ನಿಯಂತ್ರಿಸುವ ಗುಣವನ್ನು ಹೊಂದಿರುವ ಶ್ರೀ ತುಳಸಿ ಮನೆಯಂಗಳದ ಧನ್ವಂತರಿ ಎಂದೇ ಗುರುತಿಸಲ್ಪಟ್ಟಿದೆ.

ದೀಪಾವಳಿಯ ಬಲಿಪಾಡ್ಯದಿಂದ ಉತ್ಥಾನ ದ್ವಾದಶಿ ಯವರೆಗೆ ವಿಶೇಷವಾಗಿ ತುಳಸೀ ಕಟ್ಟೆಯ ಬಳಿ ಪೂಜೆ ಸಂಕೀರ್ತನೆಗಳು ನಡೆಯುತ್ತಿದ್ದು, ಶ್ರೀ ಕೃಷ್ಣ ಜನ್ಮಾಷ್ಟಮಿಯಂದು ತುಳಸೀ ಸನ್ನಿಧಾನದಲ್ಲೇ ಅರ್ಘ್ಯ ಪ್ರದಾನ ಮಾಡಲಾಗುತ್ತದೆ.

ಹೀಗೆ ಭಗವಂತನಿಗೆ ಪ್ರಿಯವಾದ ನಮಗೆಲ್ಲಾ ಅತ್ಯಂತ ಉಪಯುಕ್ತವಾದ ಶ್ರೀ ತುಳಸಿಯ ಕೆಲವು ಪ್ರಯೋಜನಗಳು ಈ ರೀತಿ ಇವೆ:

- ಜ್ವರ: ತುಳಸಿ ರಸವನ್ನು ಜೇನುತುಪ್ಪದೊಂದಿಗೆ ಒಂದು ಚಮಚ ಸೇವಿಸುತ್ತಾ ಬಂದರೆ ಜ್ವರದ ತಾಪ ಇಳಿಯುತ್ತದೆ.
- ನೆಗಡಿ ಕೆಮ್ಮು: ಎರಡು ಎಲೆ ತುಳಸಿ ದಳಗಳನ್ನು ತಿನ್ನುತ್ತಿದ್ದರೆ ಶ್ವಾಸಕೋಶಗಳ ಸೋಂಕು, ಕೆಮ್ಮು, ನೆಗಡಿ ನಿವಾರಣೆ ಯಾಗುವುದು.
- ಜೀರ್ಣಕ್ರಿಯೆ ವೃದ್ಧಿ: ತುಳಸಿ ರಸ ಎರಡು ಗ್ರಾಂ, ಜೇನುತುಪ್ಪದೊಂದಿಗೆ ಕೆಲದಿನಗಳ ಕಾಲ ಸೇವಿಸುತ್ತಾ ಬಂದರೆ ಜೀರ್ಣಶಕ್ತಿ ವೃದ್ಧಿಯಾಗುತ್ತದೆ.
- ಮೂಗು ಕಟ್ಟುವಿಕೆ: ತುಳಸಿ ಎಲೆಗಳನ್ನು ಕೆಂಡದಲ್ಲಿ ಬಾಡಿಸಿ ಮೂಸಿದರೆ ಕಟ್ಟಿದ ಮೂಗು ಸರಾಗವಾಗುತ್ತದೆ.
- ಶೀತ: ತುಳಸಿಯೊಂದಿಗೆ ಮೆಣಸು, ಶುಂಠಿ, ಮಿಶ್ರಣದ ಪುಡಿ ಮಾಡಿ ನೀರಿನಲ್ಲಿ ಒಂದು ಚಮಚ ಹಾಕಿ ಕಷಾಯ ಮಾಡಿ ಕುಡಿದರೆ ಶೀತ ನಿವಾರಣೆಯಾಗುವುದು ಹಾಗೂ ಚಿಕ್ಕಮಕ್ಕಳ ಹೊಟ್ಟೆನೋವು ಹೋಗುವುದು.
- ರೋಗನಿರೋಧಕ ಶಕ್ತಿ: ನಿಯಮಿತವಾದ ತುಳಸಿ ಸೇವನೆ ಯಿಂದ ಸದೃಢವಾಗುತ್ತದೆ ಹಾಗೂ ಪ್ರತಿರೋಧಕ ಶಕ್ತಿ ಹೆಚ್ಚುತ್ತದೆ.
- ಚರ್ಮದ ಸೋಂಕುಗಳು : ಇಸಬು, ತುರಿಕೆ, ಫಂಗಸ್‌ಗಳ ನಿವಾರಣೆಗೆ ತುಳಸಿ ರಸದ ಲೇಪನದಿಂದ ಉಪಶಮನ ಹೊಂದಬಹುದು.
- ಕುಡಿಯುವ ನೀರಿಗೆ ನಾಲ್ಕು ದಳ ತುಳಸಿ ಹಾಕಿದರೆ ನೀರು ಕ್ರಿಮಿರಹಿತವಾಗಿ ರುಚಿಯಾಗುತ್ತದೆ.
- ತುಳಸಿ ಸೇವನೆಯಿಂದ ಬಾಯಿಯ ದುರ್ಗಂಧ ದೂರವಾಗುತ್ತದೆ.
- ತುಳಸಿ ಮಾಲೆಯ ಧಾರಣೆಯಿಂದ ಉತ್ತಮ ಮಾನಸಿಕ ಸ್ಥಿತಿ ಹೊಂದಬಹುದು ಪ್ರಶಾಂತ ಮನಸ್ಸು ಹಾಗೂ ಆಧ್ಯಾತ್ಮದೆಡೆಗೆ ಒಲವು ಮಾಡುತ್ತದೆ.
- ತುಳಸಿ ಸೇವನೆಯಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲ. ತುಳಸಿ ಆರೋಗ್ಯಾಭಿವೃದ್ಧಿಗೆ ಮಾತ್ರವಲ್ಲದೆ ಮನೆಯಲ್ಲಿ ಧಾರ್ಮಿಕ ಹಾಗೂ ದೈವಿಕ ವಾತಾವರಣ ಸೃಷ್ಟಿಸುತ್ತದೆ
- ಮನೆಯ ಮುಂದೆ ತುಳಸಿ ಬೆಳಸಿ ಹಾಗೂ ಬಳಸಿ.

**ಸಂಗ್ರಹ: ವೈ. ಜಯಂತರಾವ್**

# ವಿಜೃಂಭಣೆಯಿಂದ ನಡೆದ ದುರ್ಗಾ ನಮಸ್ಕಾರ

ಬೆಂಗಳೂರಿನ ಜನರಿಗೆ ಅಪರೂಪದಲ್ಲಿ ನೋಡಲು ಸಿಗುವ ದೀಪ ದುರ್ಗಾ ನಮಸ್ಕಾರವನ್ನು ಆನಂದ ಬಳಗದ ಧಾರ್ಮಿಕ ವಿಭಾಗವು ಪ್ರತಿವರ್ಷವೂ ನಡೆಸುತ್ತಾ ಬಂದಿದೆ. ಈ ವರ್ಷದ ದುರ್ಗಾ ನಮಸ್ಕಾರವನ್ನು ದಿನಾಂಕ 27.7.2014ರ ಭಾನುವಾರ ಬನ್ನೇರು ಘಟ್ಟ ರಸ್ತೆಯಲ್ಲಿರುವ ತಮ್ಮದೇ ಆದ ಆನಂದ ಸಭಾಗೃಹದಲ್ಲಿ ಸಂಯೋಜಿಸಲಾಗಿತ್ತು. ಸಂಜೆ 4 ರಿಂದಲೇ ವಿದ್ಯಾಪೀಠದ ವಿದ್ವಾಂಸರಾದ ಶ್ರೀ ವಿಷ್ಣುಮೂರ್ತಿ ಸರಳಾಯರ ಪ್ರಧಾನ ಪೌರೋಹಿತ್ಯದಲ್ಲಿ ಪೂಜೆಗೆ ವಿಶೇಷವಾದ ಮಂಡಲ ಹಾಕುವ ಕಾರ್ಯ ಆರಂಭವಾಗಿದ್ದು, ಸುಮಾರು 7 ಘಂಟೆಗೆ ಮಹಾ ಮಂಗಳಾರತಿ ಆಯಿತು ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್ ಮತ್ತು ಶ್ರೀ ಮತಿ ಮಾಲಿನಿ ಜಯಂತರಾವ್‌ರವರು ಪ್ರಧಾನ ಕರ್ತೃಗಳಾಗಿದ್ದರು.



ಬಳಗದ ಉತ್ಸಾಹೀ ಸದಸ್ಯರು ಮುತುವರ್ಜಿಯಿಂದ ರಚಿಸಿದ್ದ ಆಕರ್ಷಕ ಮಂಟಪ, ಅದಕ್ಕೆ ಇನ್ನೂ ಮೆರುಗು ನೀಡಿದ ಬಣ್ಣದ ದೀಪಾಲಂಕಾರ, ಮಂಟಪದ ಮಧ್ಯೆ ದೇವಿಗೆ ಪ್ರಿಯವಾದ ಕೇಪಳ ಹೂ ಹಾಗೂ ಇನ್ನಿತರ ಹೂಗಳಿಂದ ಸರ್ವಾಲಂಕಾರಗೊಂಡ ದೀಪದಲ್ಲಿ ಆವಾಹನೆಗೊಂಡ ದುರ್ಗಾಮಾತೆಯನ್ನು ಭಕ್ತಾಭಿಮಾನಿಗಳು ಕಣ್ತುಂಬಿಸಿಕೊಂಡರು. ಶ್ರೀ ನರ್ಸಪಯ್ಯ ಮತ್ತು ತಂಡದವರ ಚೆಂಡೆ ವಾದನ ಮಂಗಳಾರತಿ ಸಂದರ್ಭದ ಸಡಗರವನ್ನು ಮತ್ತಷ್ಟು ಹೆಚ್ಚಿಸಿತು. ಬಹುಶಃ ಆನಂದ ಸಭಾಗೃಹದಲ್ಲಿ ನಡೆಯುವ ಬಳಗದ ಸಮಾರಂಭಕ್ಕೆ ಪ್ರಥಮ ಬಾರಿ ಎನ್ನುವಂತೆ ಸುಮಾರು 600-700ರ ಮೇಲ್ಪಟ್ಟು ಸದಸ್ಯರು ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಗಮನಾರ್ಹ.

ಕಲಿಯುಗದಲ್ಲಿ ಕ್ಷಿಪ್ರವಾಗಿ ಫಲವನ್ನು ನೀಡುವ ದುರ್ಗಾ ಮಾತೆಯ ಈ ಆರಾಧನಾಕಾರ್ಯದಲ್ಲಿ ಬಳಗದ ಸದಸ್ಯರು ಸೇವಾ



ಕಾಣಿಕೆ ನೀಡುವುದರ ಮೂಲಕ ಪಾಲ್ಗೊಂಡಿದ್ದು, ಅವರೆಲ್ಲರಿಗೂ ಮೊದಲಿಗೆ ಸೇವಾ ಸಂಕಲ್ಪ ಮಾಡುವ ಅವಕಾಶವನ್ನು ಕಲ್ಪಿಸಲಾಗಿದ್ದು, ಪೂಜಾ ನಂತರ ವಿಶೇಷ ಫಲ-ಪುಷ್ಪ ಪ್ರಸಾದವನ್ನು ನೀಡಲಾಯಿತು.

ಸಾಮಾನ್ಯವಾಗಿ ಆನಂದ ಸಭಾಗೃಹದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಸದಸ್ಯರ ಸಂಖ್ಯೆ ಕಡಿಮೆ ಇರುತ್ತದೆ ಎಂಬ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಸದಸ್ಯರು ಸುಳ್ಳು ಮಾಡಿದ್ದಾರೆ. ಅತ್ಯಧಿಕ ಸಂಖ್ಯೆಯಲ್ಲಿ ಆಗಮಿಸಿ, ಯಶಸ್ವಿಗೊಳಿಸಿರುವುದಕ್ಕೆ ಸದಸ್ಯರನ್ನು ಅಭಿನಂದಿಸಲೇ ಬೇಕು. ಜೊತೆಗೆ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್‌ರವರು ಈ ಧಾರ್ಮಿಕ ಕಾರ್ಯಕ್ರಮದ ಯಶಸ್ಸಿಗಾಗಿ ತೋರಿದ ವಿಶೇಷ ಆಸಕ್ತಿ, ಮುತುವರ್ಜಿ ಹಾಗೂ ಪಟ್ಟ ಶ್ರಮವೂ ಶ್ಲಾಘನೀಯ.

-ಸತ್ಯ

## ಹ್ಯಾಪಿ ಬರ್ತ್‌ಡೇ




"ಸರಸ್ವತೀ ನಮಸ್ತುಭ್ಯಂ"

ಹೆಸರು : **ಮಣೂರು ಶುಭ**

ಜನ್ಮ ದಿನಾಂಕ : **10.7.2009**

ತಂದೆಯ ಹೆಸರು : ಶ್ರೀ ಮಣೂರು ಪ್ರಭಾಕರ ಹೊಳ್ಳ

ತಾಯಿಯ ಹೆಸರು : ಶ್ರೀಮತಿ ಶಶಿರೇಖ


# ಬೃಂದಾವನ ಗೆಸ್ಟ್‌ಹೌಸ್

# BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block, Bhuvaneshwari Nagar
BSK 3rd Stage, Bangalore - 560 085 E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ: ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿನೀಡಲಾಗುವುದು.

ಶುಭಾಶಯಗಳನ್ನು ಕೋರುವವರು

|| ಹರಿಃ ಓಂ ||



# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು - 27, ದೂರವಾಣಿ : 22235533, 22241121**

## ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು - 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು - 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು - 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

# ಆನಂದ ಬಳಗ – ಸಾಂಸ್ಕೃತಿಕ ವಿಭಾಗದಿಂದ ಮಕ್ಕಳೊಂದಿಗೊಂದು ಸಂಜೆ ಮತ್ತು ಪ್ರತಿಭಾ ಪುರಸ್ಕಾರ

''ಸಮಯ ಪ್ರಜ್ಞೆ ಇದ್ದರೆ ಎಲ್ಲವನ್ನು ಗೆಲ್ಲಬಹುದು. ವಿದ್ಯಾರ್ಥಿಗಳಿಗೆ ವಿಶೇಷವಾಗಿ ಇದರ ಅರಿವಿರಬೇಕು'' ಇದು ಶ್ರೀ ಹೆಚ್.ಕೆ. ವೆಂಕಟರಮಣ, ನಿರ್ದೇಶಕರು, ಪಿ.ಸಿ. ಕ್ಲೈಂಟ್ ಗ್ರೂಪ್ ಇಂಡಿಯಾ, ಇಂಡಿಯಾ ಕಾರ್ಪ್ ಯುಎಸ್ಎ, ಇವರು ಪ್ರತಿಭಾಪುರಸ್ಕಾರ ಸಮಾರಂಭದ ಅತಿಥಿಗಳಾಗಿ ಆನಂದ ಬಳಗದ ಸದಸ್ಯರನ್ನು ಉದ್ದೇಶಿಸಿ ಹೇಳಿದ ಮಾತು.

ಆನಂದ ಬಳಗದ ಸಾಂಸ್ಕೃತಿಕ ವಿಭಾಗವು ತಾ. 31.8.2014ರಂದು ಎ.ಡಿ.ಎ. ರಂಗ ಮಂದಿರದಲ್ಲಿ 'ಮಕ್ಕಳೊಂದಿಗೊಂದು ಸಂಜೆ' ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿತ್ತು. ಕಾರ್ಯಕ್ರಮವು ಎಲ್ಲರ ಮನಸೂರೆಗೊಳ್ಳುವಲ್ಲಿ ಯಶಸ್ವಿಯಾಯಿತು.

ಆರಂಭದಲ್ಲಿ ನೆರವೇರಿದ ಸಭಾ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಶ್ರೀ ಹೆಚ್.ಕೆ. ವೆಂಕಟರಾಮ್ ಆಗಮಿಸಿದರು. ಶ್ರೀ ಪಿ.ಎಸ್. ಬಾಗಿಲ್ತಾಯರು ಸಭೆಯ ಅಧ್ಯಕ್ಷತೆ ವಹಿಸಿದರು. ಪ್ರತಿಭಾ ಪುರಸ್ಕಾರದ ಪ್ರಾಯೋಜಕರಾದ ಭೀಮಾ ಜ್ಯುವೆಲ್ಲರ್‍ಸ್‌ನ ಶ್ರೀ ಬಿ. ಕೃಷ್ಣನ್ ಅವರ ಧರ್ಮಪತ್ನಿ ಶ್ರೀಮತಿ ಸಾವಿತ್ರಿ ಕೃಷ್ಣನ್ ಉಪಸ್ಥಿತರಿದ್ದರು.

ಇತ್ತೀಚೆಗೆ ಹೋಟೆಲ್ ಅಜಂತಾದಲ್ಲಿ ನಡೆದ ಪ್ರತಿಭಾ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರನ್ನು ಇದೇ ವೇದಿಕೆಯಲ್ಲಿ ಅತಿಥಿಗಳಿಂದ ಗೌರವಿಸಲಾಯಿತು. ವೇದಿಕೆಯ ಗಣ್ಯರನ್ನು ಅದೀಪ್ ಪೇರಾ ಸ್ವಾಗತಿಸಿದರು. ಬಹುಮಾನ ವಿಜೇತರಯ ವಿವರಣೆಯುನ್ನು ಅನುಷಾ ಪ್ರಸಾದ ನೆರವೇರಿಸಿದರು. ಅತಿಥಿಗಳನ್ನು ರಜತ್ ಗುರುಮೂರ್ತಿ ಪರಿಚಯಿಸಿದರು. ಇದೇ ವೇದಿಕೆಯಲ್ಲಿ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮವನ್ನು ಶ್ರೀ ರಾಜೇಶ್ ರಾವ್ ನಿರ್ವಹಿಸಿದರು. ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯಲ್ಲಿ ಅತ್ಯಧಿಕ ಅಂಕ ಪಡೆದ ಬಳಗದ ಸದಸ್ಯ ಕುಟುಂಬದ ವಿದ್ಯಾರ್ಥಿಗಳನ್ನು ಅತಿಥಿಗಳು ಗೌರವಿಸಿದರು. ಸಭಾ ಕಾರ್ಯಕ್ರಮದ ಗಣ್ಯರಿಗೆ ಹಾಗೂ ಆಗಮಿಸಿದ ಎಲ್ಲರಿಗೂ ಅನೂಷಾ ಭಟ್ ವಂದನೆಗಳನ್ನು ಸಲ್ಲಿಸಿದರು. ಒಟ್ಟಾರೆ ಕಾರ್ಯಕ್ರಮದ ನಿರ್ವಹಣೆಯನ್ನು ಕು. ತುಷಾರ ಆಚಾರ್ಯ ಚೆನ್ನಾಗಿ ನೆರವೇರಿಸಿದರು.

ಸಭಾ ಕಾರ್ಯಕ್ರಮದ ಬಳಿಕ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಎಂದಿಗಿಂತ ತುಂಬಾ ಭಿನ್ನವಾಗಿ ಕಾಣಿಸಿತು. 2 ತಿಂಗಳಿಂದ ಸತತ ಅಭ್ಯಾಸ ಮಾಡಿದ ಪುಟಾಣಿ ಮಕ್ಕಳು ವೇದಿಕೆಯ ಮೇಲೆ ಅದನ್ನು ಪ್ರದರ್ಶನ ಮಾಡಿ ಎಲ್ಲಾ ಸಭಿಕರ ಮನಸೂರೆಗೊಂಡರು.

ಆರಂಭದ ಪ್ರಾರ್ಥನೆಯಲ್ಲಿ ಮಹತಿ ಕುಂಜತ್ತಾಯ ನಿಖಿತಾ ಹೆಬ್ಬಾರ್, ಶಾಶ್ವತ್, ಶ್ರೀಪ್ರದ ಆಚಾರ್ಯ ತೊಡಗಿಸಿಕೊಂಡರು. ಬಳಿಕ ನಡೆದ ವಯಲಿನ್ ವಾದನದಲ್ಲಿ ವಿಷ್ಣು ವೆಂಕಟ್ ರಾಮ್ ಹಾಗೂ ಸಿದ್ದಾರ್ಥ ಗಣೇಶ್ ತಮ್ಮ ಕೈಚಳಕ ಮೆರೆದರು.

ಚಲನಚಿತ್ರ ಗೀತೆ ಎಂದರೆ ಯೋಚನೆ ಮಾಡುವ ಬಳಗದ ಹಿರಿಯ ಸದಸ್ಯರು ಸಂತೋಷಪಟ್ಟ ಕಾರ್ಯಕ್ರಮ ಎಂದರೆ ಹಳೆಗೀತೆಗಳಿಂದ ಇಂದಿನ ಗೀತೆಗಳನ್ನೊಳಗೊಂಡ ಮಲ್ಲಿಗೆ ಮಾಲೆ ಹಾಡಿನ ಸರಪಳಿ, ಹಾಗೂ ಅದನ್ನು ಪರದೆಯ ಮೇಲೆ ಚಿತ್ರದ ನಾಯಕ, ಗಾಯಕರನ್ನು ಸಾಂದರ್ಭಿಕವಾಗಿ ಪ್ರದರ್ಶಿಸಿದ ರೀತಿ ಎಲ್ಲರನ್ನೂ ಸಂತೋಷ ಪಡಿಸಿತು. ಇದರ ನಿರ್ದೇಶಕ ಶ್ರೀಯುತ ವಿಶ್ವೇಶ್ ಭಟ್‌ರಿಗೆ ಅಭಿನಂದನೆ ಸಲ್ಲಲೇಬೇಕು. ಇದರಲ್ಲಿ ಭಾಗವಹಿಸಿದ ಗಾಯಕರಾದ ಆರಭಿ ಭಟ್, ವಲ್ಲರಿ ಪೆಜತ್ತಾಯ ಆದಿತ್ಯ ಕೆದಿಲಾಯ, ಮೇಘನ ಕೆದಿಲಾಯ, ಶಾರ್ವರಿ ಸೋಮಯಾಜಿ, ಧನ್ಯ ಶಗ್ರಿತ್ತಾಯ, ಸಿಂಧು ಶ್ರೀನಾಥ್, ಸ್ವಾತಿ ಶ್ರೀನಾಥ್ ಎಲ್ಲರ ಪ್ರೀತಿಗೆ ಪಾತ್ರರಾದರು.

ಮುಂದೆ ನಡೆದ 'ಶ್ರೀಕೃಷ್ಣ ರಸ ವೈಭವ' ಜನರನ್ನು ವಿಶೇಷ ಲೋಕಕ್ಕೆ ಒಯ್ದಂತಿತ್ತು. ಕಾರಣ ಪುಟಾಣಿ ಮಕ್ಕಳ ನೃತ್ಯಾಭಿನಯ ಹಾಗೂ ಪರದೆ ಮೇಲೆ ತೋರಿಸಿದ ಎಲ್ಲಾ ಸಾಂದರ್ಭಿಕ ಚಿತ್ರಗಳು. ಈ ಪ್ರಯೋಗ ಬಹುಶಃ ಇಲ್ಲಿ ಮೊದಲಿನದು ಎಂದು ಹೇಳಬಹುದು. ಈ ನೃತ್ಯದ ನಿರ್ದೇಶಕರಾದ ಕುಮಾರಿ ಹಂಸ ನಾಗರಾಜ ಸಹ ಅಭಿನಂದನಾರ್ಹರು. ಇದರಲ್ಲಿ ಭಾಗವಹಿಸಿದ ಮಕ್ಕಳನ್ನು ಕಂಡಿತಾ ನೆನೆಪಿಸಿಕೊಳ್ಳಬೇಕಾಗುತ್ತದೆ. ಪುಟಾಣಿಗಳಾದ ಸುನೇತ್ರ ಬಲ್ಲಾಳ್, ಮೇಘನ ಕಾರಂತ್, ಮಹಿಮಾ ಶಾಸ್ತ್ರಿ, ಐಶ್ವರ್ಯ ರಾವ್, ಮಾಯಾರಾವ್, ನೇಹ ಕುಬಣೂರು, ಸಿರಿ ಕಲ್ಮಾಡಿ, ಸಿಂಚನ ಪಾವಂಜೆ, ಅದಿತಿ ಸರಳಾಯ, ಶ್ರೀಯಾ ಸರಳಾಯ, ಪಾವನಿ ಪುತ್ತುರಾಯ, ನವ್ಯ ಕುಬಣೂರು, ಸನ್ನಿಧಿ ರಾವ್, ಧಾತ್ರಿ ಉಪಾಧ್ಯಾಯ, ಆರ್ಯ, ಆಶ್ರಿತ, ಮಾನ್ಯ ಕುಂಭಾಶಿ, ವಂದ್ಯ ಕುಂಭಾಶಿ ಸದನ ಬಲ್ಲಾಳ್, ಹೃಷಿಕೇಶ್ ರಾವ್, ಅನೀಫ್ ರಾವ್, ಶ್ರೀಹರಿ ಕಲ್ಮಾಡಿ, ಸಿದ್ಧಾಂತ್ ಪಾವಂಜೆ,

ಅನಿರುದ್ಧ ಪಾವಂಜೆ, ಗಗನ್ ಪುತ್ತೂರಾಯ, ಅಮಿತ್‌ರಾವ್, ಮನೋಜ್ ಕಾರಂತ್, ನಮನ ಕುಬಣೂರು. ಇವರೆಲ್ಲರ ಶ್ರಮಕ್ಕೆ ಹಾಗೂ ಅಂದು ನೀಡಿದ ಪ್ರದರ್ಶನಕ್ಕೆ ಎಲ್ಲರೂ ಕೈ ಚಪ್ಪಾಳೆ ಮೂಲಕ ಪ್ರೋತ್ಸಾಹಿಸಿದರು.

ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮದ ಕೊನೆಯ ಶಾಂತಿ ಮಂತ್ರಕ್ಕೆ ಎಲ್ಲಾ ಕಲಾವಿದರು ವೇದಿಕೆ ಮೇಲೆ ಬಂದಾಗ ಪ್ರೇಕ್ಷಕರು ಅಭಿಮಾನ ಪೂರ್ವಕ ಮತ್ತೊಮ್ಮೆ ಜೋರಾಗಿ ಕರತಾಡನ ಮಾಡಿ ಪ್ರೋತ್ಸಾಹ ನೀಡಿದರು. ಹಾಗೂ ಸದಾ ಎಂದಿನಂತೆ ಗಣೇಶ್ ಸ್ಟೀಲ್ ಸೆಂಟರ್‌ನ ಕೊಡುಗೈ ದಾನಿ ಶ್ರೀ ಭಾಸ್ಕರ್ ರಾವ್ ಎಲ್ಲ ಮಕ್ಕಳಿಗೂ ಬಹುಮಾನ ನೀಡಿ ಗೌರವಿಸಿದರು.

ಈ ಎಲ್ಲ ಕಾರ್ಯಕ್ರಮದ ಹಿಂದಿನ ಶ್ರಮ ಸಾಂಸ್ಕೃತಿಕ ವಿಭಾಗದ ಸಂಚಾಲಕಿ ಶ್ರೀಮತಿ ವೀಣಾ ಶರತ್ ಹಾಗೂ ಅವರ ತಂಡದವರಾಗಿತ್ತು. ಅಂತೆಯೇ ಎಲ್ಲಾ ವಿಭಾಗದ ಸದಸ್ಯರ ಪೂರ್ಣ ಸಹಕಾರ ಹಾಗೂ ಆರ್ಥಿಕ ಸಹಾಯ ಈ ಕಾರ್ಯಕ್ರಮಕ್ಕಿತ್ತು. ಚಿಕ್ಕಮಕ್ಕಳ ಮೂಲಕ ಹಲವು ಮನೆ ಸದಸ್ಯರ – ಮನ ಮುಟ್ಟುವಲ್ಲಿ ಸದಸ್ಯ ಕುಟುಂಬ ಯಶಸ್ವಿಯಾಯಿತು ಎಂದು ಸಂತೋಷದಿಂದ ಹೇಳಬಹುದು.

ಹಿರಿಯರ ಸಲಹೆ ಸೂಚನೆ, ಕಾರ್ಯಕಾರಿ ಸಮಿತಿಯ ಮಾರ್ಗದರ್ಶನ ಹಾಗೂ ಬಳಗದ ಸದಸ್ಯ ಕುಟುಂಬಗಳು ಈ ರೀತಿ ಸದಾ ಜೊತೆಗಿದ್ದರೆ ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಸಾಧ್ಯ.

ಆನಂದ ಬಳಗದ ಎಲ್ಲಾ ಕಾರ್ಯಕ್ರಮಗಳು ಇದೇ ರೀತಿ ಬೆಳಗಲಿ ಎಂದು ಎಲ್ಲರ ಆಶಯ.

**– ಕೆ.ಎನ್. ಅಡಿಗ ಅಡೂರ್**

# ಮೋಡಿ ಮಾಡಿದ ಭೂತಾನ್

ಬಾನಂಗಳ ಚುಂಬಿಸುವ ಪರ್ವತ ಶ್ರೇಣಿಯ ನೋಟ
ಹಾಲು ಮೋಡವು ಹಸುರ ನಡುವಿನಲ್ಲಿ
ಪ್ರಕೃತಿಯ ಲಾಸ್ಯವನು ನೋಡಲು ಭೂತಾನ್
ಶಾಂತ ಸೌಮ್ಯ ವಾತಾವರಣವ ನೋಡು ಬಾ ತಂಗಿ
ಬೆಳಗಿನ ನಡೆದೆ ಸ್ಫೂರ್ತಿಯ ಚಿಲುಮೆ
ಮಳೆಯಿಲ್ಲದಾ ಬಾನು ಅಲ್ಲಲ್ಲಿ ಸಿಂಚನ
ಭೂತಾನ್ ಚೆಣ್ಣರು ಪರಂಪರೆಯ ಉಡುಗೆಯಲಿ
ತಟಪಟನೆ ಹೆಜ್ಜೆಯನಿಕ್ಕುವುದೇ ಚಂದ
ಪುಟ್ಟ ಮಕ್ಕಳೇ ಇರಲಿ – ನವ ಜವ್ವನೆಯರೇ ಇರಲಿ
ಪರಂಪರೆಯ ಉಡುಗೆಯೇ ಈ ರಾಷ್ಟ್ರ ವೈಶಿಷ್ಟ್ಯ
ಜನ್ಮ ತಳೆದ ನಾಡನ್ನು ಪ್ರೀತಿಸುವ ಪರಿನೋಡಿ
ಗೌರವವು ಮೂಡಿತು ಎನ್ನ ಮನದಲ್ಲಿ
ಶಾಂತ ಮುಖಮುದ್ರೆಯ ಭೂತಾನಿಗಳ ನಡೆಯು
ಮೋಡಿ ಮಾಡಿತು ಎನ್ನ ಮನದ ಮೇಲೆ
ಪಾಲ್ಗಡಲ ಮೇಲೊಂದು ಸಾಗುತಿಹ ನೌಕೆಯಲಿ
ಪಯಣಿಸಿದೆ ನಾನಲ್ಲಿ ಪ್ರವಾಸಿಯಾಗಿ
ಪುಟ್ಟರಾಷ್ಟ್ರವೊಂದು ಪರಿಶ್ರಮದ ಬೆಳಕಿರಲಿ
ಸನ್ಮಿತ್ರ ಭೂತಾನ್‌ಗೊಂದು ನಮನ

**ರಚನೆ : ಕೋಟೇಶ್ವರ ಸೂರ್ಯನಾರಾಯಣ ರಾವ್,**
ಬೆಂಗಳೂರು

ಗಮನಿಸಿ:

## ಮಹಿಳಾ ವಿಭಾಗದ ನೇತೃತ್ವದಲ್ಲಿ ವಧು–ವರಾನ್ವೇಷಣೆ



ಆನಂದ ಬಳಗದ ಮಹಿಳಾ ವಿಭಾಗದವರು ಕಳೆದ ಕೆಲವಾರು ವರ್ಷಗಳಿಂದ ಬಳಗದ ಸದಸ್ಯರ ಅನುಕೂಲಕ್ಕಾಗಿ ವಧು–ವರಾನ್ವೇಷಣೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ.ಈ ಕಾರ್ಯಕ್ರಮದ ಪ್ರಯೋಜನವನ್ನು ಈಗಾಗಲೇ ನೂರಾರು ಸದಸ್ಯರು ಪಡೆದುಕೊಂಡಿರುವುದು ಸಂತಸದ ವಿಚಾರ.

ಪ್ರತಿ ಬುಧವಾರ ಮತ್ತು ಶನಿವಾರ ಅಪರಾಹ್ನ 2.30ರಿಂದ 4.30ರ ವರೆಗೆ ರಾಜಾರಾಂ ಮೋಹನ ರಾಯ್ ರಸ್ತೆಯಲ್ಲಿರುವ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಚಾಂದನಿ ಹಾಲ್‌ನಲ್ಲಿ ವಧು–ವರಾನ್ವೇಷಣೆ ಕಾರ್ಯಕ್ರಮ ನಡೆಸಲಾಗುತ್ತಿದ್ದು ಬಳಗದ ಮತ್ತಷ್ಟು ಸದಸ್ಯರು ಈ ಕಾರ್ಯಕ್ರಮದ ಉಪಯೋಗವನ್ನು ಪಡೆಯಲು ಕೋರಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀಮತಿ ವಿಜಯಲಕ್ಷ್ಮಿ ಭಟ್ (9844152107);**
**ಶ್ರೀಮತಿ ಗೀತಾ ಪಿ.ಆರ್. ರಾವ್ (9945938411) ; ಶ್ರೀಮತಿ ಸುಧಾ ಎಂ. ರಾವ್ (9901127738)**

# ಪ್ರತಿಭಾ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳು - 2014

## ಚಿತ್ರರಚನೆ

**ಪುಟಾಣಿ ವಿಭಾಗ :**

| | |
|---|---|
| ಪ್ರಥಮ ಬಹುಮಾನ | ಚಿ. ಅಚಿಂತ್ಯ |
| ದ್ವಿತೀಯ ಬಹುಮಾನ | ಚಿ. ಧೀರಜ್ |
| ತೃತೀಯ ಬಹುಮಾನ | ಕು. ಸನ್ನಿಧಿ ರಾವ್ |
| ಸಮಾಧಾನಕರ ಬಹುಮಾನ | ಕು. ರುಚಿ |
| ಸಮಾಧಾನಕರ ಬಹುಮಾನ | ಚಿ. ಪ್ರದ್ಯುಮ್ನ |

**ಬಾಲ ವಿಭಾಗ :**

| | |
|---|---|
| ಪ್ರಥಮ ಬಹುಮಾನ | ಕು. ಆರಭಿ ಭಟ್ |
| ದ್ವಿತೀಯ | ಚಿ. ಶಾಶ್ವತ |
| ತೃತೀಯ | ಕು. ವಿಶ್ರುತ್ |

**ಕಿಶೋರ ವಿಭಾಗ :**

| | |
|---|---|
| ಪ್ರಥಮ ಬಹುಮಾನ | ಕು. ಮಹಿಮಾ ಶಾಸ್ತ್ರಿ |
| ದ್ವಿತೀಯ ಬಹುಮಾನ | ಕು. ರಕ್ಷಾ |
| ತೃತೀಯ ಬಹುಮಾನ | ಕು. ರುತು |

## ಸಂಸ್ಕೃತ ಶ್ಲೋಕ ಪಠನ ಸ್ಪರ್ಧೆ

| | |
|---|---|
| ಪ್ರಥಮ ಬಹುಮಾನ | ಕು. ಆರಭಿ ಭಟ್ |
| ದ್ವಿತೀಯ ಬಹುಮಾನ | ಕು. ಮಹತಿ ಕುಂಜಿತ್ತಾಯ |
| ತೃತೀಯ ಬಹುಮಾನ | ಕು. ನಿಖಿತಾ ಹೆಬ್ಬಾರ್ |

## ಛದ್ಮ ವೇಷ ಸ್ಪರ್ಧೆ

| | |
|---|---|
| ಪ್ರಥಮ ಬಹುಮಾನ | ಕು. ಸನ್ನಿಧಿ ರಾವ್ |
| ದ್ವಿತೀಯ ಬಹುಮಾನ (1) | ಚಿ. ಆರ್ನವ್ ಉಪಾಧ್ಯಾಯ |
| ದ್ವಿತೀಯ ಬಹುಮಾನ (2) | ಕು. ನಿಖಿತಾ ಹೆಬ್ಬಾರ್ |
| ತೃತೀಯ ಬಹುಮಾನ (1) | ಕು. ನವ್ಯ ಕುಬಣೂರು |
| ತೃತೀಯ ಬಹುಮಾನ (2) | ಚಿ. ಶಾಶ್ವತ್ |
| ಸಮಾಧಾನಕರ ಬಹುಮಾನ (1) | ಕು. ಅನನ್ಯ ಹೆಚ್. |
| ಸಮಾಧಾನಕರ ಬಹುಮಾನ (2) | ಚಿ. ರಜತ್ ಎಂ. |

## ರಸ ಪ್ರಶ್ನೆ ಸ್ಪರ್ಧೆ

| | |
|---|---|
| ಪ್ರಥಮ ಬಹುಮಾನ | ಕು. ಮಹಿಮಾ ಶಾಸ್ತ್ರಿ |
| ದ್ವಿತೀಯ ಬಹುಮಾನ | ಕು. ತುಷಾರ ಆಚಾರ್ಯ |
| ದ್ವಿತೀಯ ಬಹುಮಾನ | ಕು. ರುತು |

## ದೇವರ ನಾಮ

**ಬಾಲ ವಿಭಾಗ :**

| | |
|---|---|
| ಪ್ರಥಮ ಬಹುಮಾನ | ಕು. ಆರಭಿ ಭಟ್ |
| ದ್ವಿತೀಯ ಬಹುಮಾನ | ಕು. ಮಹತಿ ಕುಂಜಿತ್ತಾಯ |
| ತೃತೀಯ ಬಹುಮಾನ | ಚಿ. ಅಚಿಂತ್ಯಾ |
| ತೃತೀಯ ಬಹುಮಾನ | ಕು. ಧೀಕ್ಷಾ |
| ಸಮಾಧಾನಕರ ಬಹುಮಾನ | ಚಿ. ಶಾಶ್ವತ್ |

**ಕಿಶೋರ ವಿಭಾಗ :**


| | |
|---|---|
| ಪ್ರಥಮ ಬಹುಮಾನ | ಕು. ಶಾರ್ವರಿ ಸೋಮಯಾಜಿ |
| ದ್ವಿತೀಯ ಬಹುಮಾನ | ಕು. ತುಷಾರ ಆಚಾರ್ಯ |
| ತೃತೀಯ ಬಹುಮಾನ | ಕು. ಅಂಕಿತ ಬಾಲಕೃಷ್ಣ ಭಟ್ |
| ಸಮಾಧಾನಕರ ಬಹುಮಾನ | ಕು. ಧನ್ಯ ಶಗ್ರಿತ್ತಾಯ |

## ಚಿತ್ರಗೀತೆ

| | |
|---|---|
| ಪ್ರಥಮ ಬಹುಮಾನ | ಕು. ಶಾರ್ವರಿ ಸೋಮಯಾಜಿ |
| ದ್ವಿತೀಯ ಬಹುಮಾನ | ಕು. ತುಷಾರ ಆಚಾರ್ಯ |
| ತೃತೀಯ ಬಹುಮಾನ | ಕು. ಅಂಕಿತ ಬಾಲಕೃಷ್ಣ ಭಟ್ |
| ಸಮಾಧಾನಕರ ಬಹುಮಾನ | ಕು. ವಲ್ಲರಿ ಪೆಜತ್ತಾಯ |

### ಪ್ರತಿಭಾ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಭಾಗವಹಿಸಿದವರು

ಶ್ರೀಯುತ ಮಟ್ಟು ರಾಮಚಂದ್ರರಾವ್
ಕುಮಾರಿ ಕಿನ್ನರಿ ಆಚಾರ್ಯ
ಶ್ರೀಯುತ ಬಿ.ಆರ್. ತಂತ್ರಿ
ಶ್ರೀಯುತ ಪಿ.ಸಿ. ಮುಕುಂದರಾವ್
ಶ್ರೀಯುತ ಶಿವರಾಮ ಭಟ್ ಪಿ.
ಶ್ರೀಯುತ ಕೋಟೇಶ್ವರ ಸೂರ್ಯ ನಾರಾಯಣ ರಾವ್
ಶ್ರೀಮತಿ ವಿಜಯಲಕ್ಷ್ಮಿ ಉಪಾಧ್ಯಾಯ
ಶ್ರೀಮತಿ ಮೀರಾ ಸೂರಿ
ಶ್ರೀಮತಿ ವಿಶ್ವಾಣಿ ಆಚಾರ್ಯ



# ANANDA BALAGA "PRATHIBHA PURASKARA - 2014"

(In association with M/s Bhima Jewellers)

| SL NO | NAME OF THE STUDENT | NAME OF THE PARENTS | MARKS |
|---|---|---|---|
| **PUC II YEAR / 12TH STD - COMMERCE 90% and above** | | | |
| 1 | SHRINIDHI N. | N. NARASIMHA MURTHY & SHOBHA | 92.17 |
| 2 | RAMYA R. | RAGHAVENDRA R. & APARNA | 92.83 |
| 3 | SHRUTHI KEDILAYA A | UDAY SHANKAR KEDILAYA & SANDHYA | 94.67 |
| 4 | AISHWARYA VENKATESH | T.N.VENKATESH MURTHY & SUMA | 96.67 |
| **PUC -ARTS 85% AND ABOVE** | | | |
| 1 | SINDHU SHIVAPRASAD | SHIVAPRASAD N.L. AND VIDYA | 85.33 |
| PUC II YEAR / 12TH STD - SCIENCE - 90% and above | | | |
| 1 | MANASA H.N. | NARASIMHA ACHARYA & MALATHI | 90.50 |
| 2 | SKANDA P. HARI | PADMANABHA & SUPRABHA | 90.80 |
| 3 | SHARATH | SUBRAMANYA ADIGA P & GEETA | 91.00 |
| 4 | KARTHIK HEBBAR | DR. NAGENDRA HEBBAR & ANURADHA | 91.17 |
| 5 | ASHLESH UPADHYAYA V | KESHAVA UPADHYAYA | 91.17 |
| 6 | VISHRUTHA V. HERLE | VIGNESHWARA HERLE & REKHA | 91.17 |
| 7 | SHRUTHI P BHAT | RAMACHANDRA BHAT K. & SUJATHA | 92.67 |
| 8 | VAISHNAVI V RAO | VENKATESH RAO & NIRMALA | 93.00 |
| 9 | SINDHU SRINATH | SRINATH H.N. & SAVITHA | 93.00 |
| 10 | MEGHANA RAO | RAMDEV KARANTH & SHAMALA | 93.20 |
| 11 | SHRAVAN U.M. | U. MADHAVA BHAT & SUDHA | 93.83 |
| 12 | KRITHIKA AITHAL B | SHIVA MOHAN AITHAL & PREMALATHA | 94.00 |
| 13 | DIVYA K.P. | PARAMESHWARA K. & SUMA | 94.83 |
| 14 | GAYATHRI S. UPADHYAYA | SHREENI S UPADHYAYA & ANURADHA | 95.67 |
| 15 | SAHANA P M | MOHANA P.S. & NIRMALA | 96.00 |
| 16 | SMITHA P | PADMANABHA BHAT K & SUMA | 96.50 |
| 17 | ANANDA RAO H | KESHAVA RAO H. & BHAVANI | 97.33 |
| 18 | SINDHU S RAO | SATYANARAYAN RAO & GEETA | 97.50 |
| 19 | VISHRUTHI K ACHARYA | SURENDRA K.H. & REKHA | 97.50 |
| **S.S.L.C SECURED 91% / CGPA 9.6 AND ABOVE** | | | |
| 1 | PANCHAMI P. | H.S.PRAFULLA KUMAR & VANI | 9.80 |
| 2 | TEJASHRI VENKATESH | VENKATESH & VANI | 10.00 |
| 3 | SHARNYA R. BHAT | A. RAMESH BHAT & SAVITHA | 10.00 |
| 1 | SHREYAS BHAT | RAMACHANDRA BHAT K & SUJATHA | 92.16 |
| 2 | ANVITA BILIRAYA P. | PRAKASH B.N. & SAVITHA | 92.96 |
| 3 | THANVI L. | LAKSHMINARAYANA UPADHYA & ANITHA | 93.12 |
| 4 | VALLARI PEJATHAYA | VADIRAJA PEJATHAYA & SAHANA | 93.76 |
| 5 | KARTHIK AITHAL K | SHYAMASYNDAR AITHAL K & REVATHI | 93.76 |
| 6 | VAISHNAVI V. | VENKATESHA & VANI | 94.17 |
| 7 | KEERTHANA M. | MANJUNATHA UPADHYA & JAYALAKSHMI | 94.33 |
| 8 | MYNA P | PRASANNA KUMAR B. & VANI | 94.50 |
| 9 | BELA G. BAIRY | GANAPAYYA BAIRY & VEENA | 95.00 |
| 10 | ANKITHA R UDUPA | KRISHNA UDUPA & SUJATHA UDUPA | 95.04 |
| 11 | VARSHA RAO | DR. K. VENUGOPALA RAO & Dr. MAMATHA RAO | 95.67 |
| 12 | MADHSHREE S. RAO | SATYANARAYAN RAO & GEETA RAO | 95.84 |
| 13 | ASHWINI RAO | RAVICHANDRA R. & GIRIJA | 97.60 |
| 14 | THUSHARA K ACHARYA | LAXMEESHA ACHARYA HR AND PREMA | 97.76 |
| 15 | ASHWIN HEBBAR S | SHANKAR HEBBAR & SAVITHRI | 98.72 |

# ಉಡುಪಿಯ ಶ್ರೀಕೃಷ್ಣ–ಸಂಗೀತ ಪ್ರಿಯ



15ನೇ ಶತಮಾನದಲ್ಲಿ ದಾಸಸಾಹಿತ್ಯ ಕ್ರಾಂತಿಗೆ ಶ್ರೀಕೃಷ್ಣನ ಉಡುಪಿಕ್ಷೇತ್ರವೇ ತವರೂರಾಯಿತು. ಶ್ರೀವ್ಯಾಸರು, ಶ್ರೀವಾದಿರಾಜರು, ಶ್ರೀಪುರಂದರದಾಸರು, ಶ್ರೀಕನಕದಾಸರು, ಶ್ರೀವಿಜಯೀಂದ್ರರ ನೇತೃತ್ವದಲ್ಲಿ ಸಾವಿರಾರು ಕೃತಿಗಳು ಉಡುಪಿಯಲ್ಲಿ ಅನಾವರಣಗೊಂಡಿತು. ಉಡುಪಿ ಕೃಷ್ಣನ ಕುರಿತಾಗಿಯೇ ಸಾವಿರಾರು ಗದ್ಯಪದ್ಯಗಳು ರಚಿತವಾಯಿತು. ತಂಬೂರಿ ಮೀಟಿ, ಗೆಜ್ಜೆ ಕಟ್ಟಿ, ಶುದ್ಧಭಕ್ತಿ, ಮುಗ್ಧಹೃದಯದಿಂದ ಭಜಿಸಿ ನಲಿದ ಸಂತರಿಗೆ ಉಡುಪಿಯು ಸಾಕ್ಷಾತ್ಕಾರದ ನೆಲೆಯಾಯಿತು. ಕನಕನ ಅಂತರಾಳದ ಕೂಗಿಗೆ ಕಡೆಗೋಲಕೃಷ್ಣ ದರುಶನವನ್ನು ಕರುಣಿಸಿದ. ದಾಸಸಾಹಿತ್ಯದ ಸ್ವರ್ಣಯುಗವೆಂದೇ ಬಿಂಬಿತವಾದ ಈ ಪರ್ವಕಾಲದಲ್ಲಿ ಸಮಸ್ತ ಉಡುಪಿಯು ಸಂಗೀತಮಯವಾಯಿತು.

ಹೌದು, ಉಡುಪಿಕೃಷ್ಣನಿಗೂ ಸಂಗೀತಕ್ಕೂ ಅವಿನಾಭಾವ ಸಂಬಂಧವಿದೆ, 8 ಶತಮಾನಗಳ ಪೂರ್ವದಲ್ಲಿ ದ್ವಾರಕೆಯಿಂದ ಬಂದ ಹಡಗಲಿ ಗೋಪಿಹೆಂಟೆಯೊಳಗೆ ಹುದುಗಿದ್ದ ಕಡೆಗೋಲು ಕೃಷ್ಣನ ದಿವ್ಯ ಪ್ರತಿಮೆಯನ್ನು ಆಚಾರ್ಯಮಧ್ವರು ಮಲ್ಪೆಯ ಕಡಲ ಕಿನಾರೆಯಲ್ಲಿ ಹಡಗಿನ ಕಪ್ತಾನನಿಂದ ಪಡೆದುಕೊಂಡರು. ಆ ಕೃಷ್ಣಮೂರ್ತಿಯ ಮೆರುಗಿಗೆ ಮಾರುಹೋದ ಆಚಾರ್ಯರು ಸಂತಸ ಸಂಭ್ರಮದಿಂದ ದ್ವಾದಶ ಸ್ತೋತ್ರವನ್ನು ಹಾಡುತ್ತಾ ಉಡುಪಿಗೆ ತಂದು ಪರ್ವಕಾಲದಲ್ಲಿ ಪ್ರತಿಷ್ಠಾಪಿಸಿದರು. ಪ್ರಸಿದ್ಧ ಸಂಗೀತ ವಿದ್ವಾಂಸರಾಗಿದ್ದ ಶ್ರೀ ಮಧ್ವಾಚಾರ್ಯರ ಹಾಡುಗಾರಿಕೆಯ ಆಕರ್ಷಣೆ ಹೇಗಿತ್ತೆಂದರೆ ಆಚಾರ್ಯರು ಹಾಡಲಾರಂಭಿಸಿದರೆ ಗಂಧರ್ವರು, ದೇವತೆಗಳು ನಿಬ್ಬೆರಗಾಗುತ್ತಿದ್ದರು ಎಂದು ಆಚಾರ್ಯರ ಆತ್ಮೀಯ ಶಿಷ್ಯರಾಗಿದ್ದ ಶ್ರೀತ್ರಿವಿಕ್ರಮ ಪಂಡಿತಾಚಾರ್ಯರು ತಮ್ಮ ಕೃತಿಯಲ್ಲಿ ಉಲ್ಲೇಖಿಸುತ್ತಾರೆ.

ಅಂತಹ ಪಾಂಡಿತ್ಯವನ್ನು ಹೊಂದಿದ್ದ ಆಚಾರ್ಯರು ಕೃಷ್ಣ ಪ್ರತಿಷ್ಠೆಯ ನಂತರ ಕೃಷ್ಣನಿಗೆ 14 ಪೂಜೆಗಳ ಸಂಪ್ರದಾಯ ವನ್ನು ರೂಪಿಸಿ, ಪ್ರಾತಃಕಾಲದಿಂದ ರಾತ್ರಿಯ ಜೋಗುಳ ದವರೆಗೆ ಸಲ್ಲುವ ಕೃಷ್ಣನ ಪೂಜೆಗಳಲ್ಲಿ ವೇದಮಂತ್ರಗಳ ಜೊತೆಗೆ ಸಂಗೀತದ ಕಂಪನ್ನು ಕೂಡಾ ಸವರಿದರು.

ಆಚಾರ್ಯರ ಕಾಲದ ನಂತರ ಉಡುಪಿ ಅಷ್ಟಮಠದ ಅನೇಕ ಯತಿಗಳು ಸಂಗೀತ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಸಲ್ಲಿಸಿ ಪೊಡವಿಗೊಡೆಯ ಶ್ರೀ ಕೃಷ್ಣನಿಗೆ ಭಕ್ತಿಭಾವದಿಂದ ಸಂಗೀತಸೇವೆಯನ್ನು ಅರ್ಪಿಸಿ, ಸಾಕ್ಷಾತ್ಕರಿಸಿಕೊಂಡ ಅನೇಕ ಕಥೆಗಳು ಕೂಡಾ ಉಡುಪಿ ಮಠದ ಗುರುಪರಂಪರೆಯ ಇತಿಹಾಸಗಳ ಪುಟಗಳಲ್ಲಿ ದಾಖಲಾಗಿವೆ. ಶ್ರೀಅದಮಾರು ಮಠದ ಮೂಲ ಯತಿಗಳಾದ ಶ್ರೀನರಸಿಂಹ ತೀರ್ಥರು, ಶ್ರೀಶೀರೂರು ಮಠದ 2ನೇ ಯತಿಗಳಾದ ಶ್ರೀವಾಸುದೇವ ತೀರ್ಥರು, 8ನೇ ಯತಿಗಳಾದ ಶ್ರೀಕೃಷ್ಣತೀರ್ಥರು ಶ್ರೀಕಾಣಿಯೂರು ಮಠದ 16 ನೇ ಯತಿಗಳಾದ ಶ್ರೀವಿಬುಧೇಶತೀರ್ಥರು ಹಾಗೂ ಇನ್ನೂ ಅನೇಕರು ಅಧ್ಯಾತ್ಮದ ಅಧ್ಯಯನದ ಜೊತೆಗೆ ಸಂಗೀತ ಸಾಧನೆಗೂ ಅಗ್ರಪ್ರಾಶಸ್ತ್ಯ ನೀಡಿ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡಿದ್ದರು.

ಶ್ರೀಸೋದೆ ಮಠದ ಶ್ರೀವಾದಿರಾಜರ ಕಾಲದಲ್ಲಿ ಶ್ರೀ ಮಧ್ವಾಚಾರ್ಯರ ಸಂಗೀತದ ಕಂಪಿಗೆ ಮತ್ತಷ್ಟು ವೈಭವ ಹಾಗೂ ವೈಶಾಲ್ಯತೆ ಲಭಿಸಿತು.

## ಕೃಷ್ಣಪೂಜೆ ಮತ್ತು ಸಂಗೀತ

ಪ್ರಾತಃಕಾಲದಲ್ಲಿ ಶ್ರೀಕೃಷ್ಣದೇವರ ಗರ್ಭಗೃಹದ ಬಾಗಿಲು ತೆರೆಯುತ್ತಿದ್ದಂತೆ ಸುಪ್ರಭಾತವು ಆರಂಭವಾಗುತ್ತದೆ. ಶ್ರೀಕೃಷ್ಣನಿಗೆ ಸಲ್ಲುವ ಮೊದಲ ಪೂಜೆಯಾದ ನಿರ್ಮಾಲ್ಯ ವಿಸರ್ಜನೆಯ ಸಂದರ್ಭದಲ್ಲಿ ಮಠದ ಚಂದ್ರಶಾಲೆಯಲ್ಲಿ ಸುಶ್ರಾವ್ಯ ಕಂಠದಲ್ಲಿ ಶ್ರೀಕೃಷ್ಣನಿಗೆ ಅತ್ಯಂತಪ್ರಿಯವೆನಿಸಿದ ಸಾಮವೇದದ ಪಠಣದ ಶ್ರವಣವು ತನುಮನಗಳಿಗೆ ಪಾವಿತ್ರ್ಯತೆಯ ಸ್ಪರ್ಶವನ್ನು ನೀಡಿದರೆ ಶ್ರೀಮಠದ ಮಹಾದ್ವಾರದ ಇಕ್ಕೆಲಗಳಲ್ಲಿ ಸಾಂಪ್ರದಾಯಿಕ ವಾದ್ಯಗಳಾದ ನಾದಸ್ವರ, ನಗಾರಿ, ಡೋಲು, ಶಂಖ ಹಾಗೂ ಬಾರತಂಬೂರಿಗಳ ತರಂಗಗಳು ಶ್ರೀಕೃಷ್ಣ ಪೂಜಾರಂಭದ ಸಂದೇಶವನ್ನು ಮಠದ ಪರಿಸರದೆಲ್ಲೆಡೆ ರವಾನಿಸುತ್ತವೆ. ದಾಸವರೇಣ್ಯರ ಉದಯರಾಗದ ಹಾಡುಗಳು ಭಕ್ತಿಯ ಸಂಚಲನವನ್ನು ಸೃಷ್ಟಿಸುತ್ತದೆ.

ಮಹಾಪೂಜೆಯ ನೈವೇದ್ಯ ಕಾಲದಲ್ಲಿ **"ಪ್ರೀಣಾಯಾಮೋ ವಾಸುದೇವಂ"** ಎಂಬ ಆಚಾರ್ಯ ವಿರಚಿತ ದ್ವಾದಶಸ್ತೋತ್ರವು ಹಾಡಿನರೂಪದಲ್ಲಿ ಬಾಲಕೃಷ್ಣನಿಗೆ

ನಿವೇದನೆಯಾಗುತ್ತಿದ್ದರೆ, ಗರ್ಭಗೃಹದ ದ್ವಾರದಲ್ಲಿ ಮಠದ ಭಾಗವತರು ಕೃಷ್ಣನ ಮಹಿಮೆಯನ್ನು ಸಾರುವ ಕೃತಿಗಳನ್ನು ಹಾಡುತ್ತಿರುತ್ತಾರೆ. ಮಹಾಪೂಜೆ ಮುಗಿಯುತ್ತಿದ್ದಂತೆ ಭಗವಂತನ ದಶಾವತಾರದ ಕಥೆಗಳನ್ನೊಳಗೊಂಡ "ದಶಾವತಾರ ಸ್ತುತಿ"ಯು ವಿನೂತನ ಅಶ್ವಧಾಟಿಯಲ್ಲಿ ಸಂಪನ್ನಗೊಳ್ಳುತ್ತದೆ. ಮಧ್ಯಾಹ್ನ ಪೂಜೆಯ ನಂತರ ಯತಿಗಳು ತೀರ್ಥ ಪ್ರಸಾದ ಸೇವಿಸುವ ಸಂದರ್ಭದಲ್ಲೂ ಕೂಡಾ ಭಕ್ತರಿಂದ ಚೂರ್ಣಿಕೆಗಳು, ಹಾಡುಗಳು ಅನ್ನಬ್ರಹ್ಮನಿಗೆ ಸಮರ್ಪಿತವಾಗುತ್ತದೆ.

ರಾತ್ರಿ ಚಾಮರಸೇವೆಯ ಪೂಜಾ ನಂತರ "ಕೃಷ್ಣಾಷ್ಟಕ"ವೆಂದೇ ಪ್ರಖ್ಯಾತವಾಗಿರುವ ಪಾಲಾಯಾಚ್ಯುತ ಹಾಡು ಶ್ರೀ ಕೃಷ್ಣಪೂಜೆಯ ವೈಭವವನ್ನು ವರ್ಣಿಸುತ್ತದೆ. ರಾತ್ರಿಯ ರಥೋತ್ಸವದ ನಂತರ ಜರಗುವ ಕೃಷ್ಣನ ತೊಟ್ಟಿಲುಪೂಜೆಯ ಸಂಭ್ರಮಕ್ಕೆ ಭಕ್ತ ಸಮುದಾಯದ ಭಕ್ತಿ ಸಂಕೀರ್ತನೆಯು ವಿಶಿಷ್ಟಸೊಬಗನ್ನು ನೀಡುತ್ತದೆ.

ಈ ಪೂಜೆಯ ನಂತರ ಜರಗುವ ಅಷ್ಟಾವಧಾನ ಸೇವೆಯಲ್ಲಿ ಮೊದಲಿಗೆ 4 ವೇದ, ಪುರಾಣ, ವೇದಾಂತ ಶಾಸ್ತ್ರಗಳ ಕಿರುಚರಣಗಳ ಪಠಣವಾಗುತ್ತದೆ. ಅನಂತರ ಮತ್ತೆ ಅಷ್ಟಕ, ಪದ್ಯ ಗದ್ಯ ಸೇವೆಯು ಕೃಷ್ಣನಿಗೆ ಅರ್ಪಿತವಾಗುತ್ತದೆ. ತದನಂತರ ಕೃಷ್ಣನ ಉತ್ಸವ ಮೂರ್ತಿಯನ್ನು ಸ್ವರ್ಣಪಾಲಕಿ ಯಲ್ಲಿರಿಸಿ ವಾದ್ಯವೃಂದದವರಿಂದ ವೇಣುನಾದಪ್ರಿಯ ಶ್ರೀಕೃಷ್ಣನಿಗೆ ಕೊಳಲುಸೇವೆಯು ಜರಗುತ್ತದೆ. ದ್ವಾಪರಾ ಯುಗದಲ್ಲಿ ನಂದಗೋಕುಲದಲ್ಲಿ ಗೋಪ ಗೋಪಿಕೆಯರನ್ನು, ಪಶುಪಕ್ಷಿಗಳನ್ನು ಮಂತ್ರ ಮುಗ್ದರನ್ನಾಗಿಸಿದ ಕೃಷ್ಣನಿಗೆ ಕೊಳಲು ಸೇವೆಯು ಅರ್ಪಣೆಯಾದ ನಂತರ ಕೃಷ್ಣನ ಉತ್ಸವ ಮೂರ್ತಿ ಯನ್ನು ಗರ್ಭಗೃಹದಲ್ಲಿರಿಸಿ ಪೂಜೆ ಸಲ್ಲಿಸಲಾಗುವುದು. ಮುಂದೆ ಗರ್ಭಗೃಹದ ಪಕ್ಕದ ಕೋಣೆಯಲ್ಲಿರುವ ತೊಟ್ಟಿಲಲ್ಲಿ ಕೃಷ್ಣನ ಉತ್ಸವ ಮೂರ್ತಿಯನ್ನಿರಿಸಿ ಕೃಷ್ಣನ ಶಯನೋತ್ಸವಕ್ಕೆ ಸಿದ್ಧತೆಗಳು ಸಾಗುತ್ತವೆ.

ಹತ್ತಿಯ ದಿಂಬು ಹಾಗೂ ಹಾಸಿಗೆಯನ್ನು ತೊಟ್ಟಿಲಲ್ಲಿ ಹಾಸಿ ಇಬ್ಬದಿಗಳಲ್ಲಿ ಮುತ್ತಿನಂತ ತುಪ್ಪದ ದೀಪವನ್ನು ಬೆಳಗಿಸಿ, ಶ್ರೀಕೃಷ್ಣನ ಉತ್ಸವ ಮೂರ್ತಿಯನ್ನು ಶಯನ ಭಂಗಿಯಲ್ಲಿರಿಸಿದ ನಂತರ ಶ್ರೀಪಾದರು ಪೀತಾಂಬರವನ್ನು ಹೊದೆಸುವರು. ಆಮೇಲೆ ಪ್ರತಿಮೆಗೆ ಹೂವನಿರಿಸಿ, ಪರಿಮಳ ಸುಗಂಧ ದ್ರವ್ಯಗಳನ್ನು ಚಿಮುಕಿಸಿ ಲಡ್ಡು–ಹಾಲು, ಕಷಾಯ ಸಿಹಿಯನ್ನು ನಿವೇದಿಸಿದ ನಂತರ ತೊಟ್ಟಿಲು ತೂಗುತ್ತಾ ಜೋಗುಳ ಹಾಡುತ್ತಾ ದಿನದ ಕೊನೆಯ ಪೂಜೆಯನ್ನು ಪೂರೈಸುವರು. ಗೋಕುಲದ ಯಶೋದಾ ಮಾತೆಯ ಕೃಷ್ಣ ಪ್ರೇಮವನ್ನು ನೆನಪಿಸುವ ಈ ಕ್ಷಣದಲ್ಲಿ ನೆರೆದಿರುವ ಸಮಸ್ತರು ಭಾವಪರವಶರಾಗುವರು. ಪೂಜಾನಂತರ ಯತಿಗಳು, ವಿದ್ವಾಂಸರು, ಹಾಗೂ ಭಕ್ತವೃಂದದವರೆಲ್ಲಾ ಶ್ರೀ ವಾದಿರಾಜ ವಿರಚಿತ ಲಕ್ಷ್ಮೀಶೋಭಾನೆ ಹಾಡಿನ ಕೊನೆಯ ಚರಣವನ್ನು ಹಾಡುತ್ತಿದ್ದಂತೆ 3 ಬಾರಿ ಶಂಖನಾದವು ಮೊಳಗುವುದು. ಸಂಗೀತಪ್ರಿಯ ಕೃಷ್ಣನ ಪೂಜೆಯು ಹಾಡಿನೊಂದಿಗೆ ಆರಂಭವಾಗಿ ಹಾಡಿನೊಂದಿಗೆ ಸಮಾಪನಗೊಳ್ಳುವುದು.

ಇಷ್ಟೇ ಅಲ್ಲದೆ ಪರ್ವಕಾಲ, ಹಬ್ಬಹರಿದಿನಗಳಲ್ಲಿಯೂ ಕೂಡಾ ಕೃಷ್ಣನನ್ನು ವೈವಿಧ್ಯಮಯ ಸಂಗೀತ ಸೇವೆಗಳಿಂದ ಆರಾಧಿಸುವ ಸಂಪ್ರದಾಯವೂ ಇದೆ.

**ಜಾಗರ ಸೇವೆ :** ಚಾತುರ್ಮಾಸ್ಯ ಕಾಲದಲ್ಲಿ ಪ್ರತೀ ಏಕಾದಶಿಯಂದು ರಾತ್ರಿಯ ಎಲ್ಲಾ ಪೂಜೆಗಳು ಮುಗಿದ ನಂತರ ಜಾಗರ ಸೇವೆಯು ಸಂಪನ್ನಗೊಳ್ಳುತ್ತದೆ. ಪರ್ಯಾಯ ಯತಿಗಳು ಶ್ರೀಕೃಷ್ಣ ಪ್ರತಿಮೆಯ ಮುಂಭಾಗದ ತೀರ್ಥಮಂಟಪದ ಬಳಿ ಶಿರದ ಮೇಲೆ ಹರಿವಾಣದಲ್ಲಿ ಶ್ರೀಕೃಷ್ಣನಿಗೆ ಅರ್ಪಿಸಿದ ತುಳಸೀಯನ್ನು ಇರಿಸಿ "ಡಂಗುರವ ಸಾರೀರಯ್ಯಾ ಡಿಂಗರೀಗರೆಲ್ಲರೂ" ಎಂಬ ಹಾಡನ್ನು ಸ್ವತಃ ಹಾಡುತ್ತಾ ತಾಳಬದ್ಧವಾಗಿ ಹೆಜ್ಜೆಹಾಕುತ್ತಾ ಪ್ರದಕ್ಷಿಣೆ ಸಲ್ಲಿಸುತ್ತಾರೆ. ಈ ಸಂಗೀತ ಸೇವೆಯು ಇಂದಿಗೂ ಶ್ರೀಕೃಷ್ಣ ಮಠದಲ್ಲಿ ಚಾತುರ್ಮಾಸದ ಏಕಾದಶಿಯಂದು ಸಲ್ಲುತ್ತಿದೆ. ಶ್ರೀಪಾದರ ಜೊತೆಗೆ ಭಕ್ತವೃಂದದವರು ಕೂಡಾ ಈ ಸೇವೆಯಲ್ಲಿ ಪಾಲ್ಗೊಳ್ಳುತ್ತಾರೆ.

**ಪಕ್ಷಿಜಾಗರಣಪೂಜೆ :** ಧನುರ್ಮಾಸದ ಪ್ರಾತಃಕಾಲದಲ್ಲಿ ಪಕ್ಷಿಜಾಗರಣ ಪೂಜೆಗೂ ಮುಂಚಿತವಾಗಿ ಶ್ರೀಮಠದ ಚಂದ್ರಶಾಲೆಯಲ್ಲಿ ಸುಮಾರು 18 ಬಗೆಯ ಸಾಂಪ್ರದಾಯಿಕ ವಾದ್ಯಗಳ ಸೇವೆ ಒಂದು ತಿಂಗಳುಗಳ ಕಾಲ ನಿರಂತರವಾಗಿ ಜರಗುತ್ತದೆ. ಈ ಸಂದರ್ಭದಲ್ಲಿ ಪ್ರಸ್ತುತಪಡಿಸುವ ಸೂರ್ಯವಾದ್ಯ, ದಿಡುಂಬು, ಉಡ್ಕು ವಾದ್ಯಗಳು ಅತ್ಯಂತ ಪ್ರಾಚೀನ ವಾದ್ಯಗಳೆಂದೆನಿಸಿದ್ದು ಇತ್ತೀಚಿನ ದಶಕದಲ್ಲಿ ಈ ಪ್ರಾಂತ್ಯದ ಯಾವ ಮಠಮಂದಿರಗಳಲ್ಲೂ ಈ ತೆರನಾದ ವಾದ್ಯಗಳ ಸೇವೆ ಲಭ್ಯವಿಲ್ಲ.

**ಹೋಳಿ :** ಹೋಳಿ ಹುಣ್ಣಿಮೆಯಂದು ಉಡುಪಿ ಸಮೀಪದ ಕೆಲ ಗ್ರಾಮೀಣ ಪ್ರದೇಶಗಳ ಭಕ್ತಸಮುದಾಯ ಬಣ್ಣ ಬಣ್ಣದ ವೇಷಧರಿಸಿ ಶಿರದಲ್ಲಿ ಸಿಂಗಾರ ಹೂ ಮುಡಿದುಕೊಂಡು ಶಂಖ, ತಾಳ, ತಮಟೆ ಗಂಟೆಯೊಂದಿಗೆ ಶ್ರೀಕೃಷ್ಣನ ರಾತ್ರಿಯ ರಥೋತ್ಸವದ ಕಾಲದಲ್ಲಿ ಶ್ರೀಕೃಷ್ಣನನ್ನು ಕೊಂಡಾಡುವ ಜನಪದ ಹಾಡುಗಳನ್ನು ಹಾಡುತ್ತಾ

ಆಕರ್ಷಕವಾಗಿ ನರ್ತಿಸುವ ಪದ್ಧತಿ ಈ ಹಿಂದೆ ರೂಢಿಯಲ್ಲಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ರಥೋತ್ಸವದ ಸಂದರ್ಭ ಇವರ ಉಪಸ್ಥಿತಿ ಅಪರೂಪವಾಗುತ್ತಿದೆ.

ತುಳಸೀ ಸಂಕೀರ್ತನೆ : ಸಂಕೀರ್ತನೆಯ ಮಾಸವೆಂದೇ ಕರೆಯಲ್ಪಡುವ ಕಾರ್ತಿಕ ಮಾಸದಲ್ಲಿ 15ದಿನಗಳ ಕಾಲ ರಾತ್ರಿ ತುಳಸೀಪೂಜೆಯ ನಂತರ ತಾಳ, ಡೋಲಕಿಯೊಂದಿಗೆ ಭಕ್ತಸಮುದಾಯ ಸುಮಾರು ಒಂದುಗಂಟೆ ಕಾಲ ಹಾಡು ನರ್ತನದೊಂದಿಗೆ ಶ್ರೀ ಕೃಷ್ಣನ ಗುಡಿಗೆ ಪ್ರದಕ್ಷಿಣೆಯನ್ನು ಸಲ್ಲಿಸುತ್ತಾ ವಿಶಿಷ್ಟ ಮಾದರಿಯ ಹರಿನಾಮ ಸಂಕೀರ್ತನೆಯನ್ನು ಅರ್ಪಿಸುತ್ತಾರೆ. ಈ ಸಂಕೀರ್ತನೆಗಳ ವೀಕ್ಷಣೆಗಾಗಿಯೇ ನಾಡಿನೆಲ್ಲೆಡೆಯಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ. ಶ್ರೀವಾದಿರಾಜರ ಹಾಗೂ ಇತರ ಅನೇಕ ಯತಿಗಳು ರಚಿಸಿದ ಕೃತಿಗಳನ್ನು ಈ ಸಂಕೀರ್ತನಾ ಕಾಲದಲ್ಲಿ ಹಾಡುತ್ತಾರೆ.

ಸಕಲ ವಿದ್ಯೆಗಳಿಗೆ ಜನಕನಾಗಿದ್ದರೂ ಕೂಡ ಜಗದ ಹಾಗೂ ಯುಗದ ನಿಯಮಾನುಸಾರ ಪ್ರಸಿದ್ಧ ಕಲಾವಿದನಾಗಿ, ಶ್ರೋತೃವಾಗಿ ಕಲಾಪ್ರೇಮಿಯಾಗಿ ಬಹುರೂಪದಲ್ಲಿ ಬಂದು, ನಿಶ್ಕಲ್ಮಷ ಹೃದಯದ ಭಕ್ತರ ಕಲಾರಾಧನೆಯಲ್ಲಿ ಮಿಂದು ಅವರನ್ನು ಅನವರತ ಸಲಹುತ್ತಿರುವ ಗಾನಲೋಲ ಶ್ರೀಕೃಷ್ಣನ ಲೀಲೆಯನ್ನು ಎಷ್ಟು ಪೊಗಳಿದರೂ ಸಾಲದು.

ಏನೇ ಇರಲಿ ಭಗವಂತನ ಪಾದದ ಒಲುಮೆಗೆ ಪಾತ್ರರಾಗಲು ಸಂಗೀತ ಸೇವೆಯೂ ಒಂದು ಸಾಧನ ಎಂಬ ಸತ್ಯವನ್ನು ಶ್ರೀಕೃಷ್ಣನು ಕಲಿಯುಗದಲ್ಲಿ ನಿರೂಪಿಸಿದ ಬಗೆ ಇದು. ಎಷ್ಟಾದರೂ ಉಡುಪಿ ಕೃಷ್ಣನು ಸಂಗೀತ ಪ್ರಿಯನಲ್ಲವೇ...!

**–ಪಿ. ಲಾತವ್ಯ ಆಚಾರ್ಯ,** ಉಡುಪಿ


**ಶುಭಾಶಯಗಳು**

**ಭೃಗುವಾಣಿಯ ಸಮಸ್ತ ಓದುಗರಿಗೆ ಮತ್ತು ಜಾಹೀರಾತುದಾರರಿಗೆ**




ದೀಪಗಳ ಹಬ್ಬ



**ದೀಪಾವಳಿಯು**

**ಶಾಂತಿ, ನೆಮ್ಮದಿ ಮತ್ತು ಸಂತಸದಾಯಕವಾಗಿರಲಿ ಎಂದು ಪತ್ರಿಕೆಯು ಹಾರೈಸುತ್ತದೆ.**


# ಮಮತೆಯ ಮಾತೆಗೆ ನಮನ



ಜನಿಸಿದ ಘಳಿಗೆಯೇ ತುಟಿಗಳು ಪಿಟಿಸುವ
ಮೊದಲನೆ ಪದವೇ ಅಮ್ಮ.....
ಕರುಳಿನಿಂದ ಜನಿಸಿ ಉಸಿರಿನ ಏರಿಳಿತದಿ,
ಹೊರಡುವ ಪದವೇ ಅಮ್ಮ ಅಮ್ಮಾ...

ಸಜ್ಜನರಿರಲಿ, ದುರ್ಜನರಿರಲಿ
ಸಂತಸವಿರಲಿ, ದುಃಖವೆ ಇರಲಿ
ಮನಸ್ಸಿನ ಭಾವನೆಯ, ಕೂಗಿನ ಮಾಧುರ್ಯದಿ
ಅರುಹುವ, ಕರೆಯುವ ಮುಗ್ಧ ಭಾಷೆ ಅಮ್ಮಾ!

ಅಮ್ಮಾ, ಓ ನನ್ನ ಅಮ್ಮಾ, ಲಕ್ಷ್ಮೀಯಮ್ಮಾ
ಹಸಿದಾಗ ಹಾಲುಣಿಸಿ, ಅತ್ತಾಗ ಅಕ್ಕರೆಯ ಮುತ್ತಿಕ್ಕಿ
ಬಿದ್ದಾಗಲೆಲ್ಲಾ ಬರಸೆಳೆದು ಭರವಸೆಯ ನುಡಿಕಲಿಸಿ
ಬದುಕಿನ ಕಣದಿ ಹೋರಾಟದ ಕಂಕಣ ತೊಡಿಸಿದಮ್ಮಾ

ಬಣ್ಣ, ಬಣ್ಣದ ಚಿತ್ತಾರ ಬಣ್ಣಿಸಿದ ನನ್ನ ಮುದ್ದಿನಮ್ಮಾ
ನಿನ್ನನೆಂತು ಬಣ್ಣಿಸಲಿ? ನಿನ್ನ ಹೆಗಲೆತ್ತರ ನಾ ಬೆಳೆದಾಗ,
ಗುರುವಾಗಿ ಗುರಿ ತೋರಿಸಿ, ಸೋತಾಗ ಗೆಲುವಿನ ಬಯಕೆ ಬಿತ್ತಿ
ಗೆದ್ದಾಗಲೆಲ್ಲಾ ತಲೆಯನೇವರಿಸಿ ಖುಷಿಪಟ್ಟ ನನ್ನಮ್ಮ

ಸಾಧನೆಯ ಶಿಖರವೇರಲು ನೀ ಮೆಟ್ಟಿಲುಗಳಾದೆ,
ಸಂತೋಷ ಸಂಭ್ರಮ ಪಡುವ ಹಾಡನುಲಿದೆ
ಕೊನೆಗೊಂದು ಮಾತು – ನಿನ್ನ ಹೊಗಳಲು ಸೋತಿಹೆನಮ್ಮ
ಮುಂದೆ ಮತ್ತಿನ್ನೊಂದು ಜನ್ಮವಿಂದೆರಲು ನೀ ನನಗೆ ಬಾಮ್ಮಾ

ಮಮತೆಯ ಮಡಿಲಲ್ಲಿ ಮಲಗಿಸಿ ಜೋಗುಳ ಹಾಡಿದ ನನ್ನಮ್ಮಾ
ನೀ ಏಕೆ ಪಂಚಭೂತಗಳಲ್ಲಿ ವಿಲೀನವಾದೆಯಮ್ಮ
ಮುತ್ತಿಟ್ಟ ತುಟಿಗಳು ಬೆಂಕಿಯಲಿ ಬೆಂದಾಗ ಕಂಡೆ,
ಮಿಡಿದ ಕರುಳು ಕೂಗಿತು ವಿದಾಯದ
ನೋವಿನಲಿ, ಮತ್ತೆ ಮತ್ತೆ ನೊಂದೆ

ಹೇಳುವೆನು ಸತ್ಯ , ನಿನ್ನ ನೆನೆಯುವೆನು ನಿತ್ಯ
ಎಲ್ಲೇ ಇರು, ಎಂತೇ ಇರು, ಎಂದೆಂದೂ ನೀ ನನ್ನಮ್ಮ ನಾಗು
ನೆಲೆಯಾಗು, ನಲಿವಾಗು ಈ ಕಂದಮ್ಮನಿಗೆ ಬೆಳಕಾಗು
ಓ ನನ್ನ ಮಮತೆಯ ಮಾತೆಯೇ ನಿನಗೆ ನಿತ್ಯ ನಮನ

**ರಚನೆ : ಟಿ.ಎಸ್. ನಾಗರಾಜ ಉಪಾಧ್ಯಾಯ**
ವಾಮಂಜೂರು

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್




# ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

---

ಶುಭಾಶಯಗಳನ್ನು ಕೋರುವವರು :



# ಉಡುಪಿ ಸ್ಟೋರ್ಸ್

ಗುಂಡೋಪಂತ ಬೀದಿ, ಮಾರ್ಕೆಟ್ ರಸ್ತೆ,
ಬೆಂಗಳೂರು - 560002

ಮನೆಗಳಿಗೆ, ದೇವಸ್ಥಾನಗಳಿಗೆ, ಹಾಗೂ
ಮಠಗಳಿಗೆ ಉಪಯುಕ್ತವಾದ ಪೂಜಾ ಸಾಮಗ್ರಿಗಳು,
ಉತ್ತಮ ದಾವಣಿ, ಮಗುಟ, ಮಡಿಪಂಚೆ,
ಗೋಪೀಚಂದನ, ಧಾರ್ಮಿಕ ಅಧ್ಯಾತ್ಮಿಕ ಪುಸ್ತಕಗಳು,
ಇಲ್ಲಿ ಸುಲಭ ದರದಲ್ಲಿ ದೊರೆಯುತ್ತದೆ.

ಸ್ಥಾಪಕರು : ಶ್ರೀ ಟಿ. ಆರ್. ಕೇಕುಡ

---

ಶುಭಾಶಯಗಳನ್ನು ಕೋರುವವರು :

## ಎಂ.ಜಿ.ಎಸ್‌ಕೆ. ವಧು ವರಾನ್ವೇಷಣಾ ಕೇಂದ್ರ

(ಅಖಿಲಾ ಕರ್ನಾಟಕ ಬ್ರಾಹ್ಮಣ ಸಭಾದ ಅಂಗ ಸಂಸ್ಥೆ)

ಈ ಸಂಸ್ಥೆಯು ಕಳೆದ ಹತ್ತು ವರ್ಷಗಳಲ್ಲಿ 100ಕ್ಕೂ ಹೆಚ್ಚು ವಧೂವರರ ಮುಖಾಮುಖಿ ಸಮಾವೇಶಗಳನ್ನು ವ್ಯವಸ್ಥೆಗೊಳಿಸಿ, ಸಾವಿರಕ್ಕೂ ಹೆಚ್ಚು ವಿವಾಹಗಳಿಗೆ ಕಾರಣೀಭೂತವಾಗಿದೆ. ವಿಧವೆಯರು, ಅಂಗವಿಕಲರು, ವಿಚ್ಛೇದಿತರು, ವಯೋಮಿತಿ ಮೀರಿದವರಿಗೆ ವಿಶೇಷ ಗಮನ ನೀಡಲಾಗುವುದು.

## ಕ್ಷೇಮ ಮಹಿಳಾ ವಸತಿ ನಿಲಯ

ದುಡಿಯುವ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸುಸಜ್ಜಿತವಾದ, ಸುಭದ್ರವಾದ ಸಸ್ಯಾಹಾರೀ ಊಟ ವಸತಿಗಳನ್ನು ಮಿತವ್ಯಯದಲ್ಲಿ ಒದಗಿಸಲಾಗುವುದು.

*ಹೆಚ್ಚಿನ ವಿವರಗಳಿಗೆ :* **ಸುಮಂಗಲಾ ಎಸ್. ಆಚಾರ್**
*ದೂರವಾಣಿ : 26791217, 26710797, 9844320328*

ಸೋಮೇಶ್ವರ 3799, 13ನೇ ಕ್ರಾಸ್, ಬನಶಂಕರಿ 2ನೇ ಹಂತ
(ಇಂದಿರಾ ನರ್ಸಿಂಗ್ ಹೋಂ ಬಸ್‌ಸ್ಟಾಪ್ ಹತ್ತಿರ) ಬೆಂಗಳೂರು - 70

---

ಶುಭಾಶಯಗಳೊಡನೆ,

## ಕೋಟೇಶ್ವರ ಸೂರ್ಯನಾರಾಯಣ ರಾವ್

ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

**ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.**
ಅಧ್ಯಕ್ಷರು


ಉದ್ಯಮ :

## ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್

21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು - 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# ಆನಂದ ಬಳಗ ಪ್ರೀಮಿಯರ್ ಲೀಗ್ 2014

## 01-11-2014



### ಐ.ಪಿ.ಎಲ್, ಕೆ.ಪಿ.ಎಲ್ ಜನಪ್ರಿಯತೆಯ ನಂತರ
### ಇದೀಗ ಮೊತ್ತ ಮೊದಲ ಪ್ರಯೋಗ
### ಎ.ಪಿ.ಲ್ (ಆನಂದ ಬಳಗ ಪ್ರೀಮಿಯರ್ ಲೀಗ್) 2014

**ಬಳಗವು ಎಲ್ಲಾ ಉಪವಿಭಾಗಗಳ ಸಹಯೋಗದೊಂದಿಗೆ**
**ದಿ.01-11-2014ರ ಶನಿವಾರ**
**(ಕರ್ನಾಟಕ ರಾಜ್ಯೋತ್ಸವದ ದಿನ) ಬೆಳಿಗ್ಗೆ 7 ರಿಂದ ಸಂಜೆ 6ರವರೆಗೆ**
**ಎಪಿಎಲ್ ಕ್ರಿಕೆಟ್ ಪಂದ್ಯಾವಳಿಯನ್ನು ಸಂಯೋಜಿಸಿದೆ.**



ಸ್ಥಳ : **ರೈಲ್ವೇ ಕ್ರೀಡಾಂಗಣ** (ರೈಲ್ವೇ ಆಸ್ಪತ್ರೆ ಎದುರು)
ಎಂ.ಜಿ. ಕಾಲನಿ, ಓಕುಳಿಪುರಂ, ಬೆಂಗಳೂರು - 560 023
(ಮೆಜೆಸ್ಟಿಕ್‌ನಿಂದ ರಾಜಾಜಿನಗರಕ್ಕೆ ಹೋಗುವ ರಸ್ತೆಯಲ್ಲಿ, ಓಕುಳಿಪುರಂ ಟ್ರಾಫಿಕ್ ಸಿಗ್ನಲ್‌ನಲ್ಲಿ ಎಡಕ್ಕೆ ತಿರುಗಬೇಕು)

ಆನಂದ ಬಳಗದ ಸದಸ್ಯರೇ ಪ್ರಾಯೋಜಿಸಿರುವ ಎಂಟು ತಂಡಗಳು ಪ್ರಶಸ್ತಿಗಾಗಿ ಸೆಣೆಸಾಡಲಿದ್ದು ವಿಜೇತ ತಂಡಕ್ಕೆ ಆಕರ್ಷಕ ರೋಲಿಂಗ್ ಶೀಲ್ಡ್ ಲಭಿಸಲಿದೆ.

ಎಪಿಲ್ ದಿನ ಸದಸ್ಯರಿಗೆ ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಭೋಜನ ಮತ್ತು ಸಂಜೆಯ ಲಘು ಉಪಾಹಾರದ ವ್ಯವಸ್ಥೆಯನ್ನು ಕ್ರೀಡಾಂಗಣದಲ್ಲೇ ಮಾಡಲಾಗಿದೆ.

ಸದಸ್ಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ದಿನಪೂರ್ತಿ ನಮ್ಮೊಂದಿಗಿದ್ದು, ಕ್ರೀಡಾಳುಗಳನ್ನು ಪ್ರೋತ್ಸಾಹಿಸಿ, ಎಪಿಎಲ್ 2014ನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**ವಿಶೇಷ ಆಕರ್ಷಣೆ!**

ಮಕ್ಕಳಿಗೆ ವಿವಿಧ ರೀತಿಯ ಮೋಜಿನ ಹಾಗೂ ಮನೋರಂಜನಾ ಆಟಗಳನ್ನು ಏರ್ಪಡಿಸಿ, ಆಕರ್ಷಕ 'On the Spot' ಬಹುಮಾನಗಳನ್ನು ನೀಡಲಾಗುವುದು. ಮಕ್ಕಳೇ... ಅವಕಾಶವನ್ನು Miss ಮಾಡಬೇಡಿ.....

| **ವೈ. ರಾಧಾಕೃಷ್ಣ** | **ಎಂ.ಕೆ. ಗುರುಮೂರ್ತಿ** | **ಪಿ.ಎಸ್. ಬಾಗಿಲ್ತಾಯ** |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

**ವಿ.ಸೂ: ಬೃಹತ್ ಸಂಖ್ಯೆಯಲ್ಲಿ ವೀಕ್ಷಕರು ಸೇರಲಿರುವ ಎಪಿಲ್ 2014 ಕ್ರೀಡಾಂಗಣದ ಸುತ್ತ ಜಾಹೀರಾತು ಬ್ಯಾನರ್‌ಗಳನ್ನು ಹಾಕಲು ಅವಕಾಶವಿದ್ದು, ಇದರ ಸದುಪಯೋಗವನ್ನು ಪಡೆಯಲು ಆಸಕ್ತಿಯುಳ್ಳವರು ಎಪಿಲ್ ಸಂಚಾಲಕರಾಗಿರುವ ಶ್ರೀ ಎಂ.ಕೆ. ಗುರುಮೂರ್ತಿ (98440 2269) ಶ್ರೀ ಎಂ. ದಿನೇಶ್‌ರಾವ್ (99456 88955) ಅಥವಾ ಶ್ರೀ ಎ. ಸಂದೀಪ್ (98450 98150) ಇವರನ್ನು ಸಂಪರ್ಕಿಸಲು ಕೋರಲಾಗಿದೆ.**


**(ಎಪಿಲ್‌ನಲ್ಲಿ ಭಾಗವಹಿಸುವ ತಂಡಗಳ ವಿವರಗಳನ್ನು ಪುಟ 19ರಲ್ಲಿ ನೀಡಲಾಗಿದೆ.)**

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು

ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments*

# Mr. B.G.Bairy

*Managing Director*

*Bayir Group of Companies*

Bayir Chemicals | Bayir Extracts Pvt. Ltd. | Beloorbayir Biotech Ltd. | Sneha Natura




*Future with Nature*

## Makers of Quality based herbal formulations

SAGUN CAPSULE : Anti Arthritic
HEPBAC Capsule : Liver corrective
NUTRIHERB Capsule :For general debility
ARSHACARE Capsule: For Ano-rectal care
LAXSEN Capsule : Safe Laxative
MEDHYN Capsule : Stress reliever
AYUGINEE Tablet: Natural cartilage protective

SAGUN Liniment : Topical Analgesic
HEPBAC Syrup : Ideal Appetizer
BYEKOF Syrup :Effective cough remedy
MEDHYN Syrup: Memory enhancer

## Other Therapeutic formulations

GINEE Tablet : For Osteo Arthritis | BYCAL Tablet : Richest Calcium
BYNAC Tablet :Analgesic & Anti pyretic | BYFOL Tablet: For Folate deficiency

*For more details, contact :*

**SNEHA NATURA, A unit of Bayir Group, Corporate Office,**
**No. 92/1/1, PVR Towers, Katriguppa Main Road, Bangalore- 85**
**INDIA**
**Ph : 91-80-26798464, 91-80-43489900 upto 99, Fax : 91-80- 26890518**
**E-mail: bayirche@gmail.com**
**WEB: www.bayirextracts.com**

" ನನ್ನ ಬ್ಯಾಂಕ್ ಖಾತೆ ನನಗೆ ಬೇಕಾದಂತೆ "



ಕೆಬಿಎಲ್

# ವನಿತಾ

ಮಹಿಳೆಯರಿಗಾಗಿ ಉಳಿತಾಯ ಖಾತೆ

ಕೆಬಿಎಲ್ ವನಿತಾ ಹೊಸ ಉಳಿತಾಯ ಖಾತಾ ಸೌಲಭ್ಯವನ್ನು ವಿಶೇಷವಾಗಿ ಮಹಿಳೆಯರಿಗಾಗಿಯೇ ಪ್ರಸ್ತುತ ಪಡಿಸಲು ಹೆಮ್ಮೆಪಡುತ್ತಿದ್ದೇವೆ. ಹಲವಾರು ಸೌಲಭ್ಯಗಳನ್ನು ಹೊಂದಿರುವ ಇದು ಎಲ್ಲಿ, ಯಾವಾಗಲಾದರೂ ಬ್ಯಾಂಕಿಂಗ್ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ನೆರವಾಗುತ್ತದೆ.

**ವಿಶೇಷ ಸೌಲಭ್ಯಗಳು***

- ಕನಿಷ್ಠ ಉಳಿಕೆ ಇರಬೇಕೆಂದಿಲ್ಲ
- ಉಚಿತ ಮನಿಪ್ಲಾಂಟ್-ಅಂತಾರಾಷ್ಟ್ರೀಯ ವೀಸಾ ಡೆಬಿಟ್ ಕಾರ್ಡ್
- ಉಚಿತ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯ
- ಉಚಿತ ಎಸ್‌ಎಂಎಸ್
- ಬಹುಶಾಖಾ ಸೌಲಭ್ಯ
- ಉಚಿತವಾಗಿ ಹಣ ವರ್ಗಾವಣೆ

**ಉಚಿತ**
₹50,000* ದವರೆಗೆ
ಚಿನ್ನಾಭರಣಗಳ
ಮೇಲೆ ವಿಮೆ

**ಸರಳ ಬ್ಯಾಂಕಿಂಗ್‌ಗಾಗಿ ಕೆಬಿಎಲ್ ವನಿತಾ ಉಳಿತಾಯ ಖಾತೆ ಇಂದೇ ತೆರೆಯಿರಿ.**

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

**ಕರ್ಣಾಟಕ ಬ್ಯಾಂಕ್ ಲಿ.**

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002    ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

# HOTEL AJANTHA GROUP OF HOSPITALITY SERVICES

## HOTEL AJANTHA

***A Boarding and Lodging Hotel of repute with spacious place for parking***
***Party Halls and All facilities***

No. 22/A, Mahatma Gandhi Road, Bangalore-560 001
Phone : 25584321    Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for***
***Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

# ಆನಂದ ಸಭಾಗೃಹ

ಬನ್ನೇರುಘಟ್ಟ ರಸ್ತೆ, ಬೆಂಗಳೂರು




## ಸಮಾರಂಭಗಳಿಗೆ ಸುಸಜ್ಜಿತವಾದ ಸಭಾಭವನ

ಆನಂದ ಬಳಗ (ರಿ.) ಬೆಂಗಳೂರು ಇವರು ಆನಂದ ಬಳಗ ಚಾರಿಟೇಬಲ್ ಟ್ರಸ್ಟ್‌ನ ಸಹಯೋಗದೊಂದಿಗೆ ನಿರ್ಮಿಸಿದ ಆನಂದ ಸಭಾಗೃಹ ಇದೀಗ ಸಾರ್ವಜನಿಕ ಆಸಕ್ತರ ಉಪಯೋಗಕ್ಕಾಗಿ ಸುಸಜ್ಜಿತವಾಗಿ ರೂಪುಗೊಂಡಿದೆ.

### ಸಭಾಗೃಹದ ವಿಶೇಷತೆಗಳು

- ಪ್ರಶಾಂತವಾದ ಪರಿಸರ, ಧಾರಾಳವಾದ ಪಾರ್ಕಿಂಗ್ ಜಾಗ
- ನಗರದ ಜಂಜಡಗಳಿಂದ ದೂರ; ಆದರೆ ಸಿಟಿಯ ಅನುಕೂಲಗಳಿಗೆ ಹತ್ತಿರ
- ಜಯದೇವ ಹೃದ್ರೋಗ ಆಸ್ಪತ್ರೆಯಿಂದ ಸುಮಾರು 15 ಕಿ.ಮೀ. ದೂರ.
- 750 ಜನರಿಗೆ ಆಸನ ವ್ಯವಸ್ಥೆಯುಳ್ಳ ಸಭಾಂಗಣ / ಕಲ್ಯಾಣ ಮಂಟಪ
- ವಿಸ್ತಾರವಾದ ವೇದಿಕೆ - ಎರಡು ಗ್ರೀನ್ ರೂಮುಗಳು
- ಸುಸಜ್ಜಿತವಾದ 10 ವಾಸ್ತವ್ಯ ಕೊಠಡಿಗಳು
- ಒಂದು ಸಾರಿ 300 ಜನರಿಗೆ ಅವಕಾಶವುಳ್ಳ ಭೋಜನ ಶಾಲೆ, ಡೈನಿಂಗ್ ಟೇಬಲ್, ಕುರ್ಚಿ ವ್ಯವಸ್ಥೆ
- ಆಧುನಿಕ ರೀತಿಯ ಅಡುಗೆ ಕೋಣೆ
- ವಿಪುಲವಾದ ನೀರಿನ ಲಭ್ಯತೆ, ಜನರೇಟರ್‌ನ ವ್ಯವಸ್ಥೆ

**ಮಾತ್ರವಲ್ಲ: ಬಾಡಿಗೆ ದರವೂ ಬಹಳಷ್ಟು ಕಡಿಮೆ**

ಮುಂಗಡ ಕಾಯ್ದಿರಿಸಲು ಮತ್ತು ಹೆಚ್ಚುವರಿ ವಿವರಗಳಿಗೆ ಸಂಪರ್ಕಿಸಿ :

**ಶ್ರೀ ಕುಮಾರ ಸ್ವಾಮಿ**
ವ್ಯವಸ್ಥಾಪಕರು, ಆನಂದ ಸಭಾಗೃಹ
ಸೈಟ್ ನಂ . 23, ಬನ್ನೇರು ಘಟ್ಟ ರಸ್ತೆ, ಬನ್ನೇರುಘಟ್ಟ ಗ್ರಾಮ ಪಂಚಾಯಿತಿ,
ಬೆಂಗಳೂರು – 560 083 ದೂರವಾಣಿ : 96630 35533

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in



# ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

**Services Offered :**

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking

**For**

- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:
MR. DINESH RAO MUNDRUPPADY MOB: 99456 88955
MR. VASUDEVAN T S MOB: 98450 26743
MR. VIJAY KUMAR KULKARNI MOB: 99456 96649

*With Best Compliments from :*

# ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

## HOTEL Sheethal

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



## Sheethal Residency

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

ಎ. ಪ್ರಭಾಕರ ರಾವ್ ಮ್ಯಾನೇಜಿಂಗ್ ಪಾರ್ಟ್‌ನರ್

---

*With Best Compliments from :*

## Moola Tools LLP
## Moola Technologies (P) Limited
## Erkadi Systems

***Manufacturers of Ventilators, Monitors, Operation room equipments, Anaesthesia Machines and other equipments.***

# 109, Electronic City, 1st Phase, Hosur Road,
Bangalore - 560 100
Tel : 080 - 2852 2442, 2852 2443,
Fax : 080 - 2852 2441
***Email : sales@erkadi.com***

*K.V. Murthy Yerkadithaya*
Chairman

*K.Y. Ashok Murthy*
Managing Director

## 2014ರ ನವಂಬರ್-2015ರ ಜನವರಿ ಅವಧಿಯ ವಿಶೇಷ ದಿನಗಳು

| | | |
|---|---|---|
| ನವೆಂಬರ್ 3 | ಸೋಮವಾರ | ಸರ್ವೈಕಾದಶಿ |
| ನವೆಂಬರ್ 4 | ಕುಜವಾರ | ಉತ್ಥಾನ ದ್ವಾದಶಿ, ಕ್ಷೀರಾಬ್ಧಿ ಪೂಜಾ ಉಡುಪಿ ಲಕ್ಷದೀಪ ಆರಂಭ |
| ನವೆಂಬರ್ 5 | ಬುಧವಾರ | ವೈಕುಂಠ ಚತುರ್ದಶೀ |
| ನವೆಂಬರ್ 6 | ಗುರುವಾರ | ಪೂರ್ಣಿಮಾ - ಉಡುಪಿ ಲಕ್ಷದೀಪ ಸಮಾಪ್ತಿ |
| ನವೆಂಬರ್ 9 | ರವಿವಾರ | ಕನಕದಾಸ ಜಯಂತೀ |
| ನವೆಂಬರ್ 16 | ರವಿವಾರ | ವೃಶ್ಚಿಕ ಸಂಕ್ರಮಣ |
| ನವೆಂಬರ್ 18 | ಕುಜವಾರ | ಸರ್ವೈಕಾದಶೀ |
| ನವೆಂಬರ್ 22 | ಶನಿವಾರ | ಅಮಾವಾಸ್ಯಾ |
| ನವೆಂಬರ್ 24 | ಚಂದ್ರವಾರ | ಉಡುಪಿ ಚಂದ್ರಮೌಳೀಶ್ವರ ರಥ |
| ನವೆಂಬರ್ 27 | ಗುರುವಾರ | ಸುಬ್ರಹ್ಮಣ್ಯ ಷಷ್ಠಿ |
| ದಶಂಬರ 2 | ಕುಜವಾರ | ಸರ್ವೈಕಾದಶೀ |
| ದಶಂಬರ 6 | ಶನಿವಾರ | ಪೂರ್ಣಿಮಾ |
| ದಶಂಬರ 16 | ಕುಜವಾರ | ಧನುಸ್ಸಂಕ್ರಮಣ |
| ದಶಂಬರ 18 | ಗುರುವಾರ | ಸರ್ವೈಕಾದಶೀ |
| ದಶಂಬರ 22 | ಚಂದ್ರವಾರ | ಎಳ್ಳಮಾವಾಸ್ಯೆ, ಸಮುದ್ರಸ್ನಾನ |
| ಜನವರಿ2015,1 | ಗುರುವಾರ | ಸರ್ವೈಕಾದಶೀ |
| ಜನವರಿ 2 | ಶುಕ್ರವಾರ | ಸೌರಮುಕ್ಕೋಟಿ ದ್ವಾದಶಿ |
| ಜನವರಿ 5 | ಚಂದ್ರವಾರ | ಪೂರ್ಣಿಮಾ |
| ಜನವರಿ 9 | ಶುಕ್ರವಾರ | ಉಡುಪಿ ಸಪ್ತೋತ್ಸವ ಆರಂಭ |
| ಜನವರಿ 14 | ಬುಧವಾರ | ಮಕರ ಸಂಕ್ರಮಣ, ಉಡುಪಿ ಬ್ರಹ್ಮೋತ್ಸವ (ಮೂರು ತೇರು) |
| ಜನವರಿ 15 | ಗುರುವಾರ | ಉಡುಪಿ ಸುವರ್ಣೋತ್ಸವ |
| ಜನವರಿ 17 | ಶನಿವಾರ | ವೈಷ್ಣವೈಕಾದಶೀ |
| ಜನವರಿ 20 | ಕುಜವಾರ | ಅಮಾವಾಸ್ಯೆ |
| ಜನವರಿ 26 | ಚಂದ್ರವಾರ | ರಥಸಪ್ತಮಿ |
| ಜನವರಿ 27 | ಕುಜವಾರ | ಭೀಷ್ಮಾಷ್ಟಮೀ |
| ಜನವರಿ 28 | ಬುಧವಾರ | ಮಧ್ವನವಮೀ |
| ಜನವರಿ 30 | ಶುಕ್ರವಾರ | ಸರ್ವೈಕಾದಶೀ |
| ಜನವರಿ 31 | ಶನಿವಾರ | ವಾದಿರಾಜ ಜಯಂತೀ |

(ಆಧಾರ : ಉಡುಪಿ ಶ್ರೀಪೂರ್ಣಪ್ರಜ್ಞ ಪಂಚಾಂಗ)

**ಹಂಸ ಧ್ವನಿ - 4**

### P....A.....S....S.... = SUCCESS

P = PLANNING / PUNCTUALITY
A = ACTIVE / ADJUSTIVE
S = SATISFACTION / SEVA (SERVICE)
S = SIMPLICITY / SINCERITY
= SUCCESS

**ಹಂದಾಡಿ ಸತ್ಯನಾರಾಯಣ ರಾವ್**

# ವದಂತಿಗಳು

ತಿಂದು ಕಾರಿದನೆಂದ ಒಬ್ಬ
ಕಪ್ಪು ಕಾರಿದನೆಂದ ಇನ್ನೊಬ್ಬ
ಕಾಗೆಯಂತೆ ಕಪ್ಪೆಂದ ಮತ್ತೊಬ್ಬ
ಕಾಗೆಯೇ ಕಾರಿದನೆಂದ ಮಗದೊಬ್ಬ ॥ 1 ॥

ತಿಂದು ಕಾರಿದ್ದು ಮೂರು ಕಾಗೆಯೆಂದ ರಾಜ
ಅದು ನೂರೆಂದ ಇನ್ನೊಬ್ಬ ಮಹಾರಾಜ
ಇಂತಿದೆ ವದಂತಿಗಳ ಹರಿವು
ಒಂದು ಮೂರಾಗಿ, ಮೂರು ನೂರಾಗುವ ಅವು ॥ 2 ॥

ರಾಮ ಉಸುರಿದ ಭೀಮನಿಗೆ
ಭೀಮ ಅರುಹಿದ ಕೃಷ್ಣ ಅನಂತರಿಗೆ
ಅನಂತನಿಂದಾಯಿತು ಅದೇ ಅನಂತಾನಂತ
ಕೇರಿ ಊರಿಗೆಲ್ಲಾ ಪಸರಿಸಿದ ಈ ಕತೆ ಅನಂತ ॥ 3 ॥

'ಅಂತೆ ಅಂತೆ' ಎಂದು ಹರಡುವ ಈ ಮಾತಿನ ಕಂತೆ
ಗಾಳಿಮಾತಾಗಿ, ಮಾತೆ ಗಾಳಿಯಾದಂತೆ
ಮಸಾಲೆಮಾತಾದರೆ ಅದು ಬಿರುಗಾಳಿಯೇ
ನಾಲಿಗೆಗಳಿಂದ ಕಿವಿಗಳಿಗೆ ಗಳಿಗೆಯಲ್ಲಿಯೇ ॥ 4 ॥

ಪದುಮಳ ಸೊಸೆ, ವಿನುತಳ ಅತ್ತೆಯ ಬಗ್ಗೆ
ಸರಸಿ-ಶೀನರ ಸರಸ, ಕಿಶೋರಿ ಶಾರಿಯ ಗುಪ್ತವಿಹಾರ
ಕಾಡಂಚಿನ ಹುಲಿ, ಕಾನನದೊಳಗಿನ ಕೀಳುದೆವ್ವಗಳ ಬಗ್ಗೆ
ವದಂತಿಗಳ ಹೇರಳ ಲಗ್ಗೆ ॥ 5 ॥

ನಾಲಿಗೆಯೊಂದಾದರೆ ಕಿವಿಗಳು ಹಲವು
ಮಸಾಲೆ ಮಾತಿಗೆ ಏರಿದ ಒಲವು
ಬಾಯಿ ಚಪ್ಪರಿಸಿ ಕೇಳುವ ತವಕ
ತಲೆಯೊಳಗೆ ಹೊಗೆಯಾಡುವ ತನಕ ॥ 6 ॥

'ಜನಾಃ ವದಂತಿ' ಎಂಬುದು ಸಂಸ್ಕೃತ ರೂಪ
ಮಾತಿಗೆ ಜವಾಬ್ದಾರರಿಲ್ಲದ ಈ ಪ್ರರೂಪ
ಹರಟೆಗೆ ಹೂರಣ ಈ ಗಾಳಿಮಾತುಗಳು
ಹೈರಾಣಾಗುವರು ವದಂತಿಯ ಮೂಲವ್ಯಕ್ತಿಗಳು ॥ 7 ॥

**ಡಾ. ಶ್ರೀವೆಂಕಟರಮಣ, ತಲಪಾಡಿ**

# ಗಣೇಶೋತ್ಸವ 2014

ಇದೇ ತಾರೀಖು 7.09.2014ರಂದು ಆನಂದ ಬಳಗದ ಯುವ ವಿಭಾಗದ ವತಿಯಿಂದ ಗಣೇಶೋತ್ಸವವನ್ನು ಆನಂದ ಸಭಾಗೃಹದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಸುಮಾರು 350 ಬಳಗದ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಹಾಗಣಪತಿಯ ಕೃಪೆಗೆ ಪಾತ್ರರಾದರು. ಪೂರ್ವಾಹ್ನ 9.30ಕ್ಕೆ



ಪುರೋಹಿತರಾದ ಶ್ರೀ ವಿಷ್ಣುಮೂರ್ತಿ ಸರಳಾಯರ ನೇತೃತ್ವದಲ್ಲಿ ಷಟ್‌ನಾರಿಕೇಳ ಗಣಯಾಗ ಪ್ರಾರಂಭಗೊಂಡಿತು. ಗಣಹೋಮದ ಸಮಯದಲ್ಲಿ ಬಳಗದ ಸದಸ್ಯರು ವಿಷ್ಣು ಸಹಸ್ರನಾಮ ಪಾರಾಯಣವನ್ನು ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿದ್ವಾನ್ ಶ್ರೀ ಹರಿದಾಸ ಭಟ್ಟರ ಆದೇಶಾನುಸಾರ ಪಠಿಸಿದರು. ಸುಮಾರು ಪೂರ್ವಾಹ್ನ 11.30ಕ್ಕೆ ಗಣಯಾಗದ ಪೂರ್ಣಾಹುತಿ ಸಂಪನ್ನಗೊಂಡಿತು. ತದನಂತರ ಶ್ರೀ ಹರಿದಾಸ ಭಟ್ಟರು ಸಭೆಯನ್ನುದ್ದೇಶಿಸಿ ಹಿತವಚನವನ್ನು ನುಡಿದರು. ಅವರಿಗೆ ನಮ್ಮ ಬಳಗದ ಉಪಾಧ್ಯಕ್ಷರಾದ ಶ್ರೀ ರಾಮಚಂದ್ರ ಉಪಾಧ್ಯರು ಹಾಗೂ ಯುವ ವಿಭಾಗದ ಸಂಚಾಲಕರಾದ ಶ್ರೀ ಸಂದೀಪ ರಾವ್‌ರವರು ಶಾಲು ಹೊದಿಸಿ, ಫಲಪುಷ್ಪಗಳೊಂದಿಗೆ ಸನ್ಮಾನಿಸಿದರು. 12.30 ಗಂಟೆಗೆ ಸರಿಯಾಗಿ ಮಹಾಗಣಪತಿಗೆ ಮಂಗಳಾರತಿ ನೆರವೇರಿತು ಹಾಗೂ ಬಂದಂತಹ ಸದಸ್ಯರಿಗೆಲ್ಲ ಪ್ರಸಾದ ವಿತರಿಸಲಾಯಿತು. ಅನಂತರ ಸದಸ್ಯರೆಲ್ಲರೂ ಪ್ರಸಾದ ಭೋಜನವನ್ನು ಸ್ವೀಕರಿಸಿದರು.

ಅದೇ ಮಧ್ಯಾಹ್ನ ಗಣೇಶನ ವಿಗ್ರಹವನ್ನು ಸಭಾಗೃಹದ ಪರಿಸರದಲ್ಲೇ ವಿಸರ್ಜನೆ ಮಾಡುವ ಮೂಲಕ ಕಾರ್ಯಕ್ರಮವು ಸಂಪನ್ನಗೊಂಡಿತು. ಶ್ರೀ ಅನಂತರಾಜ್‌ರವರು ಗಣೇಶ ವಿಗ್ರಹದ ಹಾಗೂ ಶ್ರೀ ವೆಂಕಟರಾಜ ಭಟ್ ಹಾಗೂ ತಂಡದವರು ಭೋಜನದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನೆರವೇರಿಸಿದರು. ಬಂದಂತಹ ಸದಸ್ಯರೆಲ್ಲರೂ ತನು, ಮನ, ಧನದಿಂದ ಸಹಕರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

*With Best Compliments From :*

**M. BHASKAR RAO**

**ಶ್ರೀ ಗಣೇಶ ಸ್ಟೀಲ್ ಸೆಂಟರ್**

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

# ಆನಂದ ಬಳಗದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ವರದಿ

2013-14ನೇ ಸಾಲಿನ ಆನಂದ ಬಳಗದ ಸರ್ವಸದ್ಯರ ವಾರ್ಷಿಕ ಮಹಾಸಭೆಯು ದಿನಾಂಕ 21.9.2014ರ ಭಾನುವಾರದಂದು ಮಹಾತ್ಮಗಾಂಧಿ ರಸ್ತೆಯಲ್ಲಿರುವ ಅಜಂತಾ ಹೋಟೆಲಿನ ಸಭಾಂಗಣದಲ್ಲಿ ಪೂರ್ವಾಹ್ನ ಗಂಟೆ 10.30ಕ್ಕೆ ಸರಿಯಾಗಿ ನಡೆಯಿತು. ನಿಗದಿತ ಹಾಜರಾತಿಯನ್ನು ಖಚಿತ ಪಡಿಸಿಕೊಂಡ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯ ಬಾಗಿಲ್ತಾಯರು ಸಭೆಯನ್ನು ವಿಧಿವತ್ತಾಗಿ ಆರಂಭಿಸಿದರು. ವೇದಿಕೆಯಲ್ಲಿ, ಅಧ್ಯಕ್ಷರು, ಉಪಾಧ್ಯಕ್ಷರುಗಳಾದ ಶ್ರೀಮತಿ ಗೀತಾ ವಾಸುದೇವ ರಾವ್, ಶ್ರೀ ಬಿ. ರಾಮಚಂದ್ರ ಉಪಾಧ್ಯ, ಶ್ರೀ ಯು.ಬಿ. ವೆಂಕಟೇಶ್, ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳು ಉಪಸ್ಥಿತರಿದ್ದರು. ಹಿರಿಯ ಸದಸ್ಯ ಶ್ರೀ ಬಿ. ರಾಮದಾಸ ತಂತ್ರಿಯವರು ಪ್ರಾರ್ಥನೆಯನ್ನು ನಡೆಸಿಕೊಟ್ಟಿರು.

ಆಗಮಿಸಿದ ಸದಸ್ಯರನ್ನು ಉಪಾಧ್ಯಕ್ಷರಾದ ಶ್ರೀ ಬಿ. ರಾಮಚಂದ್ರ ಉಪಾಧ್ಯರು ಸ್ವಾಗತಿಸಿದರು. 2013-14ನೇ ಸಾಲಿನಲ್ಲಿ ನಮ್ಮನ್ನಗಲಿದ ಸದಸ್ಯರ ಬಗ್ಗೆ ಒಂದು ನಿಮಿಷದ ಮೌನ ಪ್ರಾರ್ಥನೆಯ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಕೋಶಾಧಿಕಾರಿ ಶ್ರೀ ಎಂ.ಕೆ.ಗುರುಮೂರ್ತಿಯವರು 18.8.2013ರಂದು ನಡೆದ 2013-14ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ವರದಿಯನ್ನು ಓದಿ ಸಭೆಯ ಮುಂದಿಟ್ಟರು. ಅಂತೆಯೇ 2012-13ನೇ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ವೈ ರಾಧಾಕೃಷ್ಣರವರು ಓದಿ ಸಭೆಗೆ ತಿಳಿಸಿದರು. ಶ್ರೀ ಗುರುಮೂರ್ತಿಯವರು 31.3.2014ಕ್ಕೆ ಅಂತ್ಯಗೊಂಡ ವರ್ಷದ ಪರಿಶೋಧಿತ ಲೆಕ್ಕ ಪತ್ರಗಳ ಮುಖ್ಯಾಂಶಗಳನ್ನು ಸಭೆಗೆ ತಿಳಿಸಿದರು. ಈ ಮೂರು ವರದಿಗಳ ಬಗ್ಗೆ ಸದಸ್ಯರಿಂದ ಪ್ರತಿಕ್ರಿಯೆಗಳನ್ನು ಆಹ್ವಾನಿಸಲಾಯಿತು.

ಬಳಗದ ಕಾರ್ಯಕ್ರಮಗಳ ಬಗ್ಗೆ ಹಾಗೂ ಕಳೆದ ವಾರ್ಷಿಕ ಮಹಾಸಭೆಯ ಬಗ್ಗೆ ಮಾತಾಡುತ್ತಾ ಶ್ರೀ ಆನಂದ ಸಭಾಗೃಹದಲ್ಲಿ ದಾನಿಗಳ ಹೆಸರು ಹಾಕುವ ಬಗ್ಗೆ ಹಾಗೂ ಸಭಾಂಗಣಕ್ಕೆ ಜಯರಾಮ ಬಾಗಿಲ್ತಾಯರವರ ಹೆಸರಿಡುವ ಬಗ್ಗೆ ಪ್ರಸ್ತಾಪಿಸಲಾಯಿತು. ಈ ಕೆಲಸವನ್ನು ಈಗಾಗಲೇ ನಡೆಸಲಾಗಿದೆ ಎಂದು ಶ್ರೀ ಗುರುಮೂರ್ತಿಯವರು ಸಭೆಗೆ ತಿಳಿಸಿದರು. ಲೆಕ್ಕಪತ್ರಗಳ ಬಗ್ಗೆ ಮಾತಾಡುತ್ತಾ ಶ್ರೀಯುತ ಬಿ.ಪಿ.ರಾವ್‌ರವರು ವಿದ್ಯಾಸಹಾಯ ಯೋಜನೆಯ ಫಲಾನುಭವಿಗಳ ಹೆಸರುಗಳನ್ನು ಸಭೆಗೆ ತಿಳಿಸುವುದು ಸೂಕ್ತ ಹಾಗೂ ಈ ವಿಚಾರದಲ್ಲಿ ತುಸು ವಿಸ್ತೃತ ವಿವರಗಳನ್ನು ಸದಸ್ಯರ ಗಮನಕ್ಕೆ ತರುವುದು ಉಚಿತ ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಉತ್ತರಿಸುತ್ತಾ ಶ್ರೀ ಯು.ಬಿ. ವೆಂಕಟೇಶ್‌ರವರು ಫಲಾನುಭವಿಗಳ ಹೆಸರುಗಳನ್ನು ಪ್ರಕಟಿಸುವುದು ಸರಿಯಲ್ಲ. ಆದರೂ ಈ ತನಕ ಈ ಬಗ್ಗೆ ವಿತರಿಸಿದ ಹಣ, ಫಲಾನುಭವಿಗಳ ಸಂಖ್ಯೆ, ಚಾಲ್ತಿಯಲ್ಲಿರುವ ಫಲಾನುಭವಿಗಳ ಸಂಖ್ಯೆ - ಇತ್ಯಾದಿ ವಿವರಗಳನ್ನು ಕೊಡಬಹುದೆಂದು ಅಭಿಪ್ರಾಯಪಟ್ಟರು. ಚರ್ಚೆಯಲ್ಲಿ ಅನೇಕ ಸದಸ್ಯರು ಪಾಲ್ಗೊಂಡು ವಿವಿಧ ವಿವರಗಳನ್ನು ವಿವರಿಸಲಾಯಿತು. ಸಭೆಯ ವರದಿಯನ್ನು ಶ್ರೀ ಬಿ.ಆರ್. ತಂತ್ರಿಯವರು ಸ್ವೀಕೃತಿಗೆ ಸೂಚಿಸಿದರೆ ಶ್ರೀ ಗುರುರಾಜ ರಾವ್ ರವರು ಅನುಮೋದಿಸಿದರು. ವಾರ್ಷಿಕ ಚಟುವಟಿಕೆಗಳ ವರದಿಯನ್ನು ಶ್ರೀ ಗೋಪಾಲಕೃಷ್ಣ ರವರು ಅಂಗೀಕರಿಸಲು ಸೂಚಿಸಿದರೆ ಶ್ರೀ ಪಿ.ವಿ.ಎನ್. ಮೂರ್ತಿಯವರು ಇದನ್ನು ಅಂಗೀಕರಿಸಿದರು. ಲೆಕ್ಕಪತ್ರಗಳ ಅಂಗೀಕಾರಕ್ಕೆ ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರು ಸಭೆಯ ಒಪ್ಪಿಗೆ ಸೂಚಿಸಿದರೆ ಶ್ರೀಮತಿ ಗೀತಾ ಪಿ.ಆರ್. ರಾವ್‌ರವರು ಅನುಮೋದಿಸಿರು.

ಶ್ರೀಯುತ ಗುರುರಾಜರಾವ್‌ರವರು ಆನಂದ ಸಭಾಗೃಹದ ಉಪಯೋಗ ಹಾಗೂ ಕಾರ್ಯನಿರ್ವಹಣೆಗಳ ಬಗ್ಗೆ ಕೇಳಿದಾಗ ಶ್ರೀಯುತ ಬಿ.ಪಿ.ರಾವ್, ಶ್ರೀಯುತ ಯು.ಬಿ. ವೆಂಕಟೇಶ್, ಶ್ರೀಯುತ ಬಾಗಿಲ್ತಾಯರು ಉತ್ತರಿಸುತ್ತಾ ಪ್ರಸಕ್ತದ ಆರ್ಥಿಕ ಸ್ಥಿತಿಗಳ ಬಗ್ಗೆ ಸ್ಥೂಲ ವಿವರಣೆ ನೀಡಿ ಇನ್ನೂ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡುವ ಹಂಬಲ ಟ್ರಸ್ಟ್ ಹಾಗೂ ನಿರ್ವಹಣಾ ಸಮಿತಿಗಿದ್ದು ಬರುವ ದಿನಗಳಲ್ಲಿ ಈ ಸಭಾಭವನ ಅತ್ಯಂತ ಬೇಡಿಕೆಯ ಸಭಾಭವನಗಳಲ್ಲಿ ಒಂದಾಗುವುದೆಂಬ ಆಶಯ ವ್ಯಕ್ತಪಡಿಸಿದರು.

2014-15ರ ಸಾಲಿಗೆ ಜಿ.ವಿ. ಆಚಾರ್ಯ ಅಂಡ್ ಕಂಪನಿ ಅವರನ್ನೇ ಲೆಕ್ಕಪತ್ರ ಪರಿಶೋಧಕರಾಗಿ ಮುಂದುವರಿಸುವ ನಿರ್ಧಾರವನ್ನು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಇತರ ವಿಚಾರಗಳಲ್ಲಿ ಸದಸ್ಯರು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಅಧ್ಯಕ್ಷರು ವಿದ್ಯಾ ಸಹಾಯ ಯೋಜನೆಯನ್ನು ಇನ್ನಷ್ಟು ಭದ್ರಪಡಿಸುವ ಹಾಗೂ ವಿಸ್ತರಿಸುವ ನಿಟ್ಟಿನಲ್ಲಿ ಬಳಗವು ಮುಂಬರುವ ದಿನಗಳಲ್ಲಿ ಶ್ರಮವಹಿಸಲಿದೆ ಎನ್ನುತ್ತಾ ತಮಗೆ ನೀಡಿದ ಸರ್ವ ಸಹಕಾರಕ್ಕೆ ಸದಸ್ಯರನ್ನು ವಂದಿಸಿದರು.

ಕಾರ್ಯಕ್ರಮದ ಅಂಗವಾಗಿ ಶ್ರೀ ಕೆ.ಎನ್. ಅಡಿಗರು ವಂದನಾರ್ಪಣೆ ಅರ್ಪಿಸಿದರು. ಇಡೀ ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಯುತ ಸತ್ಯನಾರಾಯಣ ಭಟ್‌ರವರು ನಡೆಸಿಕೊಟ್ಟರು.

ಅಜಂತಾ ಹೋಟಲಿನ ಸೌಜನ್ಯದಿಂದ ಸದಸ್ಯರಿಗೆ ಭರ್ಜರಿ ಚಹಾ ತಿಂಡಿಗಳನ್ನು ಏರ್ಪಡಿಸಲಾಗಿತ್ತು

-ಹರಿ

# ಶಿಸ್ತಿನ ಸಿಪಾಯಿ - ಭೂತಾನ್ ರಾಷ್ಟ್ರ



ಪ್ರಶಾಂತವಾದ ಗೌಜು ಗದ್ದಲಗಳಿಲ್ಲದ ರಾಷ್ಟ್ರ, ವಾಹನಗಳ ಹಾರ್ನ್ ಬಳಸಬಾರದ ಕಟ್ಟು ನಿಟ್ಟಿನ ಕಾನೂನು. ಬುದ್ಧ ಧರ್ಮದಲ್ಲಿಯೇ ಮಿಂದೆದ್ದ ರಾಷ್ಟ್ರ. ಪ್ರತಿಶತ 80ರಷ್ಟು ಬೌದ್ಧ ಧರ್ಮೀಯರು ಪ್ರತಿಶತ ಹನ್ನೆರಡು ಹಿಂದೂ ಧರ್ಮೀಯರು, ಶೇಕಡಾ ಎಂಟರಷ್ಟು ಕ್ರಿಶ್ಚಿಯನ್ನರು. ಸಂಪೂರ್ಣ ರಾಷ್ಟ್ರದ ಒಟ್ಟು ಜನಸಂಖ್ಯೆ ಏಳು ಲಕ್ಷ. ಮೂವತ್ತೆಂಟು ಸಾವಿರ ಚದರ ಕಿ.ಮೀ. ವಿಸ್ತೀರ್ಣದ ರಾಷ್ಟ್ರ. ಅದರಲ್ಲಿ ಶೇಕಡಾ ಅರವತ್ತರಷ್ಟು ಬೆಟ್ಟ ಗುಟ್ಟ ಗುಡ್ಡಗಳು. ನದಿಗಳು, ತೊರೆಗಳು ಹಾಗೂ ಹಸುರಿನ ವನಗಳು. ಭೂತಾನ್ ರಾಜಧಾನಿ ಥಿಂಪುವಿನಲ್ಲಿ ಒಂದು ಲಕ್ಷ ಜನ ಸಂಖ್ಯೆ ಮಾತ್ರ. ಅಲ್ಲಿ ಅತಿ ಹೆಚ್ಚೆಂದರೆ ಆರು ಮಹಡಿಯ ಕಟ್ಟಡಗಳು. ಗದ್ದಲ, ಹಿಂಸೆ, ದರೋಡೆ, ಕೊಲೆಗಳಿಲ್ಲದ ರಾಷ್ಟ್ರವಾದ ಭೂತಾನ್‌ನಲ್ಲಿ ಅವರ ಸ್ವಂತ ತಯಾರಿಕೆಯೆನ್ನುವುದು ಇಲ್ಲವೇ ಇಲ್ಲ. ಹೆಚ್ಚಿನ ವಸ್ತುಗಳು ಭಾರತದಿಂದ. ಎರಡನೇ ರಾಷ್ಟ್ರ ಚೀನಾದಿಂದ ತರಿಸುವುದು ಅಲ್ಲಿನ ವ್ಯವಸ್ಥೆ. ಅಲ್ಲಿನ ನಾಗರಿಕರ ಡ್ರೆಸ್ ಕೋಡ್ ಕಡ್ಡಾಯ. ಚಿಕ್ಕಮಕ್ಕಳಿಂದಲೇ ಡ್ರೆಸ್ ಕೋಡ್‌ನಂತೆ ಅವರ ದಿರಿಸು. ಅಲ್ಲಿ ಜಿಗ್ಮಿವಾಂಗ್‌ಚೂ ರಾಜನೇ ಸೂಪರ್ ಮ್ಯಾನ್. ರಾಜರಾಣಿಯರ ಫೋಟೋ ಪ್ರತಿಯೊಂದು ಮಳಿಗೆ-ಮನೆ-ಕಛೇರಿಗಳಲ್ಲಿ ಕಡ್ಡಾಯ. ಅಲ್ಲಿನ ಬೌದ್ಧದೇವಾಲಯಗಳು ಒಂದು ಸಾವಿರ ವರ್ಷದ ಹಿಂದಿನ ನಿರ್ಮಾಣಗಳೊಂದಿಗೆ ಆರಂಭವಾದರೆ, ತೀರ ಇತ್ತೀಚಿನ ಬೃಹತ್ ಕಂಚಿನ 160 ಅಡಿ ಎತ್ತರದ ಪದ್ಮಾಸನದಲ್ಲಿ ಕುಳಿತ ಬುದ್ಧನ ಮೂರ್ತಿ ಸ್ಥಾಪಿತಗೊಂಡಿದೆ. ಅದರ ಸುತ್ತ ಸುಂದರ ಉದ್ಯಾನವನದ ಕಲ್ಪನೆ ಜಾರಿಯಲ್ಲಿದೆ. ಇತ್ತೀಚೆಗೆ ಎರಡು ವರ್ಷದಿಂದ ಪ್ರಪ್ರಥಮ ದೊಡ್ಡ ಹಿಂದೂ ದೇವಾಲಯವೊಂದು ತಲೆಯೆತ್ತಲಿದ್ದು - ಇನ್ನೈದು ವರ್ಷದಲ್ಲಿ ಪೂರ್ತಿಗೊಳ್ಳಬಹುದು. ಇತ್ತೀಚೆಗೆ ಪ್ರಧಾನಿ ಮೋದಿಯವರ ಪದಗ್ರಹಣ ಸಮಾರಂಭದಲ್ಲಿ ಬಂದಿದ್ದ ರಾಜ ವಾಂಗ್ ಚೂ ನ ದಿರಿಸು - ಪುರುಷರ ಡ್ರೆಸ್ ಕೋಡ್ ಆಗಿರುವುದು ಅಲ್ಲಿನ ವಿಶೇಷ. ಸಂಪೂರ್ಣ ಭೂತಾನ್‌ನಲ್ಲಿ ಒಟ್ಟು ಪೊಲೀಸರ ಸಂಖ್ಯೆ ಎಂಟು ಸಾವಿರ ಮಾತ್ರ . ಇದು ಭೂತಾನ್ ವರ್ಣನೆ.

ಅಲ್ಲಿನ ರಾಜ ಪ್ರಜೆಗಳಿಗಾಗಿ ವಿಶೇಷ ಕೊಡುಗೆಯನ್ನು ನೀಡುತ್ತಿರುವುದು ಬೇರೆ ರಾಷ್ಟ್ರಗಳಲ್ಲಿ ಕಂಡು ಬರದ ದೃಶ್ಯ. ಮಗುವಿನ ಆರಂಭದಿನದ ವಿದ್ಯೆಯಿಂದಾರಂಭಿಸಿ ಹತ್ತನೆ ತರಗತಿಯವರೆಗೆ ಸಂಪೂರ್ಣ ಉಚಿತ ವಿದ್ಯೆ - ಅಲ್ಲಿನ ಸರ್ಕಾರಿ ಶಾಲೆಗಳಲ್ಲಿ ಆಗಿರುತ್ತದೆ - ಅನಂತರವೂ ಪ್ರತಿಭಾವಂತರಿಗೆ ಉಚ್ಚ ಶಿಕ್ಷಣ - ವಿದೇಶ ಶಿಕ್ಷಣ ರಾಜನ ಕೊಡುಗೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ವಿದೇಶಿ ಪ್ರವಾಸಿಗರಿಂದಾರಂಭಿಸಿ ಪ್ರತಿಯೊಬ್ಬರಿಗೂ ಆಸ್ಪತ್ರೆಗಳಲ್ಲಿ ಉಚಿತ ಔಷಧೋಪಚಾರ, ಅದೂ ಶಿಸ್ತು ಬದ್ಧವಾಗಿ ಯಾವುದೇ ಲಂಚ ರುಷುವತ್ತಿಲ್ಲದೆ ಜಾರಿಗೊಳ್ಳುತ್ತಿದೆ. ಸ್ವಚ್ಛತೆಯ ಕುರಿತು ಅತ್ಯಂತ ಕಟ್ಟುನಿಟ್ಟಿನ ಕಾನೂನು ಜಾರಿಗೊಂಡಿದೆ. ಅದರಿಂದಾಗಿ ಭೂತಾನ್ ನಳನಳಿಸುತ್ತಿದೆ. ಯಾವುದೇ ಕಾಮಗಾರಿಯಿರಲಿ ಸಮಯ ನಿರ್ದೇಶಿತವಾಗಿ ಜಾರಿಗೊಳ್ಳುತ್ತದೆ. ಗೋಲ್‌ಮಾಲ್ ಕಂಡುಬಂದರೆ ಕೆಲಸದಿಂದಲೇ ವಜಾ. ಗುಡ್ಡ ಜರಿತ ಸಾಮಾನ್ಯವಾದರೂ ಅತ್ಯಂತ ಶೀಘ್ರದಲ್ಲಿ ರಿಪೇರಿಯಾಗಿ ಜನತೆಯ ಸೇವೆಗೆ ಸಿಗಲೇಬೇಕು. ವಿದ್ಯುಚ್ಛಕ್ತಿ ಹೈಡ್ರೋಪ್ರಾಜೆಕ್ಟ್ ಮೂಲಕವಾಗಿ ತಯಾರಾದ ಹೆಚ್ಚುವರಿ ವಿದ್ಯುತ್ ಭಾರತಕ್ಕೂ ನೀಡಲ್ಪಡುತ್ತಿದೆ.

ಭೂತಾನದ ಅತಿದೊಡ್ಡ ಹೈಡಲ್ ಪವರ್ ಪ್ರಾಜೆಕ್ಟ್‌ನ ನಿರ್ಮಾತರಾಗಿ ಆ ಪ್ರಾಜೆಕ್ಟ್‌ನ ಚೀಫ್ ಇಂಜಿನಿಯರ್‌ರಾಗಿ ಸೇವೆ ಸಲ್ಲಿಸಿದವರು ಕೋಟೇಶ್ವರ ಮೂಲದ ಗೋಪಾಡಿ ನಾರಾಯಣ ರಾವ್‌ರವರು - ಕನ್ನಂಬಾಡಿ ಅಣೆಕಟ್ಟೆಯ ವಿಶ್ವೇಶ್ವರಯ್ಯನವರಂತೆ ಭೂತಾನ್ ರಾಷ್ಟ್ರದ ಅತಿದೊಡ್ಡ ಪವರ್ ಪ್ರಾಜೆಕ್ಟ್ ನಿರ್ಮಾಣದ ತಾಂತ್ರಿಕ ಮುಖ್ಯರಾದ ನಾರಾಯಣರಾವ್‌ರವರಿಗೆ ಆನಂತರ ಭೂತಾನದ ಮೇರು ಪ್ರಶಸ್ತಿಯನ್ನು ರಾಜ ಪ್ರಧಾನ ಮಾಡಿದುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಅತಿದೂರದ ರಾಷ್ಟ್ರದಲ್ಲಿ ಕನ್ನಡಿಗ ತಜ್ಞರು ತಮ್ಮ ಸೇವೆ ನೀಡಿದ್ದರೆಂಬುದು ಅರ್ಥಪೂರ್ಣ. ಈ ಹಿನ್ನೆಲೆಯಲ್ಲಿ ನನ್ನ ಪ್ರವಾಸಕಾಲದಲ್ಲಿ ಕಂಡುಬಂದ ವಿಶೇಷತೆಯನ್ನು ಸಂಕ್ಷಿಪ್ತವಾಗಿ ಓದುಗರ ಮುಂದಿಟ್ಟಿದ್ದೇನೆ.

ಬೆಂಗಳೂರಿನಿಂದ ಬಾನಹಕ್ಕಿಯಲ್ಲಿ ಹಾರಾಡುತ್ತಾ ಬಾಗ್ ಡೋಗ್ರಾದಲ್ಲಿಳಿದು ಅಲ್ಲಿಂದ ನಿಗದಿತ ವ್ಯಾನಿನಲ್ಲಿ ಪಯಣಿಸಿ - ಹತ್ತು ದಿವಸಗಳ ಕಾಲ ಭೂತಾನ್ ವೀಕ್ಷಣೆಯ ಸಫಲಯಾತ್ರೆ ನಮ್ಮದಾಯಿತು.

**-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು**

# ಮನವಿ

2000ನೇ ಇಸವಿಯಿಂದ ಲಾಗಾಯ್ತು ಆನಂದ ಬಳಗವು ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾ ಸಹಾಯ ಯೋಜನೆಯನ್ನು ರೂಪಿಸಿ ಅನುಷ್ಠಾನಕ್ಕೆ ತಂದ ವಿಚಾರ ಸದಸ್ಯರ ಗಮನದಲ್ಲಿದೆ. ಆನಂದ ಬಳಗದ ಸದಸ್ಯರ ಉದಾರ ಮನೋಭಾವ, ಸಾಮಾಜಿಕ ಕಳಕಳಿಗಳೇ ನಮ್ಮ ಈ ಕಾರ್ಯಕ್ರಮಕ್ಕೆ ಊರುಗೋಲು ಎಂಬುದನ್ನು ಮರೆಯುವಂತಿಲ್ಲ. ವಿದ್ಯಾಭ್ಯಾಸದ ಸಮಯದಲ್ಲಿ ಬಡ್ಡಿರಹಿತ ಸಾಲ ನೀಡಿ ವಿದ್ಯಾಭ್ಯಾಸ ಮುಗಿಸಿ ವಿದ್ಯಾರ್ಥಿಯು ಉದ್ಯೋಗ ಪಡೆದ ಬಳಿಕ ಸುಲಭ ಕಂತುಗಳಲ್ಲಿ ಪಡೆದ ಸಹಾಯಧನವನ್ನು ಹಿಂತಿರಿಗಿಸುವುದು ಈ ಕಾರ್ಯಕ್ರಮದ ಸ್ಥೂಲ ಅಭಿಪ್ರಾಯ. ಸಮಾಜದ ಸರ್ವರಿಂದಲೂ ಶ್ಲಾಘಿಸಲ್ಪಟ್ಟ ಈ ಕಾರ್ಯಕ್ರಮವನ್ನು ಇನ್ನಷ್ಟು ವಿಸ್ತರಿಸಬೇಕೆಂಬುದು ಬಳಗದ ಬಯಕೆ.

ಈ ಯೋಜನೆಯನ್ವಯ ಸುಮಾರು 42 ವಿದ್ಯಾರ್ಥಿಗಳಿಗೆ 28.60 ಲಕ್ಷ ರೂಪಾಯಿಗಳಷ್ಟು ಸಹಾಯಧನವನ್ನು ನೀಡಲಾಗಿದೆ. ಇದರಲ್ಲಿ 16 ಫಲಾನುಭವಿಗಳು ತಾವು ಪಡೆದ ಸಹಾಯಧನವನ್ನು ಈಗಾಗಲೇ ವಾಪಾಸು ಪಾವತಿಸಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಸುಮಾರು ರೂ.5.00 ಲಕ್ಷಕ್ಕಿಂತಲೂ ಹೆಚ್ಚು ಸಹಾಯಧನವನ್ನು ವಿತರಿಸಲಾಗಿದೆ.

ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಮಿಕ್ಕುಳಿದ ಸುಮಾರು ರೂ.5ಲಕ್ಷಕ್ಕಿಂತಲೂ ಹೆಚ್ಚು ಹಣವನ್ನು ಈ ಯೋಜನೆಗೆ ಮೀಸಲಾಗಿಸಿದೆ. ಸುಮಾರು ರೂ.5 ಲಕ್ಷಗಳನ್ನು ದಾನಿಗಳೊಬ್ಬರು ನೀಡಿ ಸಹಕರಿಸಿದ್ದಾರೆ. ಹಲವು ಸದಸ್ಯರು ಪ್ರತೀ ವರ್ಷವೂ ಈ ನಿಧಿಗೆ ತಮ್ಮ ಸಹಾಯಧನವನ್ನು ನೀಡಿ ಉಪಕರಿಸುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಏರುತ್ತಿರುವ ವಿದ್ಯಾಭ್ಯಾಸ ಶುಲ್ಕವೇ ಇತ್ಯಾದಿಗಳಿಂದಾಗಿ ಮಧ್ಯಮ ಹಾಗೂ ಕೆಳವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಈ ಯೋಜನೆ ತುಂಬಾ ಉಪಕಾರಿಯಾಗಿದೆ. ಮುಂಬರುವ ದಿನಗಳಲ್ಲಿ ಸುಮಾರು ರೂ.100 ಲಕ್ಷಗಳ ವಿದ್ಯಾನಿಧಿಯೊಂದನ್ನು ಸ್ಥಾಪಿಸ ಬೇಕೆಂಬುದು ಬಳಗದ ಉದ್ದೇಶ. ಈ ನಿಟ್ಟಿನಲ್ಲಿ ಆನಂದ ಬಳಗದ ಸದಸ್ಯರು ಅಧಿಕ ಸಂಖ್ಯೆಯಲ್ಲಿ ಸಹಾಯಹಸ್ತ ನೀಡಿ ವಿದ್ಯಾರ್ಥಿಗಳು ಹಣದ ಅಡಚಣೆಯಿಂದಾಗಿ ವಿದ್ಯೆಯಿಂದ ವಂಚಿತರಾಗದಂತೆ ಸಹಕರಿಸಬೇಕೆಂದು ಹಾರೈಸುತ್ತೇವೆ.

## ಎಪಿಲ್ 2014 : ಎಂಟು ತಂಡಗಳು

| ಕೋಡ್ | ಪ್ರಾಯೋಜಕರು | ತಂಡದ ಬ್ರಾಂಡ್ ನೇಮ್ | ಐಕಾನ್ ಆಟಗಾರರು |
|---|---|---|---|
| ಎ. | ಶ್ರೀಮತಿ ಕಸ್ತೂರಿ ಐತಾಳ್ | ಐತಾಳ್ ಏಸಸ್ | ರಾಘವೇಂದ್ರ ರಾವ್ |
| ಬಿ. | ಶ್ರೀಮತಿ ಸುನಂದಾ ನಾರಾಯಣ ಮೂರ್ತಿ | ಸರಳಾಯ ಸ್ಮೇಷರ್ಸ್ | ಅಜಯ್ ವೈ.ರಾವ್ |
| ಸಿ. | ಶ್ರೀ ಪಿ.ಎಸ್. ಬಾಗಿಲ್ತಾಯ | ಬಾಗಿಲ್ತಾಯ, ಬ್ರಿಗೇಡ್ಸ್ | ಭರತ್ ಅಡಿಗ |
| ಡಿ. | ಶ್ರೀ ಎಂ. ಭಾಸ್ಕರರಾವ್ | ಸ್ಟೀಲ್ ಸ್ಟಾರ್ಸ್ | ಸುಧೀಂದ್ರರಾವ್ |
| ಇ. | ಶ್ರೀ ಮೋಹನ್ ರಾವ್ .ಎಂ | ಮುಂಡ್ರುಪಾಡಿ ಸ್ಟಾಲ್‌ವಾರ್ಟ್ಸ್ | ರಾಜೇಶ್ ಕೃಷ್ಣ .ಎಂ |
| ಎಫ್. | ಶ್ರೀ ವೈ. ರಾಧಾಕೃಷ್ಣ | ಆರ್.ಎಸ್. ವಾರಿಯರ್ಸ್ | ದರ್ಶನ್‌ರಾವ್ |
| ಜಿ. | ಶ್ರೀ ಬಿ. ರಾಮಚಂದ್ರ ಉಪಾಧ್ಯ | ಉಪಾಧ್ಯ ಯೂನಿಕಾರ್ನ್ಸ್ | ಮನೋಹರ ಅಡಿಗಳ್ |
| ಹೆಚ್. | ಶ್ರೀ ಪಿ.ಸಿ. ರಾವ್ | ರಾವ್ ಐಡಿಯಲ್ | ವೈಶಾಖ್ ಭಾರ್ಗವ್ |

# ನಮ್ಮ ಭವ್ಯ ಪರಂಪರೆ

''ಆಚಾರ್ಯಃ ಪವನೋಸ್ಮಾಕಂ ಆಚಾರ್ಯಾನೀ ಚ ಭಾರತೀ ದೇವೋ ನಾರಾಯಣಃ ಶ್ರೀಶಃ ದೇವೀ ಮಂಗಲ ದೇವತಾ'' ಭಾವೀಸಮೀರ ಶ್ರೀ ಮದ್ವಾದಿರಾಜರು ನಮ್ಮ ಪರಂಪರೆಯ ಬಗ್ಗೆ ರಚಿಸಿದ ಈ ಶ್ಲೋಕವನ್ನು ಪರಮಪೂಜ್ಯ ಶ್ರೀಪೇಜಾವರ ಮಠಾಧೀಶ, ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಗಳವರು ತಮ್ಮ ಪ್ರವಚನದ ಪ್ರಾರಂಭದಲ್ಲಿ ಸದಾ ಉಲ್ಲೇಖಿಸುತ್ತಾರೆ.

ಇದರ ಸಾರ, ನಮ್ಮ ಗುರುಗಳು ವಾಯುದೇವರು, ಅವರ ಪತ್ನಿ ವಿದ್ಯಾಧಿದೇವತೆ ಭಾರತೀದೇವಿಯರು, ಸರ್ವೋತ್ತಮನಾದ ನಾರಾಯಣ ನಮ್ಮ ದೇವರು, ಮಂಗಲ ದೇವತೆಯಾದ ಮಹಾಲಕ್ಷ್ಮಿ ನಮ್ಮ ದೇವಿ.

ಹೀಗೆ ಸರ್ವೋತ್ತಮ ನಮ್ಮ ದೇವರಾದರೆ, ಜೀವೋತ್ತಮರಾದ ವಾಯುದೇವರು ನಮ್ಮ ಮೂಲ ಗುರುಗಳು. ಇಂಥಹ ಶ್ರೇಷ್ಠ ಪರಂಪರೆಗೆ ಸೇರಿದ ನಾವು ಹೆಮ್ಮೆಯಿಂದ ತಲೆ ಎತ್ತಿಕೊಂಡಿರುವ ಭಾಗ್ಯಶಾಲಿಗಳು.

ಸತ್ಯಲೋಕದಿಂದ ಧರೆಗಿಳಿದು ಬಂದು ಪಾಜಕ ಕ್ಷೇತ್ರದಲ್ಲಿ ಶ್ರೀ ಮನ್ಮಧ್ವಾಚಾರ್ಯರಾಗಿ ಅವತರಿಸಿ, ವಿಷ್ಣು ಸರ್ವೋತ್ತಮತ್ವವನ್ನು ಸರ್ವದಾ ಪ್ರತಿಪಾದಿಸುತ್ತಾ ಹಿಂದಿನ 21 ಮತಗಳನ್ನು ವಿಮರ್ಶಿಸಿ. ಈ ಸುಂದರವಾದ ಜಗತ್ತು ಮಾಯೆಯಲ್ಲ, ಮಿಥ್ಯೆಯಲ್ಲ, ಕಲ್ಪನೆಯಲ್ಲ, ಜಗನ್ನಿಯಾಮಕನ ಅಧೀನಕ್ಕೆ ಒಳಪಟ್ಟ ಅಭಾಧಿತ ಸತ್ಯ, ಜೀವರು ಪರಮಾತ್ಮನಿಂದ ಭಿನ್ನರು, ಅವನ ಅಧೀನರು, ಮುಕ್ತಿಪಥಕ್ಕೆ ಜ್ಞಾನ, ಭಕ್ತಿ ಮತ್ತು ಭಗವಂತನ ಅನುಗ್ರಹ ಸಾಧನಗಳು. ನಾವು ದೇವರಲ್ಲ, ದೇವರ ದಾಸರು ಎಂದು ಘಂಟಾಘೋಷವಾಗಿ ಸಾರಿದ ಗುರುಗಳು ನಮ್ಮ ಶ್ರೀಮದಾಚಾರ್ಯರು.

ಸಮಗ್ರ ವೇದ, ಉಪನಿಷತ್ತು, ಬ್ರಹ್ಮಸೂತ್ರ, ಗೀತೆ, ಎಲ್ಲಾ ಪುರಾಣಗಳ ಆಧಾರದಲ್ಲಿ ತಮ್ಮ ತತ್ವವಾದವನ್ನು ಪ್ರತಿವಾದಿಸಿದ ಶ್ರೀಮದಾಚಾರ್ಯರ ಪರಂಪರೆಗೆ ಸೇರಿದ ಪುಣ್ಯಶಾಲಿಗಳು ನಾವು. ತಮ್ಮ 37 ಗ್ರಂಥಗಳಾದ 'ಸರ್ವಮೂಲ'ವೆಂದೇ ಖ್ಯಾತವಾದ ಗ್ರಂಥಗಳಲ್ಲಿ ದ್ವೈತ ಸಿದ್ಧಾಂತವನ್ನು ಬೆಳಕಿಗೆ ತಂದ ನಮ್ಮ ಗುರುಗಳು ದೊಡ್ಡ ಬದರಿಗೆ ತೆರಳಿ, ಭಗವಾನ್ ವೇದವ್ಯಾಸರಿಂದ ತಮ್ಮ ತತ್ವವಾದಕ್ಕೆ ಮೆಚ್ಚುಗೆ, ಪ್ರಶಂಸೆಯನ್ನು ಗಳಿಸಿರುವ ದಾಖಲೆ ಸುಮಧ್ವವಿಜಯದಲ್ಲಿದೆ. ಶ್ರೀಮದಾಚಾರ್ಯರೊಡನೆ 15 ದಿನ ವಾದ ಮಾಡಿದ ಪ್ರಖಾಂಡ ಪಂಡಿತರಾದ ಶ್ರೀತ್ರಿವಿಕ್ರಮ ಪಂಡಿತಾಚಾರ್ಯರು ಕೊನೆಗೆ ಶರಣಾಗಿ ದ್ವೈತ ಸಿದ್ಧಾಂತವನ್ನೇ ಒಪ್ಪಿಕೊಂಡಿದ್ದು ಮಾತ್ರವಲ್ಲ ಶ್ರೀಮದಾಚಾರ್ಯರ ನೆಚ್ಚಿನ ಶಿಷ್ಯರಾಗಿ 'ವಾಯುಸ್ತುತಿ' ಯಂತಹ ಸ್ತೋತ್ರವನ್ನು ನಮಗೆ ನೀಡಿದ ಪಂಡಿತವರ್ಯರು. ಇವರ ಪುತ್ರ ನಾರಾಯಣ ಪಂಡಿತಾಚಾರ್ಯರು ನಮ್ಮ ಗುರುಗಳ ಸಮಗ್ರ ಚರಿತ್ರೆಯನ್ನೇ ಸುಮಧ್ವವಿಜಯವೆಂಬ ಶ್ರೇಷ್ಠ ಗ್ರಂಥದಲ್ಲಿ ಸಮಾಜಕ್ಕೆ ನೀಡಿದ್ದಾರೆ.

ಶ್ರೀಮದಾಚಾರ್ಯರ ತತ್ವದ ವೈಶಿಷ್ಟ್ಯವೆಂದರೆ ಅವರಿಂದ ಮೊದಲ್ಗೊಂಡು ಇತ್ತೀಚೆಗೆ ಅದಮಾರು ಮಠದ ಉತ್ತರಾಧಿಕಾರಿ ಯಾಗಿ ಸನ್ಯಾಸಿ ಸ್ವೀಕರಿಸಿದ ಶ್ರೀ ಶ್ರೀ ಈಶಪ್ರಿಯತೀರ್ಥರ ಪರ್ಯಂತ, ಈ ಪರಂಪರೆ ಎಳ್ಳಷ್ಟೂ ಬದಲಾವಣೆ ಹೊಂದದೆ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಸಂಪ್ರದಾಯ, ಆಚರಣೆಗಳಲ್ಲಿ ಕೆಲ ವ್ಯತ್ಯಾಸಗಳಿದ್ದರೂ, ಮೂಲ ತತ್ವಮಾತ್ರ ಅಸ್ಖಲಿತವಾಗಿ ಉಳಿದುಕೊಂಡಿದೆ.

ಇದನ್ನು ಕಾಪಾಡಿಕೊಂಡು ಬಂದ ಕೀರ್ತಿ ಉಡುಪಿ ಅಷ್ಟಮಠದ ಮೂಲ ಶಿಷ್ಯರಾದ ಪಲಿಮಾರು ಮಠದ ಶ್ರೀ ಹೃಷಿಕೇಶ ತೀರ್ಥರಿಂದ ಪೇಜಾವರ ಮಠದ ಶ್ರೀ ಅಧೋಕ್ಷಜ ತೀರ್ಥರು, ಘಟ್ಟದ ಮೇಲಿನ ಶ್ರೀ ಪದ್ಮನಾಭ ತೀರ್ಥರು, ಶ್ರೀ ನರಹರಿ ತೀರ್ಥರು, ಶ್ರೀಜಯತೀರ್ಥರು, ಶ್ರೀ ಶ್ರೀಪಾದ ರಾಜರು, ಶ್ರೀ ವ್ಯಾಸರಾಜರು, ಶ್ರೀವಾದಿರಾಜ ಸ್ವಾಮಿಗಳು, ಶ್ರೀ ರಾಘವೇಂದ್ರತೀರ್ಥರಾದಿಯಾಗಿ ಎಲ್ಲಾ ಯತಿ ಪರಂಪರೆಗೆ ಸಲ್ಲಬೇಕು.

ಯತಿ ಪರಂಪರೆ ಒಂದು ಕಡೆಯಾದರೆ, ಶ್ರೀಪಾದ ರಾಜರಿಂದ ಆರಂಭಗೊಂಡ ಹರಿದಾಸ ಪರಂಪರೆಯ ಪುರಂದರ ದಾಸರು, ಕನಕದಾಸರು, ಗೋಪಾಲದಾಸರು, ವಿಜಯ ದಾಸರು ಮತ್ತು ಸರ್ವಮೂಲದ ಕನ್ನಡದ ಅವತರಣಿಕೆ ಎಂದೇ ಖ್ಯಾತವಾದ 'ಹರಿಕಥಾಮೃತ ಸಾರ'ವನ್ನು ನೀಡಿದ ಜಗನ್ನಾಥ ದಾಸರೇ ಮುಂತಾದ ದಾಸವರೇಣ್ಯರು ತಮ್ಮ ದಾಸ ಸಾಹಿತ್ಯದ ಮೂಲಕ ಮಧ್ವ ಶಾಸ್ತ್ರದ ಸೊಗಡನ್ನು ಜನಸಾಮಾನ್ಯರಿಗೂ ತಲಪಿಸಿದ್ದಾರೆ. ವ್ಯಾಸಕೂಟ, ದಾಸಕೂಟಗಳು ರೈಲಿನ 2 ಹಳಿಗಳಂತೆ ಮಧ್ವರಥವನ್ನು ಸರಾಗವಾಗಿ ಚಲಿಸುವಂತೆ, ಕೊಂಚವೂ, ಭಿನ್ನಾಭಿಪ್ರಾಯವಿಲ್ಲದ ಅನ್ಯೋನ್ಯತೆಯಿಂದ ನಡೆದುಕೊಂಡು ಬಂದಿದೆ. ಹೇಗೆ 'ಹನುಮನ ಮತವೇ ಹರಿಯ ಮತ'ವೋ ಹಾಗೇ ವ್ಯಾಸಕೂಟ, ದಾಸಕೂಟಗಳ ಮತವೇ ಮಧ್ವಮತವು ಎಂದರೆ ತಪ್ಪಾಗಲಾರದು.

ದಶಕಗಳ ಹಿಂದೆ ಹರಿಪಾದ ಸೇರಿದ ಶ್ರೀ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರು ಮಧ್ವ ತತ್ವಜ್ಞಾನಕ್ಕೆ ನೀಡಿದ ಕೊಡುಗೆ ಅಪಾರ. ಅವರ ವಿದ್ಯಾಗುರುಗಳಾದ ಶ್ರೀ ಉತ್ತರಾದಿ ಮಠದ ಶ್ರೀ ಶ್ರೀ ಸತ್ಯಧ್ಯಾನತೀರ್ಥರಿಂದ 'ನೀವು ಜ್ಞಾನ ಭಂಡಾರ'ವೆಂದು ಪ್ರಶಂಸೆಗೊಳಗಾದ ಪೂಜ್ಯರು. ತಮ್ಮ ಸನ್ಯಾಸಿ ಶಿಷ್ಯರುಗಳಾದ ಶ್ರೀ ಶ್ರೀ ವಿಶ್ವೇಶತೀರ್ಥರು, ಶ್ರೀ ವಿದ್ಯಾಧೀಶ ತೀರ್ಥರು, ಶ್ರೀ ಸುಗುಣೇಂದ್ರ ತೀರ್ಥರು. ಶ್ರೀ ವಿದ್ಯೇಶ ತೀರ್ಥರು ಹಾಗೂ ಶ್ರೀ ವಿಶ್ವಪ್ರಿಯ ತೀರ್ಥರನ್ನು ಮಧ್ವಶಾಸ್ತ್ರಗಳಲ್ಲಿ ಉನ್ನತ ಮಟ್ಟಕ್ಕೇರಿಸಿದ ಪೂಜ್ಯರು ಶ್ರೀ ವಿದ್ಯಾಮಾನ್ಯ ತೀರ್ಥರು.

ಶ್ರೀ ಉತ್ತರಾದಿ ಮಠದ ಶ್ರೀ ಶ್ರೀ ಸತ್ಯಾತ್ಮತೀರ್ಥರು, ತಮ್ಮ ವಿದ್ವತ್ಪೂರ್ಣ ಪ್ರವಚನಗಳ ಜತೆಗೆ ಆಚಾರಕ್ಕೂ ಒತ್ತನ್ನು ನೀಡುತ್ತಾ ಮಧ್ವ ಪರಂಪರೆಯನ್ನು ಬೆಳೆಸುತ್ತಿರುವ ಮಹಾನ್ ಯತಿಗಳು.

ಮಂತ್ರಾಲಯದ ಶ್ರೀರಾಘವೇಂದ್ರ ಮಠಗಳ ಶಾಖೆಗಳು ಭಾರತಾದ್ಯಂತ ಸ್ಥಾಪಿತವಾಗಿದ್ದು ವಿದೇಶಗಳಲ್ಲೂ ಮಾಧ್ವರನ್ನಷ್ಟೇ ಅಲ್ಲ, ಸಕಲ ಆಸ್ತಿಕ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿವೆ. ಶ್ರೀ ಶ್ರೀ ಸುಬುಧೇಂದ್ರತೀರ್ಥರು ಶ್ರೇಷ್ಠ ವಿದ್ವಾಂಸರೂ, ಸಮಾಜದ ಹಿತ ಚಿಂತಕರೂ ಆಗಿದ್ದಾರೆ.

ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶತೀರ್ಥರು, ಸಮಗ್ರ ಹಿಂದೂ ಸಮಾಜದ ಗುರುಗಳಾಗಿ ಶೋಭಿಸುತ್ತಿದ್ದಾರೆ. ಪಲಿಮಾರು ಮಠದ ಶ್ರೀ ಶ್ರೀ ವಿದ್ಯಾಧೀಶ ತೀರ್ಥರು ಹರಿದ್ವಾರದಲ್ಲಿ ಪ್ರಾಣ ದೇವರನ್ನು ಪ್ರತಿಷ್ಠಿಸಿ, ಪ್ರಯಾಗದ ತಮ್ಮ ಶಾಖೆಯ ಮೂಲಕ ಉತ್ತರ ಭಾರತದಲ್ಲಿ ಮಧ್ವರ ಸಂದೇಶವನ್ನು ಸಾರುತ್ತಿದ್ದಾರೆ.

ಭಂಡಾರಕೇರಿ ಮಠದ ಶ್ರೀ ಶ್ರೀ ವಿದ್ಯೇಶ ತೀರ್ಥರು ತಮ್ಮ 60ನೇ ವರ್ಧಂತಿ ಸಂದರ್ಭದಲ್ಲಿ 300ಕ್ಕೂ ಹೆಚ್ಚು ವಿದ್ವಾಂಸರನ್ನು, ಪುರೋಹಿತರನ್ನೂ ಸನ್ಮಾನಿಸಿ, ಕೈತುಂಬ ಸಂಭಾವನೆ ನೀಡಿ ಪರಂಪರೆಯನ್ನು ಕಾಪಾಡಿಕೊಂಡು ಬರುವ ವಿದ್ವಾಂಸರುಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ.

ಅದಮಾರು ಮಠದ ಶ್ರೀ ವಿಶ್ವಪ್ರಿಯತೀರ್ಥರು, ಸೋದಾ ಮಠಾಧೀಶ ಶ್ರೀ ವಿಶ್ವವಲ್ಲಭ ತೀರ್ಥರು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಸಮಾಜಕ್ಕೆ ಸಹಕಾರಿಯಾಗುತ್ತಿದ್ದಾರೆ. ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥರು, ಕಸಾಯಿಖಾನೆಗೆ ಹೋಗುತ್ತಿರುವ ಗೋವುಗಳನ್ನು ತಡೆದು ತಮ್ಮ ನೀಲಾವರದ ಗೋಶಾಲೆಯಲ್ಲಿ ಸಂರಕ್ಷಿಸುತ್ತಿದ್ದಾರೆ.

ಕಾಣಿಯೂರು ಮಠದ ಶ್ರೀ ವಿದ್ಯಾವಲ್ಲಭ ತೀರ್ಥರು ತಮ್ಮ ಪರ್ಯಾಯ ಅವಧಿಯಲ್ಲಿ ಜ್ಞಾನ ಪ್ರಸಾರಕ್ಕೆ ವಿಶೇಷ ಒತ್ತು ಕೊಟ್ಟು, ಈ ಬಾರಿಯ ಚಾತುರ್ಮಾಸ್ಯವನ್ನು ಉಡುಪಿಯಲ್ಲೇ ನಡೆಸಬೇಕೆಂದು ಶ್ರೀ ಉತ್ತರಾದಿ ಮಠದ ಶ್ರೀ ಶ್ರೀ ಸತ್ಯಾತ್ಮತೀರ್ಥರನ್ನು ಉಡುಪಿಗೆ ಆಹ್ವಾನಿಸಿದ್ದಾರೆ. ಪುತ್ತಿಗೆ ಮಠದ ಶ್ರೀ ಶ್ರೀ ಸುಗುಣೇಂದ್ರತೀರ್ಥರು ವಿದೇಶಗಳಲ್ಲಿ ಮಧ್ವಮತದ ಕಂಪನ್ನು ಹರಡುತ್ತಿದ್ದಾರೆ. ಅಲ್ಲಿ ಮಠ, ಮಂದಿರಗಳನ್ನು ಸ್ಥಾಪಿಸಿ ವಿದೇಶದಲ್ಲಿರುವ ಭಾರತೀಯರ ಜ್ಞಾನದಾಹವನ್ನು ತೀರಿಸಲೋಸುಗ ಸಂಚಾರ ಕೈಗೊಂಡು, ಪ್ರವಚನಗಳಿಂದ ಅವರ ಮನಗಳನ್ನು ಗೆದ್ದಿರುವುದಷ್ಟೇ ಅಲ್ಲ, ಅವರಿಗೆ, ಆಚಾರ, ಸಂಪ್ರದಾಯಗಳ ಹಿರಿಮೆಯನ್ನು ತಿಳಿಸುತ್ತಿದ್ದಾರೆ. ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥರು ದಕ್ಷಿಣ ಕನ್ನಡ ಭಾಗದಲ್ಲಿ ತಮ್ಮ ಪ್ರವಚನಗಳಿಗೆ ಪ್ರಸಿದ್ಧರಾಗಿದ್ದಾರೆ. ಶ್ರೀಕೃಷ್ಣಾಪುರ ಮಠದ ಶ್ರೀ ವಿದ್ಯಾ ಸಾಗರ ತೀರ್ಥರು ತಮ್ಮ ಕರ್ಮನಿಷ್ಠೆ, ಆಚರಣೆಗಳಿಗೆ, ಖ್ಯಾತರಾಗಿದ್ದಾರೆ.

ಶಿರೂರು ಮಠದ ಶ್ರೀ ಶ್ರೀ ಶ್ರೀ ಲಕ್ಷ್ಮೀವರತೀರ್ಥ ಶ್ರೀಪಾದರು ಅಲಂಕಾರಪ್ರಿಯ ಕೃಷ್ಣನಿಗೆ ದಿನಕ್ಕೊಂದು ಅಲಂಕಾರದಂತೆ ಮುನ್ನೂರಕ್ಕೂ ಹೆಚ್ಚು ಅಲಂಕಾರಗಳನ್ನು ಮಾಡಿ ಪೂಜಿಸಿ ಭಕ್ತರ ಭಾವುಕತೆಗೆ ಭಾಜನರಾಗಿದ್ದಾರೆ.

ಇಂಥಹ ಭವ್ಯ, ದಿವ್ಯ ಪರಂಪರೆಯ ವಾರಸುದಾರರಾದ ನಾವೆಲ್ಲ ಹೆಮ್ಮೆ ಪಡಬೇಕಾದ ವಿಷಯವಲ್ಲವೇ?

ನಾವು ಈ ಪರಂಪರೆಗೆ ನಮ್ಮ ಪಾಲಿನ ಕಾಣಿಕೆಯಾಗಿ, ಸಂಧ್ಯಾವಂದನೆ, ಪೂಜೆ, ಏಕಾದಶಿ ಆಚರಣೆ ಮುಂತಾದ ಧಾರ್ಮಿಕ ಕಾರ್ಯಗಳನ್ನು ತಪ್ಪದೇ ಪಾಲಿಸಿಕೊಂಡು ನಮ್ಮ ಭವ್ಯ ಪರಂಪರೆಗೆ ನಮ್ಮ ಮುಂದಿನ ಪೀಳಿಗೆಗೆ ಮಾದರಿಯಾಗುವಂತೆ, ಅವರನ್ನು ಪ್ರೇರೇಪಿಸಿದಲ್ಲಿ ನಾವು ಈ ಪರಂಪರೆಯಲ್ಲಿ ಬಂದುದು ಸಾರ್ಥಕವಾಗುತ್ತದೆ. ನಮ್ಮ ಮಹಿಳೆಯರೂ ಲಕ್ಷ್ಮೀಶೋಭಾನ, ದಾಸರ ಪದಗಳನ್ನು ತಮ್ಮ ಮಕ್ಕಳಿಗೆ ಕಲಿಸಿ, ಮಾರ್ಗದರ್ಶನ ನೀಡಿ ಅವರನ್ನು ಉತ್ತಮ ಪ್ರಜೆಗಳಾಗುವಂತೆ ಮಾಡಲೆಂದು ಶ್ರೀ ಮಧ್ವಾಂತರ್ಗತ, ಉಡುಪಿ ಶ್ರೀ ಕೃಷ್ಣನ ಅಡಿದಾವರೆಗಳಲ್ಲಿ ಬೇಡುತ್ತೇನೆ.

**-ಬಿ. ರಾಮದಾಸ ತಂತ್ರಿ**

**ಕೋಟಿ ದೇವರ ಹಿಂದಿಕ್ಕಿ ಕಾಣುವ ಮೊದಲ ದೇವತೆ**
**ತನ್ನ ಕರುಳ ಕತ್ತರಿಸಿ ಜನುಮವಿಟ್ಟ ಜನುಮದಾತೆ**
**ನಾ ಕಂಡ ಮೊದಲ ಬಂಧು ನೀನೇ ಮಾತೆ,**
**ನಿನ್ನ ಮಮತೆಗೆ ಮೀರಿದ ಪ್ರೀತಿ ಇರಲಾದೀತೆ,**
**ನಿನ್ನ ಮಡಿಲಿಗೆ ಆ ಸ್ವರ್ಗವು ಸಮನಾದೀತೆ,**
**ಸದಾ ಮಕ್ಕಳ ಸುಖ ಬಯಸೋ ತ್ಯಾಗಮಾತೆ**
**ನಿನ್ನ ಋಣವ ತೀರಿಸಲು ಈ ಜನುಮ ಸಾಕಾದೀತೆ**

'ಆಚಾರ-ವಿಚಾರ'

# ಒಂದು ಸಮೀಕ್ಷೆ

ನಾವೆಲ್ಲಾ ನಮ್ಮ ಹಿರಿಯರ ಲಾಗಾಯ್ತಿನಿಂದ ಬಂದ ಪದ್ಧತಿ ಎಂದು ಕೆಲವು ಆಚಾರಗಳನ್ನು ಇರಿಸಿಕೊಂಡಿದ್ದೇವೆ. ಕೆಲವನ್ನು ಬಿಟ್ಟೇ ಬಿಟ್ಟಿದ್ದೇವೆ. ಅವನ್ನು ಬಿಟ್ಟಿದ್ದು ತಪ್ಪು ಎನ್ನುವಷ್ಟು ಅಪಚಾರ ಅಲ್ಲಿ ನಡೆದಿದ್ದರೆ ಇರಿಸಿಕೊಂಡ ಕೆಲವು ಪೀಡಾಪ್ರದಗಳಾಗಿವೆ ಎನ್ನುವಷ್ಟು ಅರ್ಥಹೀನಗಳಾಗಿವೆ.

ಒಂದು ಉದಾಹರಣೆಗಾಗಿ ಈ ಸಮೀಕ್ಷೆ ನಡೆಸೋಣ.

ಮುತ್ತೈದೆಯರಿಗೆ - ಸುಹಾಸಿನಿ - ಸುವಾಸಿನಿಯರಿಗೆ ಅರಸಿನ ಕುಂಕುಮ, ಕರಿಮಣಿ, ಕಪ್ಪುಬಳೆ/ಬಣ್ಣದ ಬಳೆಗಳು, ಖಣ (ಕುಪ್ಪಸ-ಹೊಲಿಸಿಕೊಳ್ಳಲು ಬೇಕಾದ ಬಟ್ಟೆ ) ನೀಡಿ ಗೌರವಭಕ್ತಿ ತೋರಿಸುವ ಕ್ರಮ ಹಿಂದಿನಿಂದ ನಡೆದು ಬಂದಿದೆ. ಇಂದಿಗೂ ಹೆಚ್ಚುಕಮ್ಮಿ ಎಲ್ಲ ಶುಭಮಂಗಳ ಕಾರ್ಯಕ್ರಮಗಳಲ್ಲಿ ಚಾಚೂ ತಪ್ಪದೆ ಅನುಸರಿಸಿದ್ದಾರೆ. ಈ ಕೊಡುಗೆಯ ವಿಚಾರದಲ್ಲಿ ಒಂದು ವಿಮರ್ಶೆ ಮಾಡೋಣ.

ಹಿಂದಿನ ಕಾಲದಲ್ಲಿ ಇಂತಹ ದಾನಗಳಲ್ಲಿ ಬಂದ ಖಣ-ಬಳೆ ಇತ್ಯಾದಿಗಳನ್ನು ಖಂಡಿತವಾಗಿ ಮುತ್ತೈದೆಯರು ಉಪಯೋಗಿಸುತ್ತಿದ್ದರು. ಕೈಗೆ ಹೊಂದುವ ಅವರವರ ಅಳತೆಗೆ ಸರಿಯಾಗಿರುವ ಬಳೆ ಹಾಕಿಕೊಂಡು ಸಂತಸಪಡುತ್ತಿದ್ದರು. ಖಣ ಅಥವಾ ಬ್ಲೌಸ್ ಪೀಸ್‌ನ ಬಣ್ಣ ಯಾವುದೇ ಇರಲಿ, ತಮ್ಮಲ್ಲಿರುವ ಸೀರೆಗೆ ಮ್ಯಾಚಿಂಗ್ ಅಲ್ಲದಿದ್ದರೂ - ಸ್ವಲ್ಪ ಅಳತೆ ಹೆಚ್ಚು ಕಮ್ಮಿ ಇದ್ದರೂ - ಡಿಸೈನ್ ಮನಸ್ಸಿಗೆ ಹೊಂದಿರಲಿ ಬಿಡಲಿ ಹೊಲಿಸಿಕೊಂಡು ಧರಿಸುತ್ತಿದ್ದರು. ಮಕ್ಕಳಿಗಾದರೂ ಸರಿಹೊಂದಿದಲ್ಲಿ ಬಳಸುತ್ತಿದ್ದರು. ಆ ಕಾಲದಲ್ಲಿ ಹಳೆ ಬಟ್ಟೆಗಳನ್ನು ಚಿಂದಿಗಳನ್ನು ಸೇರಿಸಿ ಸೇರಿಸಿ ಹೊಲಿದು 'ದಟ್ಟ'ಗಳೆನ್ನುವ ನೆಲದ ಮೇಲೆ ಹಾಸಿಕೊಂಡು ಮಲಗಲು ಉಪಯೋಗಕ್ಕೆ ಬರುವ ಸಾಧನ ತಯಾರಿಸಿ ಇರಿಸಿಕೊಳ್ಳುತ್ತಿದ್ದರು. ಈಗ ಹಳೆಯದಿರಲಿ ಹೊಸತಿರಲಿ ತಮ್ಮ ಉಪಯೋಗಕ್ಕೆ ಅನುಕೂಲವಿಲ್ಲ ಎಂದಾದರೆ ಬೆಲೆಯ ಮುಖ ನೋಡದೆ ಬಿಸಾಕುವ ಕಾಲ. ಮಕ್ಕಳಿಗೆ ಶಾಲೆಯಲ್ಲಿ ಹಿಂದೆ ಮುಂದೆ ಯೋಚಿಸದೆ ಶಾಲಾ ವ್ಯವಸ್ಥಾಪಕರು ಬರೆದುಕೊಟ್ಟಂತೆ 100-200 ಹಾಳೆಯ ಪುಸ್ತಕಗಳನ್ನು ಖರೀದಿಸಿಕೊಟ್ಟು ವರ್ಷಾಂತ್ಯಕ್ಕೆ 10-15 ಹಾಳೆ ಬರೆದು ಉಳಿದ ಖಾಲಿ ಪುಟಗಳನ್ನೊಳಗೊಂಡ ಹಳೆಯ ಪುಸ್ತಕಗಳನ್ನು ರದ್ದಿಯವನಿಗೆ ಕೊಟ್ಟು ಪ್ರಕೃತಿದತ್ತ ಸಂಪತ್ತಿನ ಪೋಲಾಗುವುದನ್ನು ಸಹಿಸುವ ಹಿರಿಯರಿಗೆ, ಶಿಕ್ಷಕರಿಗೆ, ವ್ಯವಸ್ಥೆಗೆ, ಸರಕಾರಕ್ಕೆ ಏನನ್ನಬೇಕು?

ಹೀಗೆ ಇರುವ ಸ್ಥಿತಿಯಲ್ಲಿ ನಮ್ಮ ಕೈಲಾದ್ದನ್ನಾದರೂ ಸರಳಗೊಳಿಸಿ ವಿವೇಚನೆಯಿಂದ ಉಡುಗೊರೆಗೆ ದಾನಕ್ಕೆ ಗೌರವ ಸೂಚ್ಯ ವಸ್ತುಗಳನ್ನು ಯಾಕೆ ಆರಿಸಬಾರದು? ಹಾಗೆ ಮಾಡಿದರೆ ಯಾವ ದೇವರೂ ಮುನಿಯಲಾರ. ಆತ ಖಂಡಿತವಾಗಿ 'ಈ ನನ್ನ ಜನ ವಿವೇಕಿಗಳು' ಎಂದು ಮೆಚ್ಚುತ್ತಾನೆ. ಹರಸುತ್ತಾನೆ. ಪ್ಲಾಸ್ಟಿಕ್ ಜಿಪ್ ಲಾಕ್ ಕವರುಗಳಲ್ಲಿ ಹಾಕಿದ ಕುಪ್ಪಸದ ಖಣ, ಕೆಮಿಕಲ್ ಹಾಕಿದ ಅರಸಿನ ಕುಂಕುಮ, ಎಲ್ಲಿಗೂ ಹೊಂದದ ಕಪ್ಪು-ಕೆಂಪು-ಬಣ್ಣಬಣ್ಣದ ಬಳೆಗಳು ಇವುಗಳನ್ನು ಹೇಗಪ್ಪಾ ಡಿಸ್ಪೋಸ್ ಮಾಡುವುದು ದೇವರೇ?'' ಎಂದು ಮಾತನಾಡದ ದೇವರನ್ನು ಗೋಳು ಹೊಯ್ಕೊಳ್ಳುವ ಬದಲು ನಮ್ಮ ರೀತಿ ರಿವಾಜುಗಳನ್ನು ಸಾಂಸ್ಕೃತಿಕ ಮೌಲ್ಯಗಳಿಗೆ ಒಂದಿನಿತೂ ಧಕ್ಕೆಯಾಗದಂತೆ ನಿಶ್ಚಯವಾಗಿಯೂ ಬದಲಾಯಿಸಿ ಆಚರಿಸಲು ಸಾಧ್ಯವಿದೆ. ಒಬ್ಬಿಬ್ಬರು ಹಳೆ ಗೋಳಿಮರ ನಂಬಿದರೆಂದರೆ ಎಲ್ಲರೂ ಹಾಗೆ ಮಾಡಬೇಕೆಂದಿಲ್ಲ. ಇದರಿಂದ ಯಾವ ಸತ್ ಸಂಪ್ರದಾಯದ ಮೂಲಭೂತ ಉದ್ದೇಶಕ್ಕೂ ಹಾನಿಯಾಗದು.

ನಮ್ಮ ಇತರ ಎಷ್ಟು ಅನೇಕ ಹಳೆಯ ರೀತಿ ರಿವಾಜುಗಳನ್ನು ನಮ್ಮ ಫ್ಯಾಷನ್‌ಗೆ ಧಕ್ಕೆ ಎಂದು ಮುರಿದು ಹಾಕುತ್ತಿಲ್ಲ? ಎಲ್ಲೆಂದರಲ್ಲಿ, ಯಾವಾಗ ಹೇಗೆ ಎಂದಿಲ್ಲ, ಏನು ಯಾಕೆ ಎಂದಿಲ್ಲ - ಯದ್ವಾತದ್ವಾ ಬದಲಿಸಿ ಮೂಲ ಮೌಲ್ಯಗಳನ್ನೇ ಧಿಕ್ಕರಿಸಿ ತಿನ್ನುವುದು, ತಿರುಗುವುದು, ಬೆರೆಯುವುದು ಇನ್ನೂ ಏನೇನನ್ನೋ ಮಾಡುತ್ತಿಲ್ಲವೆ?

ಹೀಗಿರಲಾಗಿ - ಹೆಚ್ಚು ಅನವಶ್ಯಕ ತಲೆಕೆಡಿಸಿಕೊಳ್ಳದೆ, ಇಂತಹ ಸಮಕಾಲೀನವಾಗಿ ಉಪಯೋಗಕ್ಕೆ ಬರದಿರುವ ವಸ್ತುಗಳನ್ನು ದಾನ ಮಾಡಿ ''ನಮ್ಮ ಸಂಪ್ರದಾಯ ರಕ್ಷಣೆಗೈದೆವೆಂದು ಉಬ್ಬುವುದರ ಬದಲು ಅದನ್ನು ಕೊಳ್ಳಲು ವ್ಯಯಿಸುವ 'ಹಣ'ವನ್ನು ದಕ್ಷಿಣೆಯಾಗಿ ನೀಡಿ, ಅವರಿಗೆ ಬೇಕಾದ್ದನ್ನು ಕೊಂಡು ಆ ಹಣ ಬಳಿಸಿಕೊಂಡರೆ ನಮಗೂ ತೃಪ್ತಿ ಅವರಿಗೂ ತೃಪ್ತಿ ಅಲ್ಲವೆ? ದುರ್ವ್ಯಯ ಅವರು ಮಾಡಿದರೆ ಅವರ ತಪ್ಪು. ಅದಕ್ಕೆ ನಾವು ಹೊಣೆ ಅಲ್ಲ. ಇಷ್ಟು ಧೈರ್ಯ ವಿವೇಕ ನಮಗಿರುವುದು ಸೂಕ್ತ.

**ಯಾರಿಗೆ ತಾವಿರುವಲ್ಲೆ ಸಂತೋಷ, ಉತ್ಸಾಹ ಕುತೂಹಲಗಳು ಇರುವುದಿಲ್ಲವೋ, ಅವರು ಅದನ್ನು ಹುಡುಕಿಕೊಂಡು ಎಲ್ಲಿಗೆ ಪ್ರವಾಸ ಹೋಗುವುದು ವ್ಯರ್ಥ**

**-ಪೂರ್ಣಚಂದ್ರ ತೇಜಸ್ವಿ**

# ಭಯೋತ್ಪಾದನೆ, ಲೈಂಗಿಕ ಕಿರುಕುಳ, ಅತ್ಯಾಚಾರ ಹಾಗೂ ಕೊಲೆ ವಿರುದ್ಧ ಪರಿಹಾರ ಕ್ರಮ ಮತ್ತು ಯೋಜನೆ

ಹೇಯ ಕೃತ್ಯ ನಡೆದ ನಂತರ ಶಿಕ್ಷೆ ವಿಧಿಸುವುದು ಸಮಸ್ಯೆಗಳ ಪರಿಹಾರವಲ್ಲ. ಸಮಸ್ಯೆಗಳನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮವಾಗಿ ಈ ಕೆಳಕಂಡ ಅಪರಾಧ ನಿರೋಧಕ ಅಂಶಗಳನ್ನು ಕೂಡಲೇ ಸರ್ಕಾರವು ಅನುಷ್ಠಾನ ಮಾಡುವ ಬಗ್ಗೆ ಚಿಂತಿಸಬಹುದಾಗಿದೆ.

1. ಎಲ್ಲಾ ವಯಸ್ಕರ ವಿಶೇಷವಾಗಿ ತಾರುಣ್ಯ ಹಾಗೂ ಬಿಸಿ ರಕ್ತದ ವಯಸ್ಕರ ಮನಸ್ಸಿನ ಮೇಲೆ ಕೆಳಮಟ್ಟದ ಸಿನಿಮಾ ಮತ್ತು ದೃಶ್ಯ ಮಾಧ್ಯಮಗಳ ಅಶ್ಲೀಲ, ಅಸಭ್ಯ, ಕ್ರೂರ ದೃಶ್ಯಗಳು ವಿಪರೀತ ದುಷ್ಪರಿಣಾಮ ಬೀರುತ್ತದೆ. ಎಳೆ ಮಕ್ಕಳ ಬುದ್ಧಿಯನ್ನು ವಿಕಾರಗೊಳಿಸುತ್ತದೆ. ಇಂತಹ ಮಾಧ್ಯಮಗಳಿಂದ ಸಮಾಜಕ್ಕೆ ಯಾವುದೇ ರೀತಿಯ ನೈತಿಕ ಮೌಲ್ಯಗಳು ದೊರಕುವುದಿಲ್ಲ ಇವುಗಳನ್ನು ತಡೆಗಟ್ಟಲು ಚಲನಚಿತ್ರ ನಿಯಂತ್ರಣ ಮಂಡಳಿಯನ್ನು ಹೆಚ್ಚು ಪರಿಣಾಮಕಾರಿ ಮತ್ತು ಜವಾಬ್ದಾರಿಯುತಗೊಳಿಸುವುದು. (ಈ ಹಿಂದೆಯೇ ಬಿಡುಗಡೆಯಾದ ಕೆಳಮಟ್ಟದ ಸಿನಿಮಾಗಳ ಮರು ಬಿಡುಗಡೆಗೆ ನಿಷೇಧ ಹೇರುವುದು).
2. ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸದೇ, ಎಲ್ಲಾ ಧರ್ಮಗಳನುಸಾರ ನೈತಿಕ ಶಿಕ್ಷಣವನ್ನು ತರಬೇತಿ ಪಡೆದ ಮತ್ತು ತಿಳುವಳಿಕೆ ಹೊಂದಿದ ಉತ್ತಮ ಶಿಕ್ಷಕರಿಂದ ಬೋಧಿಸುವುದು. ಪ್ರೌಢಶಿಕ್ಷಣದವರೆಗೆ ಎಲ್ಲರಿಗೂ ವಿದ್ಯಾಭ್ಯಾಸ ನೀಡುವುದು ಹಾಗೂ ಅರ್ಹತೆಯ ಮೇರೆಗೆ ಉನ್ನತ ಶಿಕ್ಷಣದ ಅವಕಾಶ ಒದಗಿಸುವುದು. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಆಯಾ ರಾಜ್ಯಭಾಷೆಯಲ್ಲಿ ಹಾಗೂ ಪ್ರೌಢಶಿಕ್ಷಣವನ್ನು ವಿದ್ಯಾರ್ಥಿಗಳ ಆಯ್ಕೆಯಂತೆ ಇತರೆ ಭಾಷೆಯಲ್ಲಿ ವ್ಯಾಸಂಗ.
3. ಸಿನಿಮಾ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಹಗಲು ರಾತ್ರಿಯನ್ನದೇ ಪ್ರದರ್ಶಿಸುವ ಕಾಮಪ್ರಚೋದಕ, ಅಶ್ಲೀಲ ಮತ್ತು ಕ್ರೂರ ದೃಶ್ಯಗಳನ್ನು ತಡೆಗಟ್ಟಲು ಸೂಕ್ತ ಕಾನೂನನ್ನು ಜಾರಿಗೊಳಿಸುವುದು.
4. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸಿನಂತೆ ಈ ಹಿಂದೆ ಇದ್ದಂತೆ ಮದ್ಯಪಾನ ನಿಷೇಧಿಸುವುದು ಹಾಗೂ ಕ್ಲಬ್‌ಗಳ ಮೇಲೆ ಹೆಚ್ಚಿನ ನಿಯಂತ್ರಣ ಮತ್ತು ಮೇಲ್ವಿಚಾರಣೆ ನಡೆಸುವುದು.
5. ಕ್ಲಬ್ ಹಾಗೂ ಇತರೆ ಮನೋರಂಜನಾ ಕೇಂದ್ರಗಳನ್ನು ರಾತ್ರಿ 10 ಘಂಟೆಯ ಮೇಲೆ ತೆರೆಯದಂತೆ ನಿರ್ಬಂಧಿಸುವುದು.
6. ಅಸಂಖ್ಯಾತ 'ಪಬ್'ಗಳನ್ನು ಹಾಗೂ ನಡುರಾತ್ರಿಯಲ್ಲಿ ಹಾಡು-ಕುಣಿತ ಮಾಡುವ ಸ್ಥಳಗಳನ್ನು ದೇಶಾದ್ಯಂತ ಪೂರ್ಣವಾಗಿ ನಿಷೇಧಿಸುವುದು.
7. ಪುರುಷರ ವಿವಾಹ ಮಿತಿ ವಯಸ್ಸನ್ನು 21ರಿಂದ 18ಕ್ಕೆ ಮತ್ತು ಸ್ತ್ರೀಯರ ವಿವಾಹ ಮಿತಿ ವಯಸ್ಸನ್ನು 18ರಿಂದ 15ಕ್ಕೆ ಇಳಿಸುವುದು.
8. ಉನ್ನತ ಶಿಕ್ಷಣದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿ ಯರಿಗೆ ಸಭ್ಯ ವಸ್ತ್ರಸಂಹಿತೆ ಅನುಷ್ಠಾನಗೊಳಿಸುವುದು. ರಾತ್ರಿ ವೇಳೆಯಲ್ಲಿ ಹೆಣ್ಣುಮಕ್ಕಳು ಮತ್ತು ಮಹಿಳೆಯರು ಸಂಚರಿಸುವುದರಿಂದಾಗುವ ಅಪಾಯಗಳ ಬಗ್ಗೆ ಅರಿವು ಮೂಡಿಸುವುದು. ಕ್ಲಬ್ ಹಾಗೂ ಉದ್ಯಾನವನಗಳಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಓಡಾಡುವ ಜೋಡಿಗಳನ್ನು ಗಮನಿಸುವುದು.
9. ಅಂತರ್ಜಾಲ, ಅಂತರ್ಜಾಲಕೇಂದ್ರ ಹಾಗೂ ಮೊಬೈಲ್‌ಗಳ ದುರ್ಬಳಕೆಯನ್ನು ನಿಯಂತ್ರಿಸುವುದು.
10. ಎಲ್ಲಾ ವಯೋಮಾನದವರಿಗೂ ನೀಲಿಚಿತ್ರ ಮತ್ತು ಲೈಂಗಿಕ ವೆಬ್‌ಪೇಜ್‌ಗಳ ನಿರ್ಬಂಧನೆ.
11. ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸರ್ಕಾರಿ ಅಥವಾ ಖಾಸಗಿವಲಯದಲ್ಲಿ ಕೆಲಸದ ಅವಕಾಶ ನೀಡುವುದು.
12. ಗುಪ್ತಚರ ಇಲಾಖೆಯ ಮೂಲಕ ಶಸ್ತ್ರಾಸ್ತ್ರಗಳನ್ನು ಹೊಂದಿರುವವರ ವಿರುದ್ಧ ಕಠಿಣ ಶಿಕ್ಷೆ ವಿಧಿಸುವುದು.
13. ಮಾಧ್ಯಮಗಳಲ್ಲಿ ಮತ್ತು ಶಾಲಾ-ಕಾಲೇಜಿಗಳಲ್ಲಿ ಲೈಂಗಿಕ ಶಿಕ್ಷಣ ನಿಷೇಧಿಸುವುದು, ಯುಗ ಯುಗಗಳಿಂದ ಮಾನವ, ಪ್ರಾಣಿ, ಪಶು-ಪಕ್ಷಿಗಳಲ್ಲಿ ಇದು ಸಹಜವಾಗಿ ನಡೆಯುವ ಪ್ರಕ್ರಿಯೆ. ಲೈಂಗಿಕತೆಗೆ ಯಾವ ಗುರುವಿನ ಅಗತ್ಯವಿಲ್ಲ.
14. ಮಾದಕ ದ್ರವ್ಯಗಳ ಆಮದು ಮತ್ತು ಮಾರಾಟದ ನಿಷೇಧ.
15. ವಿಶೇಷ ನ್ಯಾಯಾಲಯ ರಚನೆ ಮಾಡಿ, ಹೇಯ ಕೃತ್ಯ ಮಾಡಿದವರ ಪ್ರಕರಣಗಳನ್ನು ಶೀಘ್ರ ಇತ್ಯರ್ಥ ಮಾಡಿ ಕಠಿಣ ಶಿಕ್ಷೆಯನ್ನು ವಿಧಿಸುವುದು.
16. ಅನೈತಿಕ ಸಂಬಂಧ ಮತ್ತು ಅವಿವಾಹಿತ ಜೋಡಿಗಳ ಸಹಬಾಳ್ವೆ ವಿರುದ್ಧ ಕಠಿಣ ಕ್ರಮ.
17. ದೇಶದ ಕರಾವಳಿ ತೀರದಲ್ಲಿರುವ ಎಲ್ಲಾ ವಿಹಾರಧಾಮಗಳನ್ನು ಪೂರ್ಣ ತೆರವುಗೊಳಿಸುವುದು .
18. ಭಾರತದಲ್ಲಿ ವಾಸವಾಗಿರುವ ವಿದೇಶಿಯರ ಚಲನವಲನಗಳನ್ನು ಗಮನಿಸಲು ಗುಪ್ತಚರ ಇಲಾಖೆಯ ಪ್ರತ್ಯೇಕ ವಿಭಾಗ ರಚನೆ. ವಿದೇಶಿಯರು ದೇಶಕ್ಕೆ ಬಂದ ದಿನಾಂಕ, ಅವರ ಜನ್ಮಸ್ಥಳ ಹಾಗೂ ಜನ್ಮ ದಿನಾಂಕವನ್ನು ಪರಿಶೀಲಿಸಿ, ಅಕ್ರಮವಾಗಿ ಗಡಿದಾಟಿ ವಲಸೆ ಬಂದವರನ್ನು ಗಡಿಪಾರು ಮಾಡುವುದು.
19. ಮೇಲಿನ ಜವಾಬ್ದಾರಿಗಳನ್ನು ವಿಭಿನ್ನ ಸಚಿವಾಲಯಗಳು ಸಮನ್ವಯ ಮುಖೇನ ಕಾರ್ಯ ವಿಭಾಗ ಮತ್ತು ಹಂಚಿಕೆ ಮಾಡಿಕೊಂಡು ಅನುಚ್ಠಾನಕ್ಕೆ ತರುವುದು.
20. ಮೇಲೆ ಹೇಳಿರುವ ಕ್ರಮಗಳ ಶೀಘ್ರ ಅನುಷ್ಠಾನದ ಬಗ್ಗೆ ಗಂಭೀರವಾಗಿ ಪರಿಗಣಿಸದಿದ್ದರೆ ಪರಿಸ್ಥಿತಿ ಇನ್ನೂ ಹದಗೆಡುವುದು. **ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.**

**-ವೇದವ್ಯಾಸ**

# ಹೆತ್ತವರಿಗೆ ಹತ್ತು ಕಿವಿಮಾತು

(ಉತ್ತಮ ಹೆತ್ತವರಾಗೋದು ಸುಲಭದ ಕೆಲಸವಲ್ಲ!)

''ನಾವು ಮಾಡಿದ ಒಳ್ಳೆಯದು ನಮಗೆ, ನಮ್ಮ ಮಕ್ಕಳ ರೂಪದಲ್ಲಿ ಫಲಕೊಡುತ್ತೆ. ಅಂತೆಯೇ ನಾವು ಮಾಡಿದ ಕೆಟ್ಟದ್ದು ನಮ್ಮನ್ನು ನಮ್ಮ ಮಕ್ಕಳ ರೂಪದಲ್ಲಿ ಕಾಡುತ್ತೆ'' ಎಂಬ ಒಂದು ಮಾತಿದೆ. ಹೌದು ತಮ್ಮ ಮಕ್ಕಳು ಚೆನ್ನಾಗಿದ್ದರೆ, ಹೆತ್ತವರಿಗೆ ಹೆಮ್ಮೆ, ನೆಮ್ಮದಿ ಹಾಗೂ ಸಂತಸ. ವ್ಯತಿರಿಕ್ತವಾಗಿ ಮಕ್ಕಳ ಜೀವನ ತಮ್ಮ ಕಣ್ಣೆದುರಲ್ಲೇ ಹಾಳಾಗಿಹೋದರೆ ಹೆತ್ತವರಿಗೆ ನಿರಂತರ ದುಃಖ. ಅದಕ್ಕೆ ಹೇಳೋದು, ಯಾರಿಗಾದರೂ ಆಶೀರ್ವಾದ ಮಾಡಬೇಕಿದ್ದರೆ ನೇರವಾಗಿ ಅವರನ್ನೇ ಆಶೀರ್ವದಿಸಬೇಕಾಗಿಲ್ಲ; 'ನಿನ್ನ ಮಕ್ಕಳು ಚೆನ್ನಾಗಿರಲಿ' ಎಂದಷ್ಟೇ ಹೇಳಿದರೆ ಸಾಕು. ಅಂತೆಯೇ ನೊಂದಾಗ ಯಾರನ್ನಾದರೂ ನೇರವಾಗಿ ಶಪಿಸಬೇಕೆಂದಿಲ್ಲ; 'ನಿನ್ನ ಮಕ್ಕಳು ಹಾಳಾಗಿ ಹೋಗಲಿ' ಎಂದರೂ ಸಾಕು. ಅದೇ ದೊಡ್ಡ ಶಾಪ! ಕಾರಣ, ಹೆತ್ತವರ ಮತ್ತು ಮಕ್ಕಳ ಸಂಬಂಧ ಅದು ಬರಿಯ 'ಕೊರಳ' ಸಂಬಂಧವಲ್ಲ; ಯಾರು ಯಾವ ಕಾಲಕ್ಕೂ ಕಡಿದು ಹಾಗಲಾಗದ ಪ್ರಶ್ನಾತೀತವಾದ 'ಕರುಳ ಸಂಬಂಧ. ಆದುದರಿಂದಲೇ ಮಕ್ಕಳನ್ನು ಮನೆಯ 'ನಂದಾದೀಪ'ಗಳು. ಹೆತ್ತವರ ಆಶಾಕಿರಣಗಳೆಂದು ಕರೆಯೋದು. ಹೆತ್ತವರು ತಾವು ಈಡೇರಿಸಲಾಗದ ಆಸೆ ಆಕಾಂಕ್ಷೆಗಳನ್ನು, ಕನಸುಗಳನ್ನು ತಮ್ಮ ಮಕ್ಕಳ ಮೂಲಕ ಸಾಕಾರಗೊಳಿಸಿ ಜೀವನದಲ್ಲಿ ಸಾರ್ಥಕತೆಯನ್ನು ಪಡೆಯಲಿಚ್ಛಿಸುತ್ತಾರೆ.

ಆದರೆ ಯಾವುದೇ ಒಂದು ಮಗು ಆರೋಗ್ಯವಂತನಾಗಿ ಬೆಳೆದು ಶಿಕ್ಷಣದ ಜೊತೆ ಸಂಸ್ಕಾರವನ್ನೂ ಪಡೆದು ಸಮಾಜದಲ್ಲಿ ಓರ್ವ ಗೌರವಾನ್ವಿತ ವ್ಯಕ್ತಿಯಾಗಿ ಹೊರ ಹೊಮ್ಮಬೇಕಾದರೆ, ಹೆತ್ತವರ ಹೊಣೆಗಾರಿಕೆ ಮತ್ತು ಶಿಕ್ಷಕರ ಸೂಕ್ತ ಮಾರ್ಗದರ್ಶನ ಅತಿದೊಡ್ಡ ಪಾತ್ರವನ್ನು ವಹಿಸುತ್ತದೆ. ಅಂತೆಯೇ ಬಾಲ್ಯದಿಂದಲೇ ಅಶಿಸ್ತಿನಿಂದ ಬೆಳೆದ, ಕೆಟ್ಟವರ ಸಹವಾಸ ಸಂಸರ್ಗದಲ್ಲಿ ಸಿಲುಕಿದ ಮಗು, ಕೆಟ್ಟ ಛಾಳಿಗಳನ್ನು ಕಲಿತು ಅಡ್ಡದಾರಿಯನ್ನು ಹಿಡಿದು ಮನೆಗೆ ಮಾರಿಯಾಗಿ, ಸಮಾಜಕ್ಕೆ ಭಾರವಾಗಿ, ದೇಶಕ್ಕೆ ಹೊರೆಯಾದ ವ್ಯಕ್ತಿಯಾಗಲು ಕೂಡಾ ಹೆತ್ತವರ ಬೇಜವಾಬ್ದಾರಿತನ ಮತ್ತು ಮಾರ್ಗದರ್ಶನದ ಕೊರತೆಗಳು ಕಾರಣವಾಗುತ್ತದೆ. ಹೆತ್ತವರೆಂದರೆ ಬರೇ ಮಕ್ಕಳನ್ನು ಹೆತ್ತವರು ಮಾತ್ರವಲ್ಲ; ಜೀವನ ಪರ್ಯಂತ ಅವರ ಜವಾಬ್ದಾರಿಗಳನ್ನು ಹೊತ್ತವರು ಎಂದರ್ಥ. ಬರೇ ಮಕ್ಕಳನ್ನು ಹೆತ್ತುಬಿಟ್ಟು ಅವರಿಗೆ ಊಟ, ತಿಂಡಿ, ಬಟ್ಟೆ ಬರೆ ಕೊಡಿಸಿಬಿಟ್ಟು, ಶಾಲೆಗೋ ಹಾಸ್ಟೆಲ್‌ಗೋ ಸೇರಿಸಿಬಿಟ್ಟರೆ, ಹೆತ್ತವರ ಹೊಣೆಗಾರಿಕೆ ಕೊನೆಯಾಗಲಿಲ್ಲ. ಹೆತ್ತವರ ಜವಾಬ್ದಾರಿ ಜೀವನ ಪರ್ಯಂತ. ಮಕ್ಕಳನ್ನು ಹಡೆದ ಮೇಲೆ ಅವರ ಬಾಳಿನುದ್ದಕ್ಕೂ ಅವರ ಪೋಷಕರಾಗಿ, ಶಿಕ್ಷಕರಾಗಿ, ರಕ್ಷಕರಾಗಿ, ಮಾರ್ಗದರ್ಶಕರಾಗಿ, ಹೆತ್ತವರು ಕಾರ್ಯ ನಿರ್ವಹಿಸಬೇಕಾಗುತ್ತದೆ. ಮಕ್ಕಳನ್ನು ದೇಶದ ಜವಾಬ್ದಾರಿಯುತ ಸತ್ಪ್ರಜೆಗಳನ್ನಾಗಿ ಪರಿವರ್ತಿಸುವಲ್ಲಿ ಪೋಷಕರದ್ದು ಮತ್ತು ಶಿಕ್ಷಕರದ್ದೇ ಮೇಲುಗೈ. ಈ ದಿಸೆಯಲ್ಲಿ ಹೆತ್ತವರಿಗೆ ಹತ್ತು ಕಿವಿಮಾತುಗಳು.

1. ಪ್ರಸ್ತುತ ಪರಿಸ್ಥಿತಿಯಲ್ಲಂತೂ ಮನೆಗೆ ಒಂದೆರೆಡು ಮಕ್ಕಳಿದ್ದರೆ ಸಾಕು. ಮಕ್ಕಳು ಹೆಚ್ಚಾದಂತೆ, ಅವರನ್ನು ಓದಿಸಿ, ಸಮರ್ಥ ಸ್ವಾವಲಂಬೀ, ವ್ಯಕ್ತಿಗಳನ್ನಾಗಿ ಮಾಡುವಲ್ಲಿ ಹೆತ್ತವರು ಎದುರಿಸಬೇಕಾದ ಸಮಸ್ಯೆಗಳು ಕೂಡಾ ಹೆಚ್ಚಾಗುತ್ತವೆ. 'ಬಡವರಿಗೆ ಮಕ್ಕಳು ಜಾಸ್ತಿ' ಎಂಬ ಮಾತಿದೆ. ಆದರೆ ಹೆಚ್ಚು ಮಕ್ಕಳನ್ನು ಹಡೆಯುವಲ್ಲಿ, ಬಡತನ ಕಾರಣವಾಗಬಾರದು. ಏಕೆಂದರೆ -"Poor people have more children; more children will make them more poor" ಎಂಬ ಮಾತಲ್ಲಿ ಸತ್ಯವಿದೆ. ಗಂಡಾಗಲಿ, ಹೆಣ್ಣಾಗಲಿ, ತೃಪ್ತಿ ಇರಲಿ. ಸತ್ತ ಮೇಲೆ ಅಂತ್ಯಕ್ರಿಯೆ ನೆರವೇರಿಸಿ, ಸದ್ಗತಿ ಕಾಣಿಸಲು ಹಾಗೂ ವಂಶೋದ್ಧಾರಕನಾಗಿಯೂ ಒಂದು ಗಂಡು ಮಗು ಬೇಕೇ ಬೇಕು ಎನ್ನುವ ಧೋರಣೆ ಅವಿವೇಕತನ. ಕಾರಣ, ಸದ್ಗತಿ ಎಂಬುದೊಂದಿದ್ದರೆ, ಅದು ಪ್ರಾಪ್ತವಾಗೋದು ನಾವು ಗೈದ ಸತ್ಕಾರ್ಯಗಳಿಂದಲೇ ಹೊರತು ನಮ್ಮ ಮಕ್ಕಳ ಕೃಪೆಯಿಂದಲ್ಲ! ಮೇಲಾಗಿ ಜೀವನದಲ್ಲಿ ನೆರವಾಗುವವರು ಯಾರೋ, ಅಂತ್ಯಕಾಲದಲ್ಲಿ ದೊರಕುವವರು ಯಾರೋ. ಏನೇ ಇರಲಿ ಹೆಣ್ಣಾಗ್ಲಿ, ಗಂಡಾಗಲಿ, ಇಬ್ಬರೂ ಹೆತ್ತವರಿಗೆ ಎರಡು ಕಣ್ಣುಗಳಂತಿರಬೇಕು. ಮಕ್ಕಳಿಗೆ ಸರಿಸಮಾನವಾದ ಪ್ರೀತಿ, ವಿದ್ಯಾಭ್ಯಾಸ ಹಾಗೂ ತಮ್ಮ ಆಸ್ತಿ-ಪಾಸ್ತಿಗಳಲ್ಲಿ ಹಕ್ಕು ಬಾಧ್ಯತೆಗಳನ್ನು ನೀಡಬೇಕಾದುದು ಸಮಂಜಸ ಮಾತ್ರವಲ್ಲ ಕಾನೂನು ಬದ್ಧವೂ ಹೌದು. ಗಂಡು ಮಗ ಮನೆ ಕೆಲಸ ಮಾಡಬಾರದು, ಹೆಣ್ಣು ಮಕ್ಕಳನ್ನು ಹೆಚ್ಚು ಆಚೆ ಬಿಡಬಾರದು - ಎನ್ನುವುದೆಲ್ಲಾ ಹಳೇ ಕತೆ.

2. ಎಲ್ಲಾ ಹೆತ್ತವರಿಗೂ ಮನವರಿಕೆಯಾಗಿರುವ ವಿಷಯವೇನೆಂದರೆ, ಇಂದಿನ ದಿನಗಳಲ್ಲಿ ಮಕ್ಕಳನ್ನು handle ಮಾಡೋದು ಅಷ್ಟು ಸುಲಭದ ಕೆಲಸವಲ್ಲ. It has become a global challenge. ಹೀಗಾಗಲು ಕಾರಣಗಳು ಹಲವಾರು. ಹಿಂದಿನ ಕಾಲದಲ್ಲಿದ್ದ ಅವಿಭಕ್ತ ಕುಟುಂಬ ಪದ್ಧತಿಗಳು (Joint family system) ಮಾಯವಾಗಿ, ವಿಭಕ್ತ ಕುಟುಂಬ ಪದ್ಧತಿ (nuclear family) ಸರ್ವೇ ಸಾಮಾನ್ಯವಾಗಿ ಬಿಟ್ಟಿರೋದು. ಪರಿಣಾಮವಾಗಿ ಮಗುವಿಗೆ ಸಿಗುತ್ತಿದ್ದ ತರ ತರಹದ ಪ್ರೀತಿ, ರಕ್ಷಣೆ, ಬುದ್ಧಿವಾದಗಳು, ಮಾರ್ಗದರ್ಶನಗಳು ಇಲ್ಲವಾಗಿವೆ. ಅವಿಭಕ್ತ ಕುಟುಂಬ ಪದ್ಧತಿ ತ್ಯಾಗ, ಸಹನೆ ಹೊಂದಾಣಿಕೆಗಳನ್ನೊಳಗೊಂಡು ಕೂಡಿಬಾಳುವ ಕಲೆಯನ್ನು ತಿಳಿಸಿಕೊಡುತ್ತಿತ್ತು. ಈಗಿನ ದಿನಗಳಲ್ಲಂತೂ, ಮಗು ಒಂಟಿಯಾಗಿ ಬಿಟ್ಟಿದೆ. ತಾಯಿ ತಂದೆಯರಿಬ್ಬರೂ, ದುಡಿಯುವವರಾಗಿದ್ದರೆ ಮಗು ಬೆಳಗ್ಗೆ ಎದ್ದಾಗಲೂ ಅಪ್ಪ ಅಮ್ಮ ಮನೆಯಲ್ಲಿ ಇರೋದಿಲ್ಲ. ಅವರು ರಾತ್ರಿ ಹಿಂತಿರುಗುವ ವೇಳೆಗೆ ಮಗು ನಿದ್ದೆ ಹೋಗಿರುತ್ತದೆ. ಮಕ್ಕಳಿಗೆ ಕೆಲಸದವರೇ ಗತಿ. ಈಗಂತೂ ಗಂಡ-ಹೆಂಡತಿ ಒಟ್ಟಿಗೆ ಇದ್ದರೆ ಅದುವೇ ಒಂದು ಅವಿಭಕ್ತ ಕುಟುಂಬವೆಂದೆನಿಸಿಬಿಟ್ಟಿದೆ! ಈಗಿನ ಕಾಲದ ಮಕ್ಕಳಿಗೆ ವಿವಿಧ ಮಾಧ್ಯಮಗಳ ಮೂಲಕ ಹೊರಜಗತ್ತಿನ ಪರಿಚಯ (Exposure to external world) ಬಲುಬೇಗ ಆಗಿರುತ್ತೆ. ಪರಿಣಾಮವಾಗಿ ಮಕ್ಕಳ I.Q ಜಾಸ್ತಿ ಆಗಿದೆ. ಮೇಲಾಗಿ, ಈಗಿನ ಮಕ್ಕಳಿಗೆ ಪ್ರಶ್ನಿಸುವ, ಡಿಮ್ಯಾಂಡ್ ಮಾಡುವ ಮನೋಭಾವ

ಹೆಚ್ಚಾಗಿದೆ. ಇವರನ್ನು ಸಂಭಾಳಿಸೋದು ಸುಲಭದ ಕೆಲಸವಲ್ಲ. ಮೇಲಾಗಿ, ಈಗಿನ ಕಾಲದ ಮಕ್ಕಳು ಅವರ ಹೆತ್ತವರಷ್ಟು ಕಷ್ಟ ಪಟ್ಟಿಲ್ಲ. ಕಷ್ಟವೇನೆಂಬುದು ಅವರಿಗೆ ಗೊತ್ತಿಲ್ಲ. ಹೆತ್ತವರೋ ತಮ್ಮ ಮಕ್ಕಳು, ತಮ್ಮಂತೆ ಕಷ್ಟಪಡಬಾರದೆಂದು, ಮಮತೆಯಿಂದ ಅವರನ್ನು ಸಾಕುತ್ತಾರೆ. ಬಹಳಸಲ ಇದು ಕುರುಡು ಮೋಹವಾಗಿ ಮಾರ್ಪಟ್ಟು "single child syndorme" ಎಂಬ ಒಂದು ಹೊಸ ಪರಿಸ್ಥಿತಿಗೆ ಕಾರಣವಾಗುತ್ತದೆ. ಆದುದರಿಂದ ಮಕ್ಕಳ ಮೇಲೆ ಮೋಹವಿರಲಿ, ಕುರುಡು ಮೋಹ ಬೇಡ. ಅಪ್ಪ ATM, ಅಮ್ಮ Vending Machine ಆಗಬಾರದು.

3. ಬೆಳೆಯುವ ಮಕ್ಕಳಿಗೆ ಎಲ್ಲಾ ಪೋಷಕಾಂಶಗಳನ್ನೊಳಗೊಂಡ ಒಳ್ಳೆಯ ಸಮತೋಲನ ಆಹಾರ (Balanced diet) ವನ್ನ ನೀಡಬೇಕಾದುದು ಹೆತ್ತವರ ಆದ್ಯ ಕರ್ತವ್ಯ. ಆಹಾರದ ವಿಚಾರದಲ್ಲಿ ಮೂಢನಂಬಿಕೆಗಳು ಇರಲೇಬಾರದು. ಅಂತೆಯೇ ಬಾಲ್ಯದಿಂದಲೇ ಶಿಸ್ತು, ಸ್ವಚ್ಛತೆ, ಸೌಜನ್ಯ–ಸಭ್ಯತೆ, ಪ್ರಾಮಾಣಿಕತೆ, ಅತಿಥಿ ಸತ್ಕಾರ, ದೇವರಲ್ಲಿ ನಂಬಿಕೆ ಹಿರಿಯರಿಗೆ ಗೌರವ ಹಾಗೂ ಉತ್ತಮ ಅಭ್ಯಾಸ ಹವ್ಯಾಸಗಳನ್ನು ತಿಳಿಸಿಕೊಡಬೇಕು. ''ಲಾಲಯೇತ್ ಪಂಚವರ್ಷಾಣಿ, ತಾಢಯೇತ್ ದಶವರ್ಷಾಣಿ ಪ್ರಾಪ್ತೇತು ಷೋಡಶೇ ವರ್ಷೇ, ಪುತ್ರಂ ಮಿತ್ರಂ ವದಾಚರೇತ್'' ಎಂಬ ಸುಭಾಷಿತದಂತೆ ಮೊದಲ 5 ವರುಷಗಳವರೆಗೆ ಮಕ್ಕಳ ಪಾಲನೆ ಪೋಷಣೆಗಳನ್ನು ಅತ್ಯಂತ ಪ್ರೀತಿ ಪ್ರೇಮಗಳಿಂದ ಮಾಡಬೇಕು. ನಂತರದ ಹತ್ತು ವರುಷಗಳಲ್ಲಿ ಬುದ್ಧಿ ಹೇಳುತ್ತಾ ತಪ್ಪಿದಲ್ಲಿ ಶಿಕ್ಷಿಸುತ್ತಾ ಶಿಸ್ತಿನಿಂದ ಬೆಳೆಸಬೇಕು. ಮುಂದೆ ಮಕ್ಕಳು ಪ್ರೌಢರಾಗುತ್ತಿದ್ದಂತೆ, ಅವರನ್ನು ಮಿತ್ರತಾ ಭಾವದಿಂದ ಕಾಣಬೇಕು. ಯಾವ ಮನೆಯಲ್ಲಿ ಹೆತ್ತವರು ಮತ್ತು ಮಕ್ಕಳು ಸ್ನೇಹಿತರಂತೆ, ಪರಸ್ಪರ ಅನ್ಯೋನ್ಯತೆಯಿಂದ ಇರುತ್ತಾರೋ ಅಂತಹ ಮನೆಗಳಲ್ಲಿ ಸಮಸ್ಯೆಗಳು ಕಡಿಮೆ.

4. "Parenting is more important than merely financing chindren" ಎಂಬ ಮಾತಿದೆ. ಕೇವಲ ಹಣಬಲದಿಂದ ಮಕ್ಕಳನ್ನು ಬೆಳೆಸಬಹುದು ಎಂಬ ಭಾವನೆ ತಪ್ಪು. ಮಕ್ಕಳಿಗೆ ದುಡ್ಡಿಗಿಂತಲೂ ಹೆಚ್ಚಾಗಿ ಬೇಕಾದುದು ಹೆತ್ತವರ ಪ್ರೀತಿ. ಅದು ಮಕ್ಕಳ ಮನಸ್ಸಿನ ಮೇಲೆ tonic ನಂತೆ ಕೆಲಸ ಮಾಡುತ್ತದೆ. ಈಗಿನ ಕಾಲದಲ್ಲಿ ಹೆಚ್ಚಿನ ಮಕ್ಕಳಿಗೆ ಅವಿತುಕೊಳ್ಳಲು ಅಮ್ಮನ ಎದೆ ಇಲ್ಲ; ಹೊದ್ದುಕೊಳ್ಳಲು ಅಮ್ಮನ ಸೆರಗಿಲ್ಲ; ಸುಖವಾಗಿ ನಿದ್ರಿಸಲು ಅಮ್ಮನ ಮಡಿಲಿಲ್ಲ. ಎಲ್ಲೋ ಪ್ಲೇ ಹೋಂನಲ್ಲಿ, ಯಾರದೋ ನಿಗಾದಡಿ ಕಾಲ ಕಳೆಯುತ್ತವೆ. ಬೆಳೆದ ಮಕ್ಕಳಿಗೂ ಹೆತ್ತವರ ಪ್ರೀತಿ–ಸ್ನೇಹ–ವಾತ್ಸಲ್ಯ ಮತ್ತು ಮಾರ್ಗದರ್ಶನ ಮುಂದುವರಿಯಲೇ ಬೇಕು. ಕಾರಣ ಬೆಳೆಯುವ ವಯಸ್ಸಿನಲ್ಲಿ ಇವರಿಗೆ ಹೊರಗಿನಿಂದ ಆಕರ್ಷಣೆ, ಒಳಗಿನಿಂದ ಘರ್ಷಣೆ!

5. "Spending time with children is more important than spending money on them" ಎಂಬ ಮಾತಿದೆ. ಹೆತ್ತವರ ಮಕ್ಕಳಿಗೆ ಕೊಡಬಹುದಾದ ಅತಿದೊಡ್ಡ ಉಡುಗೊರೆ ಎಂದರೆ, ಅವರ ಸಮಯ. ಹೆತ್ತವರು ಹೆಚ್ಚು ಹೆಚ್ಚು ವೇಳೆಯನ್ನು ಮಕ್ಕಳ ಜೊತೆ ಕಳೆಯಬೇಕು. ಅವರೊಡನೆ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡೋದು, ಅವರ ಪ್ರತಿಯೊಂದು ಮಾತನ್ನು ಗಮನವಿಟ್ಟು ಕೇಳೋದು, ಅವರ ಪ್ರಶ್ನೆಗಳಿಗೆ ಉತ್ತರಿಸೋದು, ಅವರ ಜೊತೆ ಆಟ ಆಡೋದು, ಜೊತೆಯಲ್ಲಿ ಊಟಮಾಡೋದು ಅವರನ್ನು ಆಗಾಗ ಪ್ರವಾಸಕ್ಕೆ ಕರೆದುಕೊಂಡು ಹೋಗುವುದು – ಎಲ್ಲವೂ ಮಕ್ಕಳ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನು ಬೀರುತ್ತದೆ. ಅವರ ಅಭಿಪ್ರಾಯ – ಅನಿಸಿಕೆಗಳಿಗೆ ಕೂಡಾ ಬೆಲೆ ಕೊಡಿ. ಮಕ್ಕಳನ್ನು ಪ್ರೀತಿಸುವ ಹೆತ್ತವರಿಗೆ ಅವರನ್ನೂ ದಂಡಿಸುವ ಹಕ್ಕೂ ಕೂಡಾ ತನ್ನಿಂದ ತಾನೇ ಪ್ರಾಪ್ತವಾಗುತ್ತದೆ. ಆಗ ಶಿಕ್ಷೆಯನ್ನು ಮಕ್ಕಳು ಕೂಡಾ ಮರೆತುಬಿಡುತ್ತಾರೆ. ಅದಕ್ಕೇ ಹೇಳೋದು ''ಅಮ್ಮ ಕೊಟ್ಟ ಗುದ್ದಲ್ಲಿ ನೋವೇ'' ಇಲ್ಲವೆಂದು.

6. ಮನೆಯಲ್ಲಿ ಸುಸಂಕೃತ ವಾತಾವರಣವನ್ನು ನಿರ್ಮಿಸೋದು ಹೆತ್ತವರ ಆದ್ಯ ಕರ್ತವ್ಯ. ಶಿಕ್ಷಣ ಶಾಲಾ ಕಾಲೇಜಿನಿಂದ ಬರಲಿ, ಆದರೆ ಸಂಸ್ಕಾರ ಮನೆಯಿಂದಲೂ, ಉತ್ತಮರ ಸಂಸರ್ಗದಿಂದಲೂ ಬರಬೇಕು. ಈ ಹಿನ್ನಲೆಯಲ್ಲಿ ಮನೆಯಲ್ಲಿ ಮಕ್ಕಳೆದುರು ಕೆಟ್ಟ ಶಬ್ದಗಳ ಪ್ರಯೋಗ ವರ್ಜ್ಯ. ಕಾರಣ ಮಗು ಅವುಗಳನ್ನು ನಮ್ಮಿಂದಲೇ ಕಲಿತು ಮುಂದೆ ಧಾರಾಳವಾಗಿ ಪ್ರಯೋಗ ಮಾಡುತ್ತೆ. ಅಂತೆಯೇ ಹೆತ್ತವರು ಮಕ್ಕಳೆದುರು ಜಗಳವಾಡಬಾರದು. "An husband and wife can fight but not a father and mother" ಎಂಬ ಮಾತು ಎಷ್ಟು ದಿಟ! ಏಕೆಂದರೆ ಹೆತ್ತವರೇ ಜಗಳವಾಡುತ್ತಿದ್ದರೆ, ಮಗುವಿಗೆ ಅವರ ಬಗ್ಗೆ ಗೌರವ ಕಡಿಮೆಯಾಗುತ್ತದೆ, ಮಾತ್ರವಲ್ಲ ಅವರಿಬ್ಬರ ಪೈಕಿ ಯಾರ ಪಕ್ಷ ಹಿಡಿಯಬೇಕೆಂಬ ಗೊಂದಲವೂ ಉಂಟಾಗುತ್ತದೆ. ಜಗಳ ಅತಿಯಾದಾಗ ಮಕ್ಕಳಿಂದಲೇ ಬುದ್ಧಿವಾದ ಹೇಳಿಸಿಕೊಳ್ಳುವ ಅಸಹ್ಯ ಪ್ರಸಂಗವೂ ಹೆತ್ತವರಿಗೆ ಒದಗಿ ಬರಬಹುದು. ಅಂತೆಯೇ ಹೆತ್ತವರು, ಮಕ್ಕಳೆದುರು ಸುಳ್ಳು ಹೇಳಬಾರದು; ಕೆಟ್ಟ ಕೆಲಸ ಮಾಡಬಾರದು, ಬಾಡಿಗೆ ಕೇಳಲು ಮಾಲಿಕ ಬರುತ್ತಿದ್ದಂತೆ ''ಮಗೂ ಮನೆಯಲ್ಲಿ ನಾನಿಲ್ಲವೆಂದು ಹೇಳು'' ಎಂಬುದಾಗಿ ಹೇಳಿದರೆ ಮಗುವಿಗೆ ಸುಳ್ಳು ಹೇಳೋದನ್ನ ನೀವೇ ಕಲಿಸಿ ಕೊಟ್ಟಂತಾಯಿತು. ನಿತ್ಯ ಕುಡಿಯುವ ಅಪ್ಪನಿಗೆ ''ನೀನು ಕುಡಿಯಬಾರದು'' ಎಂದು ಮಗುವಿಗೆ ಬುದ್ಧಿವಾದ ಹೇಳುವ ನೈತಿಕ ಹಕ್ಕನ್ನೇ ಕಳೆದುಕೊಂಡಿರುತ್ತಾನೆ. ಮಕ್ಕಳು ತಪ್ಪು ಮಾಡಿದಾಗ ಬೈಯೋದು ಹೊಡಿಯೋದು ಕೂಡಾ ನಿಷೇಧ. ಹೀಗೆ ಮಾಡಿದರೆ, ಮಗುವಿಗೆ ಮನಸ್ಸಿನಲ್ಲಿ ದ್ವೇಷ, ಪ್ರತೀಕಾರದ ಭಾವನೆಗಳು ಹುಟ್ಟಿಕೊಳ್ಳಬಹುದು. ಬದಲಾಗಿ, ಸಮಾಧಾನದಿಂದ ಮಕ್ಕಳಿಗೆ ಅವರ ತಪ್ಪುಗಳನ್ನು ತಿಳಿಹೇಳಿ, ತಮ್ಮ ತಪ್ಪುಗಳ ಬಗ್ಗೆ ಅರಿವು ಮೂಡಿಸಿ, ಮುಂದೆ ಅವು ಪುನರಾವರ್ತಿಸದಂತೆ ನೋಡಿಕೊಳ್ಳಬೇಕು. ಮೇಲಾಗಿ, ತಪ್ಪೆಸೈದ ಮಕ್ಕಳನ್ನು ತಂದೆ ತಾಯಿ ಜೊತೆ ಜೊತೆಯಾಗಿಯೇ ತಿದ್ದಬೇಕು. ಒಬ್ಬರು ಬೈದು ಇನ್ನೊಬ್ಬರು ಹೊಗಳಿದರೆ ಅಥವಾ ಸುಮ್ಮನಾದರೆ, ಸಹಜವಾಗಿಯೇ, ಬೈದವರಿಂದ ಮಕ್ಕಳು ದೂರವಾಗುತ್ತಾರೆ ಹೀಗಾಗಬಾರದು.

7. ಕಾಲೇಜಿನಲ್ಲಿ ಕೋರ್ಸಿನ ಆಯ್ಕೆಯಿಂದ ಹಿಡಿದು, ತಮ್ಮ ಬಾಳ ಸಂಗಾತಿಯ ಆಯ್ಕೆಯವರೆಗೆ ಹೆತ್ತವರು ಮಕ್ಕಳ ಮೇಲೆ ಒತ್ತಡ ಹೇರೋದು ತರವಲ್ಲ. (Not to compell) ನಿಮ್ಮ ಸಲಹೆ ಸೂಚನೆಗಳನ್ನು ನೀಡಿ, ಆದರೆ ಅವರವರ ಆಸಕ್ತಿ–ಅಭಿರುಚಿಗೆ ತಕ್ಕಂತಹ ಅಂತಿಮ ಆಯ್ಕೆ ಅವರದೇ ಆಗಿರಲಿ. ಅಂತೆಯೇ ಮಕ್ಕಳು ಫೇಲಾದಾಗ, ಇಲ್ಲವೆ ಕಡಿಮೆ ಅಂಕಗಳನ್ನು ಪಡೆದಾಗ, ಅವರನ್ನು

ಮುಖ್ಯವಾಗಿ ಇತರರ ಎದುರು ಹಂಗಿಸಬೇಡಿ; ಹೀಯಾಳಿಸಬೇಡಿ (Not to comdemm). ಹೀಗೆ ಮಾಡಿದರೆ ಮಕ್ಕಳು ತಮ್ಮ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಹುದು. ಇಲ್ಲವೇ ಕೀಳರಿಮೆಯನ್ನು ತಂದುಕೊಳ್ಳಬಹುದು. ಮೇಲಾಗಿ, ಜೀವನವನ್ನು ಸಮರ್ಥರಾಗಿ ಎದುರಿಸಿ ಯಶಸ್ವಿಯಾಗಲು, Rankಗಳೇ ಬೇಕೆಂದಿಲ್ಲ; ಒಂದಿಷ್ಟು ಪರಿಶ್ರಮ ಮತ್ತು ಸಾಮಾನ್ಯ ಜ್ಞಾನ (Commen Sense) ಇದ್ದರೂ ಸಾಕಲ್ಲವೇ. "Syllabus for life is different than the syllabus of Universities" ಎಂಬ ಮಾತಿನಂತೆ, ವಿಶ್ವವಿದ್ಯಾಲಯದ ಪಠ್ಯಕ್ರಮವೇ ಬೇರೆ. ಅಂತೆಯೇ ನಿಮ್ಮ ಮಕ್ಕಳು ಅಪೇಕ್ಷಿತ ಮಟ್ಟಕ್ಕೆ ಏರದಿದ್ದಾಗ, ಅವರನ್ನು ಇತರ ಯಶಸ್ವಿ ಮಕ್ಕಳ ಜೊತೆ ತುಲನೆ ಮಾಡಬೇಡಿ (Not to compare). ಇದರಿಂದ ಅವರ ಆತ್ಮಸ್ಥೈರ್ಯಕ್ಕೆ ಧಕ್ಕೆ ಆಗಬಹುದು. ಎಷ್ಟಾದರೂ ಒಂದೊಂದು ಹೂವಿಗೆ ಒಂದೊಂದು ಅಂದ; ಒಂದೊಂದು ಮಕರಂದವಿದೆ ಯಲ್ಲವೇ? ಮುಖ್ಯವಾಗಿ ಮಕ್ಕಳನ್ನು ಅತಿಯಾಗಿ ಮುದ್ದುಮಾಡಬೇಡಿ (Not to pampher) ನೀವು ಎಷ್ಟೇ ಶ್ರೀಮಂತರಾಗಿದ್ದರೂ ಮಕ್ಕಳಿಗೆ ಅವಶ್ಯಕತೆಗಳನ್ನು ಮಾತ್ರ ನೀಡಿ; ವಿಲಾಸಿ ವಸ್ತುಗಳನ್ನಲ್ಲ. (Give them only necessities; not Luxuries) ಮಕ್ಕಳಿಗೆ ಹಣದ ಬೆಲೆ ತಿಳಿದಿರಬೇಕು. ಇದರ ಅರ್ಥ ಮಕ್ಕಳನ್ನು ಬಡತನದಲ್ಲಿ ಬೆಳೆಸಬೇಕೆಂದಲ್ಲ. ಆದರೆ ಅವರಿಗೆ ಬಡತನದ ಪರಿಚಯವೂ ಇರಲಿ.

8. ಮಕ್ಕಳು ಪ್ರೌಢಾವಸ್ಥೆಯಲ್ಲಿದ್ದರೆ, ತಾರುಣ್ಯತಲ್ಲಣಗಳು (Teenage problem) ಅವರನ್ನು ಕಾಡಬಹುದು. ನಾಜೂಕಾದ ಈ ಹಂತವನ್ನು ದಾಟುವಲ್ಲಿ ಹೆತ್ತವರ ಸಹಾಯ, ಮಾರ್ಗದರ್ಶನಗಳಿರಲಿ. ಈ ಹಂತದಲ್ಲಿ, ಆರೋಗ್ಯಕರ ಲೈಂಗಿಕಶಿಕ್ಷಣವೂ ಅವಶ್ಯಕ. ಅಂತೆಯೇ ನಿಮ್ಮ ಮತ್ತು ಮಕ್ಕಳ ನಡುವಿನ ತಲೆಮಾರುಅಂತರಗಳನ್ನು (Generation gap) ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಾಗದಿದ್ದರೂ, ಅಂತರವನ್ನು ಕಡಿಮೆಗೊಳಿಸುವ ಪ್ರಯತ್ನವಿರಲಿ. ಮಕ್ಕಳು ಬೆಳೆಯುತ್ತಿರುತ್ತಾರೆ; ಆದರೆ ಹೆತ್ತವರು ಬೆಳೆಯುವುದಿಲ್ಲ ಹಾಗೂ ತಮ್ಮ Parenthood ನಿಂದ ಬದಲಾಗುವುದೇ ಇಲ್ಲ. ಮಕ್ಕಳು ಯಾವಾಗಲೂ ತಪ್ಪು ಮಾಡುತ್ತಿರುತ್ತಾರೆ; ಅವರಿಗೆ ಬುದ್ಧಿವಾದ ಹೇಳುವುದೇ ತಮ್ಮ ಹಕ್ಕು, ಹಿರಿತನವೆಂಬ ತಪ್ಪು ಕಲ್ಪನೆ ಇವರಲ್ಲಿ ಇರುತ್ತದೆ. ಈ ಹಿರಿತನ ಶಾಶ್ವತವಾದ ಪದವಿಯಲ್ಲ. ಪೋಷಕರೂ ಕಾಲ ಕಾಲಕ್ಕೆ ಬದಲಾಗಬೇಕು. ಮಕ್ಕಳಿಗೂ ಅವರದೇ ಆದ ಒಂದು Space ಇರುತ್ತದೆ. ಇದನ್ನು ಹೆತ್ತವರು ಆಕ್ರಮಿಸಬಾರದು; ಅದರೊಳಗೆ ಮೂಗು ತೂರಿಸಬಾರದು. ಮಕ್ಕಳು ದೊಡ್ಡವರಾಗುತ್ತಿದ್ದಂತೆ ಹೆತ್ತವರ ಪಾಲಕತ್ವವೂ ಅಂತ್ಯವಾಗುತ್ತದೆ. ಅಂತ್ಯವಾಗಲೇ ಬೇಕು. ಮಕ್ಕಳು ಚಿಕ್ಕವರಿದ್ದಾಗ ಹೆತ್ತವರು ಹೇಗೆ ವರ್ತಿಸುತ್ತಿದ್ದರೋ ಅವರು ದೊಡ್ಡವರಾದ ಮೇಲೂ ಹಾಗೆಯೇ ವರ್ತಿಸಿದರೆ ಸಮಸ್ಯೆಗಳು ಆರಂಭ.

9. ಯಾವತ್ತೂ ನಿಮ್ಮ ಮಕ್ಕಳ ಶಿಕ್ಷಕರ ಜೊತೆ ಸಹಕರಿಸಿ. ಹೆತ್ತವರು ಮತ್ತು ಶಿಕ್ಷಕರು ಕೈ ಜೋಡಿಸಿದರೆ ಎಂತಹ ತುಂಟ, ಅಸಾಧ್ಯ

**28ನೇ ಪುಟದಲ್ಲಿ ಮುಂದುವರಿದಿದೆ**

# ನಮ್ಮ ಹೆಮ್ಮೆಯ ಇಸ್ರೋ ಉಪಗ್ರಹ ಕೇಂದ್ರ

ನಮ್ಮದಿದು, ನಮ್ಮದಿದು,
ಇಸ್ರೋ ಉಪಗ್ರಹ ಕೇಂದ್ರವಿದು
ಭಾರತೀಯರ ಬಾಹ್ಯಾಕಾಶವ ತಿಳಿವ ಇಲಾಖೆಯಿದು.
ನಾನಾ ಊರಿನ, ನಾನಾ ಭಾಷೆಯ ಕಾರ್ಮಿಕರಿಲ್ಲಿಹರು
ಒಂದೇ ಮಾತೆಯ ಮಕ್ಕಳ ಹಾಗೆ ಒಮ್ಮತದಿಂದಿಹರು
ನಮ್ಮದು ಯೋಜನೆ, ನಮ್ಮಯ ಸಾಧನೆ
ವಿಜ್ಞಾನಕೆ ಮಾಡುವ ಆರಾಧನೆ
ಅವಿರತ ಮಾಡುವ ಈ ಸಂಶೋಧನೆ
ದೇಶದ ಪ್ರಗತಿಗೆ ಸಲ್ಲುವ ಪ್ರಾರ್ಥನೆ
ಪ್ರಥಮದಿ ಏರಿತು ಇಸ್ರೋ ಬಾವುಟ,
ವಿಜಯದ ಸಾಧಕ ಆರ್ಯಭಟ
ಬಾಹ್ಯ ವೈಜ್ಞಾನಿಕ ದಾಹವ ತಣಿಸಲು ಆಯಿತು
ಇದುವೇ ಅಮೃತ ಘಟ
ಭಾಸ್ಕರ, ಏಪಲ್, ರೋಹಿಣಿ, ಇನ್ಸಾಟ್
ಹಾರಿತು ಮೇಲಕೆ ಸರದಿಯಲಿ
ಐಸಾಕ್ ಕೀರ್ತಿಯ ಐಸಿರಿಯಾಯಿತು
ಐ.ಆರ್.ಎಸ್. ಗಗನದಲಿ
ವಿಧ ವಿಧ ನವ ವಿಧ ಸ್ಯಾಟಲೈಟು,
ಹಾರಿತು ಜಯದಲಿ ಯಜು ಸ್ಯಾಟು
ಗಗನದಿ ಮಾಡುವ ಕೆಲಸವು ರೋಚಕ
ವೈಜ್ಞಾನಿಕರಿಗೆ ನಿತ್ಯದ ಸೂಚಕ
ಮಂಗಳವಾರವೇ ಮಂಗಳನೆಡೆಗೆ
ಜಿಗಿಯಿತು ಪ್ರಥಮ ಸ್ಯಾಟಲೈಟು
ಮುನ್ನೂರು ದಿನಗಳು ಸಾಗುತ ಬೀಗಿತು,
ನೀಡುತ ವಿಜಯದ ''ಮಾಮ್'' ಸ್ವೀಟು
ಮುಂದಿನ ಯೋಜನೆ, ಚಂದ್ರಗೆ ಸಾಧನೆ
ಜಯತರಲೆಂಬುದೆ ದೇವಗೆ ಪ್ರಾರ್ಥನೆ
ಇಷ್ಟಕೆ ನಿಲ್ಲೆವು, ಕಷ್ಟವ ಬಲ್ಲೆವು ಮುನ್ನುಗ್ಗುವ ಛಲ ಪಡೆದಿಹೆವು
ವಿಶ್ವದಿ ಇಸ್ರೋ ರಾರಾಜಿಸಲು ಸಮರ್ಥ ಸಾಧನೆ ಗೈಯುವೆವು
ನಾಟಕ, ನರ್ತನ, ವಾದನ, ಗಾಯನ ಕಲಾರಾಧಕರು ಇಲ್ಲಿಹರು
ಜೊತೆಯಲಿ ಕಾರ್ಮಿಕ ಹಿತ ಸಂಘಗಳು
ಉತ್ತಮ ಹೆಸರನು ಗಳಿಸಿಹವು
ಏನೇ ಬರಲಿ, ಒಗ್ಗಟ್ಟಿರಲಿ ಎನ್ನುತ ಕೆಲಸವ ಮಾಡುವೆವು
ಇಸ್ರೋ ಸಂಸ್ಥೆಗೆ ಯಶವನು ತರಿಸುತ
ಭಾರತ ಮಾತೆಯ ಪೂಜಿಪೆವು

ರಚನೆ : **ಟಿ.ಎಸ್. ನಾಗರಾಜ ಉಪಾಧ್ಯಾಯ,**
ವಾಮಂಜೂರು (ಇಸ್ರೋ ರಿಟೈರ್ಡ್)

# ಸುದ್ದಿ ಸಂಗ್ರಹ

★ ಉಡುಪಿಯ ಅಷ್ಟಮಠಗಳಲ್ಲೊಂದಾದ ಪೇಜಾವರ ಮಠದ ಮೂವತ್ತೊಂದನೇ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ವಿಶ್ವಜ್ಞತೀರ್ಥರ ಆರಾಧನಾ ಮಹೋತ್ಸವವನ್ನು ಶ್ರೀಕೃಷ್ಣಪ್ರಜ್ಞ ಪ್ರತಿಷ್ಠಾನದ ಆಶ್ರಯದಲ್ಲಿ ಉಡುಪಿ ಹಾಗೂ ಬೆಂಗಳೂರು ನಗರಗಳಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಉಡುಪಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮತಿ ವಾರಿಜಾಕ್ಷಿ ಆರ್. ಭಟ್ ಅವರ ಭಕ್ತಿಗೀತೆಗಳು, ಶ್ರೀ ವಿದ್ವಾನ್ ಹರಿಪ್ರಸಾದ್ ಭಟ್ ಹೆರ್ಗ ಇವರಿಂದ ಶ್ರೀ ಶ್ರೀಗಳವರ ಸ್ಮರಣೆ ಮತ್ತು ಧಾರ್ಮಿಕ ಪ್ರವಚನ ಹಾಗೂ ವಿದ್ವಾನ್ ಪಾಡಿಗಾರು ಮುರಳೀಧರ ಆಚಾರ್ಯರಿಂದ ಪೂಜೆ, ಮಂಗಳಾರತಿ ನಡೆದು ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.

ಅಂತೆಯೇ ಬೆಂಗಳೂರಿನಲ್ಲಿ ವಿದ್ವಾನ್ ಶ್ರೀಕಾಂತ ಬಾಯರಿ ಮತ್ತು ವಿದ್ವಾನ್ ಕೃಷ್ಣರಾಜ ತಂತ್ರಿಯವರುಗಳಿಂದ ಶ್ರೀಶ್ರೀಗಳವರ ತಪಃಶಕ್ತಿ, ಮತ್ತು ಸಾಧನೆಗಳ ಬಗ್ಗೆ ಹಾಗೂ 'ಶ್ರೀಮದ್ ಭಾಗವತ ಸಂದೇಶ' ವಿಚಾರಗಳಲ್ಲಿ ಪ್ರವಚನಗಳು ನಡೆದುವು. ಕಾರ್ಯಕ್ರಮದ ಅಂಗವಾಗಿ ಪೂಜೆ, ಮಂಗಳಾರತಿಗಳೊಂದಿಗೆ ಪ್ರಸಾದ ವಿತರಣೆಯನ್ನು ನಡೆಸಲಾಯಿತು.

★ ಬಳಗದ ಕ್ರಿಯಾಶೀಲ ಸದಸ್ಯರಾದ ಶ್ರೀ ಟಿ.ಎಸ್. ಗಣೇಶ್ ಉಪಾಧ್ಯಾಯರವರು ಬೆಂಗಳೂರಿನ ರಾಜಾ ಗಾರ್ಡನೀಯಾನಲ್ಲಿ ನೂತನವಾಗಿ ನಿರ್ಮಿಸಿದ 'ಸುಮುಖ'ದ ಗೃಹ ಪ್ರವೇಶ ಸಮಾರಂಭವು ದಿನಾಂಕ 26.9.2014ರಂದು ವಿಜೃಂಭಣೆಯಿಂದ ನೆರವೇರಿದೆ.

★ ಆನಂದ ಬಳಗದ ಸದಸ್ಯರಾಗಿದ್ದು ವಿವಿಧ ಕ್ಷೇತ್ರಗಳಲ್ಲಿ ಸಮಾಜಸೇವೆಗೈದ ಖ್ಯಾತ ವಾಗ್ಮಿ ಡಾ|| ಕೆ.ಪಿ. ಪುತ್ತೂರಾಯ ರಿಗೆ ಕೆಳಗಿನ ಎರಡು ಪ್ರಶಸ್ತಿಗಳು ಲಭಿಸಿವೆ.

1) ''ವಿಶ್ವೇಶ್ವರಯ್ಯ ರಾಷ್ಟ್ರೀಯ ಸದ್ಭಾವನಾ'' ಪ್ರಶಸ್ತಿಯನ್ನು 27-9-14 ರಂದು ಬೆಂಗಳೂರಿನ ನಯನ ಮಂದಿರದಲ್ಲಿ ಶಾಸಕರಾದ ಉಗ್ರಪ್ಪನವರು ಹಾಗೂ ಪಂಚಮಶಾಲೀ ಮಠದ ಸ್ವಾಮೀಜಿಯವರು ಪ್ರದಾನ ಮಾಡಿದರು. 2) ಉಡುಪಿಯ ಪರ್ಯಾಯ ಮಠಾಧೀಶರಾದ ಶ್ರೀ ಶ್ರೀ ವಿದ್ಯಾವಲ್ಲಭ ಸ್ವಾಮೀಜಿಯವರಿಂದ ತಾ.30.9.2014 ರಂದು ಉಡುಪಿಯ ಶ್ರೀ ಕೃಷ್ಣಮಠದ ರಾಜಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪುತ್ತೂರಾಯರ ಪ್ರವಚನದ ನಂತರ ''ಶ್ರೀ ಕೃಷ್ಣ ನೃಸಿಂಹಾನುಗ್ರಹ'' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಈ ಎರಡೂ ಪ್ರಶಸ್ತಿಗಳು ಡಾ|| ಪುತ್ತೂರಾಯರ ಬಹುಮುಖ ಪ್ರತಿಭೆಗೆ ಸಂದ ಗೌರವಗಳು.

★ ಆನಂದ ಬಳಗದ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿ ಪ್ರಸಕ್ತ ಸಾಲಿನ ಕಾರ್ಯದರ್ಶಿಯಾಗಿರುವ ಶ್ರೀ ವೈ. ರಾಧಾಕೃಷ್ಣ ಮತ್ತು ಶ್ರೀಮತಿ ಶೋಭಾ ದಂಪತಿಗಳ ಸುಪುತ್ರಿ ಚಿ| ಸೌ| ಸುಮಾ ಆರ್.ರವರ ವಿವಾಹವು ಶ್ರೀಮತಿ ಗೀತಾ ಗಜೇಂದ್ರ ಮತ್ತು ದಿ. ಶ್ರೀ ಗಜೇಂದ್ರರ ಪುತ್ರ ಚಿ| ವಿನಯಕುಮಾರ್ ಜಿ.ರವರೊಂದಿಗೆ ದಿನಾಂಕ 27.08.2014ರಂದು ನಗರದ ರಾಜರಾಜೇಶ್ವರಿ ನಗರದ ಶ್ರೀ ಪದ್ಮಾವತಿ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನೆರವೇರಿತು. ದಿನಾಂಕ 26.8.2014ರಂದು ನಡೆದ ಆರತಕ್ಷತೆ ಹಾಗೂ 29.8.2014ರಂದು ನಡೆದ ಬೀಗರ ಔತಣ ಸಮಾರಂಭಕ್ಕೂ ಅನೇಕ ಅತಿಥಿಗಳು ಆಗಮಿಸಿದ್ದು ನೂತನ ದಂಪತಿಗಳಿಗೆ ಶುಭ ಕೋರಿದರು. ನವದಂಪತಿಗಳ ಭವಿಷ್ಯವು ಉಜ್ವಲವಾಗಿರಲೆಂದು ಆನಂದಬಳಗವು ಹಾರೈಸುತ್ತದೆ.

## ದಕ್ಷಿಣ ಕನ್ನಡ ಸಂಘದಿಂದ ಪ್ರತಿಭಾ ಪುರಸ್ಕಾರ

ದಕ್ಷಿಣ ಕನ್ನಡಿಗರ ಸಂಘದ ಆಶ್ರಯದಲ್ಲಿ ದಿನಾಂಕ 21.9.2014 ರಂದು ಹೋಟೆಲ್ ಅಜಂತಾ ಸಭಾಂಗಣದಲ್ಲಿ ಪ್ರತಿಭಾ ಪುರಸ್ಕಾರ ಮತ್ತು ವಿಸ್ಮಯ ತಂಡದಿಂದ ಅಮೋಘವಾದ ಜಾದೂ ಪ್ರದರ್ಶನ ನಡೆಯಿತು. ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯು ಸಂಜೆ 3 ರಿಂದ ಅದೇ ಆವರಣದಲ್ಲಿ ನಡೆದು, ಮುಂದಿನ ಅವಧಿಯ ಕಾರ್ಯಕಾರಿ ಸಮಿತಿಗೆ ಹದಿನೈದು ಸದಸ್ಯರು ಅವಿರೋಧವಾಗಿ ಆಯ್ಕೆಯಾದರು. ಶ್ರೀ ಬಾ.ರಾಮಚಂದ್ರ ಉಪಾಧ್ಯರವರನ್ನು ನೂತನ ಅಧ್ಯಕ್ಷರನ್ನಾಗಿ ಸಭೆಯಲ್ಲಿ ಆಯ್ಕೆ ಮಾಡಲಾಯಿತು.



ಆನಂತರ ನಡೆದ ಪ್ರತಿಭಾ ಪುರಸ್ಕಾರದಲ್ಲಿ 2014ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕಗಳನ್ನು ಪಡೆದ ದಕ್ಷಿಣ ಕನ್ನಡ ಮೂಲದ ಸುಮಾರು 50 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಡಾ.ಕೆ.ಸಿ. ಬಲ್ಲಾಳ್ ಸ್ವಾಗತಿಸಿದರೆ, ಪ್ರೊ.ಕೆ.ಪಿ. ಪುತ್ತೂರಾಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಸಕ್ತ ಅಧ್ಯಕ್ಷರಾದ ಶ್ರೀ ಯು.ಬಿ. ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯ, ಶ್ರೀ ವಾಸುದೇವ ಅಡಿಗ ಮತ್ತು ಶ್ರೀ ರಾಮಚಂದ್ರ ಉಪಾಧ್ಯ ವೇದಿಕೆಯಲ್ಲಿದ್ದರು. ಕಾರ್ಯದರ್ಶಿ ಶ್ರೀ ವೈ.ಜಯಂತರಾವ್ ಧನ್ಯವಾದ ಅರ್ಪಿಸಿದರೆ, ಶ್ರೀ ಎಂ.ಕೆ. ಗುರುಮೂರ್ತಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಆನಂತರ ನಡೆದ ಖ್ಯಾತ ವಿಸ್ಮಯ ತಂಡದ ಶ್ರೀ ಕುದ್ರೋಳಿ ಗಣೇಶ್ ಮತ್ತು ಸಹಕಲಾವಿದರ ಅಮೋಘವಾದ ಜಾದೂ ಪ್ರದರ್ಶನವು ಸಭಿಕರ ಮನರಂಜಿಸಿತು. ಭರ್ಜರಿಯಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಮೈತ್ರಿ ಸಮೂಹದಿಂದ ಪ್ರತಿಭಾ ಪುರಸ್ಕಾರ ಹಾಗೂ ಸಾಂಸ್ಕೃತಿಕ ಸಂಜೆ

ಬೆಂಗಳೂರಿನ ಸಮಾಜ ಸೇವಾ ಸಂಸ್ಥೆಯಾದ ಮೈತ್ರಿ ಸಮೂಹದ ವಾರ್ಷಿಕ ಸರ್ವಸದಸ್ಯರ ಸಭೆ ನಡೆದು, ನೂತನ ಕಾರ್ಯಕಾರಿ ಸಮಿತಿ ಚುನಾಯಿಸಲ್ಪಟ್ಟಿತು. ಶ್ರೀಯುತ ಹೆಚ್.ವಿ. ಗೌತಮ್‌ರವರು ಅಧ್ಯಕ್ಷರಾಗಿಯೂ, ಕೋಟೇಶ್ವರ ಸೂರ್ಯನಾರಾಯಣರಾವ್‌ರವರು ಹಿರಿಯ ಉಪಾಧ್ಯಕ್ಷರಾಗಿಯೂ, ಪ್ರಕಾಶ ವೈದ್ಯ ಉಪಾಧ್ಯಕ್ಷ, ಸತ್ಯಮೂರ್ತಿ ಕಾರ್ಯದರ್ಶಿ, ಹೆಚ್.ಎನ್. ಕೃಷ್ಣಮೂರ್ತಿ ಕೋಶಾಧಿಕಾರಿ ಹಾಗೂ ಒಟ್ಟು 50 ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರು ಮೂರು ವಿಭಾಗದಿಂದ ಆಯ್ಕೆಯಾದರು. ಮಹಿಳಾ ವಿಭಾಗಕ್ಕೆ ಶಾರದಾ ರಾಘವೇಂದ್ರ, ಅಧ್ಯಕ್ಷಿಣಿ, ಶ್ರೀಮತಿ ಗೀತಾ ಸುಂದರ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಯುವ ವಿಭಾಗಕ್ಕೆ ಕೆ. ರಾಮಮೂರ್ತಿ, ಅಧ್ಯಕ್ಷ ಜಿ. ವೆಂಕಟೇಶ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ 53 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಸಮಾರಂಭದ ಮುಖ್ಯ ಅತಿಥಿಯಾಗಿ ಡಾ. ಸದಾನಂದ ಮಯ್ಯ ಮತ್ತು ಡಾ. ಪ್ರೇಮಾ ಹೆಚ್.ಎನ್. ಆಗಮಸಿದ್ದರು. ಇದೇ ಸಂದರ್ಭದಲ್ಲಿ ಸಾಮಾಜಿಕ ಕಾರ್ಯಕರ್ತೆ ಭಾಗೀರಥಮ್ಮನವರನ್ನು ಗೌರವಿಸಲಾಯಿತು. ತತ್ಸಂಬಂಧ ನಡೆದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಹಿಳಾ ವಿಭಾಗದವರು ಯಶಸ್ವಿಯಾಗಿ ನಡೆಸಿಕೊಟ್ಟರು.

## ಶ್ರೇಷ್ಠ

★ ಹಾಲುಗಳ ಪೈಕಿ ಅತ್ಯಂತ ಶ್ರೇಷ್ಠವಾದ ಹಾಲು, ಅಮ್ಮನ ಎದೆಯ ಹಾಲು - ಏಕೆಂದರೆ, ಅದರಲ್ಲಿ ಸತ್ವವೂ ಇದೆ, ಸತ್ಯವೂ ಇದೆ.

★ ಮನೆಗಳಲ್ಲಿ ಅತ್ಯಂತ ಇಷ್ಟವಾದ ಮನೆ ನಮ್ಮ ತವರು ಮನೆ - ಏಕೆಂದರೆ ಅಲ್ಲಿ ಅಕ್ಕರೆಯೂ ಇದೆ, ಪ್ರೀತಿಯ ಸಕ್ಕರೆಯೂ ಇದೆ.

★ ಭಾಷೆಗಳಲ್ಲಿ ಅತ್ಯಂತ ಹತ್ತಿರವಾದ ಭಾಷೆ ನಮ್ಮ ಮಾತೃ ಭಾಷೆ - ಏಕೆಂದರೆ ಅದರಲ್ಲಿ ಆನಂದವೂ ಇದೆ, ಆತ್ಮೀಯತೆಯೂ ಇದೆ.

★ ಸಂಬಂಧಗಳಲ್ಲಿ ಅತ್ಯಂತ ಹತ್ತಿರದ ಸಂಬಂಧ, ಹೆಚ್ಚವರ ಸಂಬಂಧ - ಏಕೆಂದರೆ ಅದರಲ್ಲಿ ಮಮತೆಯೂ ಇದೆ, ಮಿಡಿತವೂ ಇದೆ.

★ ದೇಶಗಳಲ್ಲಿ ಅತ್ಯಂತ ಪ್ರಿಯವಾದ ದೇಶ ನಾವು ಹುಟ್ಟಿದ ದೇಶ - ಏಕೆಂದರೆ ಅಲ್ಲಿ ಭಾವವೂ, ಇದೆ; ಭಕ್ತಿಯೂ ಇದೆ.

ಕೃಪೆ : 'ನುಡಿಮುತ್ತುಗಳು' - ಡಾ. ಕೆ.ಪಿ. ಪುತ್ತೂರಾಯ

26ನೇ ಪುಟದಿಂದ ಮುಂದುವರಿದುದು

ಮಗುವನ್ನೂ ಸರಿದಾರಿಗೆ ತರಬಹುದು. ಅಂತೆಯೇ ಮಕ್ಕಳ ಬಗ್ಗೆ ನಿರ್ಲಕ್ಷ್ಯ ಬೇಡ. ಅವರ ಗೆಳೆಯರ ಬಗ್ಗೆ ಅವರ ಚಲನ-ವಲನಗಳ ಬಗ್ಗೆ ಹವ್ಯಾಸಗಳ ಬಗ್ಗೆ ಒಂದು ಕಣ್ಣಿರಲಿ. ಇದು ಸಂಶಯದ ಕಣ್ಣಾಗಿರಬಾರದು; ರಕ್ಷೆಯ ಕಣ್ಣಾಗಿರಬೇಕು. ಬಿಡಿ ಖರ್ಚಿಗೆಂದು (Pocket money) ವಿಪರೀತ ಹಣ ಕೊಡಬೇಡಿ. ಕೊಟ್ಟ ಹಣದ ಬಗ್ಗೆ ಲೆಕ್ಕ ಕೇಳಿ. ಮಕ್ಕಳು pencilನಂತೆ ತಪ್ಪು ಮಾಡುತ್ತಲೇ ಇರುತ್ತಾರೆ. ಆದರೆ ಹೆತ್ತವರು ಮಾತ್ರ Rubberನಂತೆ ಅವರ ತಪ್ಪುಗಳನ್ನು ತಿದ್ದುತ್ತಲೇ ಇರಬೇಕಾಗುತ್ತದೆ.

10. ಕೊನೆಯದಾಗಿ ಮಕ್ಕಳಿಗೆ ಮಹಾನ್ ಪುರುಷರ ಜೀವನ ಚರಿತ್ರೆ, ನೀತಿಕತೆಗಳನ್ನು ಹೇಳಿ (ಆದರೆ ನಿಮಗೆ ಗೊತ್ತಿರಬೇಕಲ್ಲ!) ಅವರಲ್ಲಿ ನಾಗರಿಕ ಪ್ರಜ್ಞೆ, ರಾಷ್ಟ್ರಪ್ರೇಮವನ್ನು ಹುಟ್ಟುಹಾಕಿ, ಜೀವನದಲ್ಲಿ ಪರಿಶ್ರಮ ಪಟ್ಟು ಹಂತಹಂತವಾಗಿ ಮೇಲೆ ಬರೋದರ ಮಹತ್ವ ಮತ್ತು ಆನಂದವನ್ನು ತಿಳಿ ಹೇಳಿ. ಜಾತಿಬಲ, ಧನಬಲ, ಇಲ್ಲವೇ ಸಂಪರ್ಕ ಬಲಗಳಿಗಿಂತಲೂ ಪ್ರತಿಭೆಯೇ (Merit) ಅವರ ಸೊತ್ತಾಗಲಿ, ಸಂಪತ್ತಾಗಲಿ, ಏನಾದರೂ ಮಾಡಿ ಹೇಗಾದರೂ ಮಾಡಿ ಮಕ್ಕಳಿಗೆ ದುಡ್ಡು ಆಸ್ತಿ ಮಾಡಿಡಬೇಡಿ. ಸಾಕಷ್ಟು ಶಿಕ್ಷಣವನ್ನು ಕೊಟ್ಟು, ಸಂಸ್ಕಾರವನ್ನು ತುಂಬಿದರೆ, ಅವರೇ ನಿಮ್ಮ ಬದುಕಿನ ದೊಡ್ಡ ಆಸ್ತಿ ಆಗುತ್ತಾರೆ. ಮಕ್ಕಳಿಂದ ಗೌರವವನ್ನು ಸಂಪಾದಿಸಿಕೊಳ್ಳಬೇಕೇ ಹೊರತು ಕೇಳಿ ಪಡೆದುಕೊಳ್ಳಬಾರದು (Command, not demand respect) ಇದು ನೀವು ಓರ್ವ ಹೆಮ್ಮೆ ಪಡುವ ಹೆತ್ತವರಾದಾಗ (Role model) ಮಾತ್ರ ಸಾಧ್ಯವಾಗುತ್ತದೆ. ಎಲ್ಲದಕ್ಕೂ ಸಹನೆ, ತಾಳ್ಮೆ ಇರಲಿ ಹಾಗೂ ನಿಮಗೊಂದು ಮಕ್ಕಳಿಗೊಂದು ಭಿನ್ನಭಿನ್ನವಾದ ಮಾಪನ (Double Standard) ಇಲ್ಲದಿರಲಿ. ನಿಮ್ಮ ಮಕ್ಕಳನ್ನು ಮುಂದೆ ಏನೋ ಮಾಡೋದಕ್ಕೆ ಮೊದಲು ಓರ್ವ ಒಳ್ಳೆಯ ವ್ಯಕ್ತಿಯನ್ನಾಗಿ (A good human being) ಮಾಡಿ. ಆಗ ಮಾತ್ರ ಅವರಿಗೂ ಒಳಿತು. ಮನೆಗೂ, ಸಮಾಜಕ್ಕೂ, ದೇಶಕ್ಕೂ ಕ್ಷೇಮ. ಮಕ್ಕಳ ಅತೀ ದೊಡ್ಡ ಹಿತಶತ್ರುಗಳೆಂದರೆ ಅವರು ಹೇಳಿದಂತೆ ಕುಣಿಯುವ, ಅವರು ಕೇಳಿದ್ದನ್ನೆಲ್ಲಾ ತಕ್ಷಣ ತಂದುಕೊಡುವ, ಅವರ ತಪ್ಪುಗಳನ್ನು ಮುಚ್ಚಿಡುವ, ತಪ್ಪುಗಳನ್ನು ಹೇಳಿದವರ ಮೇಲೆಯೇ ಸಿಟ್ಟಾಗುವ, ಅವರ ಪರವಾಗಿಯೇ ಸದಾ ವಾದಿಸುವ ಹಾಗೂ ಅವರಲ್ಲಿರುವ ಕೊರತೆಗಳನ್ನು ನೋಡಿಯೂ ನೋಡದಂತಿರುವ - ಅವರ ಹೆತ್ತವರು! ಹೀಗಾಗಲು ಕಾರಣ ಕುರುಡು ಪ್ರೀತಿಗೆ ಕಣ್ಣುಗಳಿಲ್ಲ, ಕಿವಿಗಳಿಲ್ಲ, ಮಕ್ಕಳ ಮೇಲೆ ಮೋಹವಿರಲಿ, ಆದರೆ ಕುರುಡು ಮೋಹ ಬೇಡ.

ಇಷ್ಟೆಲ್ಲಾ ಮಾಡಿದ ಮೇಲೆ ''ನಿಮ್ಮ ಮಕ್ಕಳು ನಿಮ್ಮಿಂದಾಗಿಯೇ ಹುಟ್ಟಿದರೇ ಹೊರತು ನಿಮಗಾಗಿಯೇ, ನಿಮಗೆಂದೇ ಹುಟ್ಟಿದವರು'' ಎಂಬ ಭ್ರಮೆ ಇರದಿರಲಿ. ಬಾಲ್ಯದಲ್ಲಿ ಮಕ್ಕಳಿಗೆ ಹೆತ್ತವರ ಆಶ್ರಯ ಮತ್ತು ವೃದ್ಧಾಪ್ಯದಲ್ಲಿ ಹೆತ್ತವರಿಗೆ ಮಕ್ಕಳ ಆಸರೆ ಅವಶ್ಯವಾಗುತ್ತದೆ. ಇವೆರಡರಲ್ಲೂ ಚ್ಯುತಿ ಬಾರದಿರಲಿ.

- ಡಾ|| ಕೆ.ಪಿ. ಪುತ್ತೂರಾಯ

# ದಕ್ಷಿಣ ಬೆಂಗಳೂರಿನ ಅತಿ ದೊಡ್ಡ

ವಿರಾಮ ತಾಣ, ಈಗ ನಿಮಗಾಗಿ ತೆರೆದಿದೆ.

ರಾಯಲ್ ಮೀನಾಕ್ಷಿ ಮಾಲ್

Come Enjoy Maadi!




## ರಾಯಲ್ ಮೀನಾಕ್ಷಿ ಮಾಲ್ ದಕ್ಷಿಣ ಬೆಂಗಳೂರಿನ ಅತಿ ದೊಡ್ಡ ಅತ್ಯುತ್ತಮವಾದ ಏಕೀಕೃತ, ಶಾಪಿಂಗ್ ಹಾಗೂ ಮನೋರಂಜನೆ ಕೇಂದ್ರ

- 4.3 ಲಕ್ಷ ಚ.ಅಡಿ ವಿಸ್ತೀರಣದೊಂದಿಗೆ 850 ಕಾರ್ ನಿಲ್ಲಿಸಲು ಸ್ಥಳ, ದಕ್ಷಿಣ ಬೆಂಗಳೂರಿನ ಐಟಿ ವಲಯಕ್ಕೆ ಬಹಳ ಸಮೀಪದಲ್ಲಿದೆ.
- ಜೆ.ಪಿ.ನಗರ, ಬಿ.ಟಿ.ಎಂ. ಲೇಔಟ್, ಜಯನಗರ, ಬನಶಂಕರಿ ಮುಂತಾದ ನಿವಾಸಗಳಿರುವ ಬಡಾವಣೆಗಳಿಗೆ ಸಮೀಪದಲ್ಲಿದೆ.
- ಉದ್ದೇಶಿಸಲಾದ ಮಾನೋ ರೈಲ್ ನಿಲ್ದಾಣಕ್ಕೆ ಸಮೀಪದಲ್ಲಿದೆ.
- ಸೌಕರ್ಯಗಳು ಅಂತರರಾಷ್ಟ್ರೀಯ ಗುಣಮಟ್ಟದಾಗಿರುತ್ತವೆ.

**The brand mix includes:** • Cinepolis • Hyper City • Max • Croma • Reliance Timeout • Reliance Trends • Amoeba • Aharam-The Food Court • KFC, McDonald's • TGIF • Louis Philippe • Allen Solly • Reebok • Woodlands • Levi's • Wrangler • Lee • VIP Luggage • Mother Earth • Costa Coffee • Barista • FabIndia • Health & Glow • Nike • Rockport • Van Heusen • Swensens and other leading national and international brands/retail outlets.

**VISHALA INDIA COMMERCIAL DEVELOPERS PVT. LTD.,** No. E1/16, 1st Floor, 1st Cross, Syndicate Bank Colony Bannerghatta Road, Bangalore 560 076. Tel: 26487299, Fax: 26487300

**E-mail: vishalaindia@gmail.com, www.vishalaindia.com, www.royalmeenakshimall.com**

Bhruguvani (July - September 2014) Regd. with RNI under No.KARKAN/2012/45587 No. of pages : 40 (36+4)




If undelivered please return to:
**Ananda Balaga**
Jeevana Buildings, 2nd Floor
11, Kumara Park East, Bangalore - 560 001

Published by Sri P.S. Bagilthaya, President, Ananda Balaga, Bangalore - 560 001 Printed by Omkar Offset Printers, Bangalore - 02